
ಎಪ್ರಿಲ್ 2010

ರೂ. 10/-

# ಯುಗರಶ್ಮಿ

## ತ್ರೈಮಾಸಿಕ



- ಪರಮ ದಯಾವಂತನ ಭಕ್ತದಾಸರ ಗುಣಲಕ್ಷಣಗಳು
- ಮುಹಮ್ಮದ್ ಪೈಗಂಬರ್ ಮುಸ್ಲಿಮೇತರ ವಿದ್ವಾಂಸರ ದೃಷ್ಟಿಯಲ್ಲಿ
- ಇಸ್ಲಾಮ್‌ನಲ್ಲಿ ಪರ್ದಾ ಸಂಪ್ರದಾಯ

ನಾವು ನಮ್ಮ ಸಂದೇಶವಾಹಕರನ್ನು ನಿರಂತರ ಕಳುಹಿಸುತ್ತಾ ಇದ್ದೆವು. ಪ್ರತಿಯೊಂದು ಜನತೆಯ ಬಳಿಗೆ ಅವರ ಸಂದೇಶವಾಹಕ ಬಂದಾಗಲೆಲ್ಲ ಅವರು ಆ ಸಂದೇಶವಾಹಕನನ್ನು ಸುಳ್ಳುಗಾರನನ್ನಾಗಿ ಮಾಡಿದರು. ಆಗ ನಾವು ಆ ಜನಾಂಗಗಳನ್ನು ಒಂದರ ಬೆನ್ನಿಗೆ ಇನ್ನೊಂದರಂತೆ ನಾಶ ಮಾಡಿದೆವು ಮತ್ತು ಅವರನ್ನು ಕೇವಲ ಕಥೆಗಳಾಗಿ ಮಾಡಿಬಿಟ್ಟೆವು. ಅವಿಶ್ವಾಸಿಗಳಾದ ಜನರಿಗೆ ಶಾಪ.

ಪವಿತ್ರ ಖುರ್‌ಆನ್ (23 : 45)

10-23-1008/1ನೇ ಮಹಡಿ, ಅನ್ಸಾರಿ ರಸ್ತೆ, ಬಂದರ್, ಮಂಗಳೂರು - 575 001

ಬಿಡಿ ಪ್ರತಿ : ರೂ. 10/- ವಾರ್ಷಿಕ ಚಂದಾ : ರೂ. 40/- ಅಂಚೆ ಮೂಲಕ : ರೂ. 50/-

# ಯುಗರಶ್ಮಿ

## ವಿಷಯ ಸೂಚಿಕೆ

ಪುಟ

☆ ಮೈತ್ರಿ ಸಂದೇಶ 1
☆ ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು 2
☆ ಪರಮ ದಯಾವಂತನ ಭಕ್ತದಾಸರ ಗುಣಲಕ್ಷಣಗಳು 3
☆ ಮುಹಮ್ಮದ್ ಪೈಗಂಬರ್(ಸ) ಮುಸ್ಲಿಮೇತರ ವಿದ್ವಾಂಸರ ದೃಷ್ಟಿಯಲ್ಲಿ 10
☆ ಇಸ್ಲಾಮಿನ ಪ್ರಾಥಮಿಕ ಪಾಠಗಳು 25
☆ ಇಸ್ಲಾಮ್‌ನಲ್ಲಿ ಪರ್ದಾ ಸಂಪ್ರದಾಯ 30
☆ ಪ್ರತಿ ಸಮುದಾಯದಲ್ಲೂ ದೇವ ಸಂದೇಶವಾಹಕರು 31
☆ ಬ್ರಿಟಿಷ್ ಸರಕಾರದ ಮುಂದೆ 'ಅಲ್ಲಾಹು'ವಿನ ಸೋಲು!? 32
☆ ಉಲಮಾ ಫತ್ವಾ ಹಾಗೂ ಅಹ್ಮದಿಯಾ ಮುಸ್ಲಿಂ ಜಮಾಅತಿನ ವಿಜಯ 32
☆ ಓದಿದ್ದು 35
☆ ನಬಿ ಚರಿತ್ರೆ 38
☆ ಸಂಪಾದಕರಿಗೆ ಪತ್ರ 39

ಮುಖಪುಟ ಚಿತ್ರ : ಪವಿತ್ರ ಕಅ್‌ಬ, ಮಕ್ಕ

**Statement about ownership and other particulars about the Newspaper**
**Yugarashmi Quarterly**
(Form IV See Rule 8)

| | | |
|---|---|---|
| 1. Place of Publication | : | Mangalore |
| 2. Period of its Publication | : | Quarterly |
| 3. Printer's Name | : | Muhanmmad Yusuf |
| Whether citizen of India | : | Yes |
| Address | : | 10-23-1008/1, 1st Floor , Ansari Road, Bunder, Mangalore - 575 001 |
| 4. Publisher's Name | : | Muhanmmad Yusuf |
| Whether citizen of India | : | Yes |
| Address | : | 10-23-1008/1, 1st Floor , Ansari Road, Bunder, Mangalore - 575 001 |
| 5. Editor's Name | : | Muhanmmad Yusuf |
| Whether citizen of India | : | Yes |
| Address | : | 10-23-1008/1, 1st Floor , Ansari Road, Bunder, Mangalore - 575 001 |
| 6. Name and address of individuals who own the newspaper and partners or shareholders holding more than one percent of the capital | : | Jamath Ahmadiyya "Darussalam" Near Railway Crossing , Pandeshwar, Mangalore - 575 001 |

I, Muhammad Yusuf hereby declare that the particulars given above are true to the best of my knowledge and belief.

Date : 1-4-2010

Sd/-
Muhammad Yusuf

بسم الله الرحمن الرحيم

نحمده ونصلي على رسوله الكريم

# ಯುಗರಶ್ಮಿ

ನಿಗಾವಣೆ : ಮುಹಮ್ಮದ್ ಶಫೀಉಲ್ಲಾಹ್
ಸೌತ್‌ಝೋನಲ್ ಅಮೀರ್,
ಅಹ್ಮದಿಯಾ ಮುಸ್ಲಿಂ ಜಮಾಅತ್, ಕರ್ನಾಟಕ

ಸಂಪಾದಕ : ಮುಹಮ್ಮದ್ ಯೂಸುಫ್

| ಆರಂಭ : 1975 | ಸಂಪುಟ : 27 | ಎಪ್ರಿಲ್ 2010 | ಶಹಾದತ್ 1389 | ಸಂಚಿಕೆ : 1 |
|---|---|---|---|---|

## ಮೈತ್ರಿ ಸಂದೇಶ

ಸ್ನೇಹಿತರೇ, ಹಿಂದೂಗಳೋ ಮುಸ್ಲಿಮರೋ ಆದ ನಾವೆಲ್ಲರೂ ನೂರಾರು ವಿಶ್ವಾಸಾಭಿಪ್ರಾಯ ವೈಪರೀತ್ಯಗಳಿಂದ ಕೂಡಿದವರಾಗಿದ್ದರೂ ಈ ಪ್ರಪಂಚದ ಸೃಷ್ಟಿಕರ್ತನೂ ಪ್ರಭುವೂ ಆದ ಪರಮಾತ್ಮನಲ್ಲಿ ವಿಶ್ವಾಸವಿಡುವ ವಿಷಯದಲ್ಲಿ ಒಂದಾಗುತ್ತೇವೆ. ಹಾಗೆಯೇ ನಾವೆಲ್ಲರೂ ಮನುಷ್ಯರೆಂದು ಮಾತ್ರವಲ್ಲ, ಒಂದೇ ದೇಶದಲ್ಲಿ ವಾಸಿಸುವುದರಿಂದಲೂ ಪರಸ್ಪರ ನೆರೆಕರೆಯವರೆಂಬ ನೆಲೆಯಲ್ಲಿಯೂ ಸಾಮೂಹಿಕವಾಗಿ ಅಭಿವೃದ್ಧಿಗಳಿಗಾಗಿ ಒಂದಾಗುತ್ತೇವೆ. ಆದುದರಿಂದ ನಾವು ಆತ್ಮೀಯತೆಯಿಂದಲೂ ನಿಷ್ಕಳಂಕತೆಯಿಂದಲೂ ಪರಸ್ಪರ ಮಿತ್ರರಂತೆ ವರ್ತಿಸಿ, ಧಾರ್ಮಿಕವೂ ಲೌಕಿಕವೂ ಆದ ಎಲ್ಲಾ ಸಂಕಷ್ಟಗಳಲ್ಲಿ ಅನೋನ್ಯ ಸಹಾನುಭೂತಿಯನ್ನು ಪ್ರಕಟಿಸಿ, ಒಂದೇ ಶರೀರದ ಅವಯವಗಳಂತೆ ಪರಸ್ಪರ ಸಹಕರಿಸಬೇಕಾದುದು ನಮ್ಮ ಕರ್ತವ್ಯವಾಗಿದೆ.

ಪ್ರಿಯ ದೇಶಬಾಂಧವರೇ, ಸಹಾನುಭೂತಿಯ ಉಪದೇಶವನ್ನೀಯದ ಧರ್ಮ ಯಥಾರ್ಥ ಧರ್ಮವಲ್ಲ. ಹಾಗೆಯೇ ಸಹಾನುಭೂತಿಯನ್ನು ತೋರಿಸದ ಮನುಷ್ಯನು ಮನುಷ್ಯನೆಂದು ಕರೆಯಲ್ಪಡಲು ಅರ್ಹನಲ್ಲ. ಪರಮಾತ್ಮನು ತನ್ನ ಅನುಗ್ರಹವನ್ನು ಯಾವೊಂದು ಜಾತಿಯವರಿಗೂ ನೀಡದಿರಲಿಲ್ಲ. ಆರ್ಯಾವರ್ತದ ಪೂರ್ವಿಕರಿಗೆ ಅವನು ಏನೆಲ್ಲಾ ಶಕ್ತಿಗಳನ್ನೂ ಬೋಧನೆಗಳನ್ನೂ ಇತ್ತಿದ್ದನೋ ಅಂತಹ ಶಕ್ತಿಗಳನ್ನೂ ಬೋಧನೆಗಳನ್ನೂ ಅವನು ಅರಬಿಯರಿಗೂ ಪಾರ್ಸಿಯರಿಗೂ ಸಿರಿಯಾದವರಿಗೂ ಚೀನೀಯರಿಗೂ ಜಪಾನಿಯರಿಗೂ ಯುರೋಪ್ಯನರಿಗೂ ಅಮೇರಿಕನರಿಗೂ ಇತ್ತಿರುವನು. ಸಕಲ ಜನಾಂಗಗಳಿಗೂ ದೇವರ ಭೂಮಿಯು ಒಂದು ವಿಶಾಲವಾದ ಪ್ರಾಂಗಣದಂತಿದೆ. ಹಾಗೆಯೇ ಎಲ್ಲರಿಗೂ ಸೂರ್ಯ, ಚಂದ್ರ ಮತ್ತು ನಕ್ಷತ್ರಗಳು ಪ್ರಕಾಶವನ್ನು ಕೊಡುತ್ತವಲ್ಲದೆ ಅವುಗಳೊಡನೆ ದೇವರು ನಿಶ್ಚಯಿಸಿದ ಮತ್ತಿತರ ಕಾರ್ಯಗಳನ್ನು ಸಹ ನಿರ್ವಹಿಸುತ್ತವೆ. ಎಲ್ಲಾ ಜಾತಿಯವರೂ ಪರಮಾತ್ಮನಿಂದ ಸೃಷ್ಟಿಸಲ್ಪಟ್ಟ ವಾಯು, ನೀರು, ಬೆಂಕಿ, ಮಣ್ಣು ಎಂಬಿತ್ಯಾದಿಗಳಿಂದ ಪ್ರಯೋಜನಗಳನ್ನು ಪಡೆಯುತ್ತಾರೆ. ಹಾಗೆಯೇ ಭೂಮಿಯ ಉತ್ಪತ್ತಿಗಳಾದ ಧಾನ್ಯಗಳನ್ನೂ ಮೂಲಿಕೆಗಳನ್ನೂ ಫಲಪುಷ್ಪಾದಿಗಳನ್ನೂ ತಮ್ಮ ಪ್ರಯೋಜನಕ್ಕಾಗಿ ಉಪಯೋಗಿಸುತ್ತಾರೆ. ಪರಮಾತ್ಮನ ಈ ವಿಶಾಲವಾದ ಉದಾರತೆಯು ನಮಗೆ ಕಲಿಸಿಕೊಡುವುದೇನೆಂದರೆ ನಾವು ಸಹ ಮನುಷ್ಯ ಕುಲಕ್ಕೆ ಒಳಿತನ್ನುಂಟುಮಾಡಬೇಕು ಹಾಗೂ ಸಂಕುಚಿತ ಮನೋಭಾವವಾಗಲಿ ಅಸಹಾನುಭೂತಿಯಾಗಲಿ ಇರಬಾರದು.

ಸ್ನೇಹಿತರೇ, ನಮ್ಮಲ್ಲಿ ಯಾವುದಾದರೊಂದು ಸಮುದಾಯದವರು ಪರಮಾತ್ಮನ ಈ ದಿವ್ಯ ಮಾದರಿಯನ್ನು ಗೌರವಿಸದೆಯೂ ಅವನ ಪಾವನ ಗುಣಗಳನ್ನನುಸರಿಸಿ ತಮ್ಮ ನಡೆವಳಿಕೆಗಳನ್ನು ರೂಪಿಸದೆಯೂ ಇದ್ದರೆ ಅವರು ಬೇಗನೇ ನಾಶವಾಗುವರು. ಈ ಉಲ್ಲಂಘನೆಯ ದುಷ್ಪರಿಣಾಮಗಳು ಅವರ ಮೇಲೆ ಮಾತ್ರವಲ್ಲ, ಅವರ ಭಾವಿ ಸಂತಾನಗಳ ಮೇಲೆಯೂ ಉಂಟಾಗುವುವು. ಪರಮಾತ್ಮನ ಗುಣ ವಿಶೇಷಗಳನ್ನು ಗ್ರಹಣ ಮಾಡಿ ತನ್ನ ಜೀವಿತದಲ್ಲಿ ಪ್ರತಿಫಲಿಸುವುದರ ಮೂಲಕ ಮನುಷ್ಯನ ಅಸ್ತಿತ್ವ ಬಾಕಿಯಾಗುವುದು. ಸಮಸ್ತ ಶಾಂತಿಯ ಮೂಲವಾದ ದೈವಿಕ ಗುಣಗಳಿಗನುಸಾರವಾಗಿ ಜೀವನ ಕ್ರಮವನ್ನು ಏರ್ಪಡಿಸುವುದರಲ್ಲಿ ಮನುಷ್ಯನ ಭೌತಿಕ ಮತ್ತು ಆಧ್ಯಾತ್ಮಿಕ ಜೀವನ ಅವಲಂಬಿಸಿದೆ. ಲೋಕಾರಂಭ ಮೊದಲ್ಗೊಂಡು ಎಲ್ಲಾ ರಾಜ್ಯಗಳ ಸತ್ಯಸಂಧರಾದ ದೇವದಾಸರು ಇದನ್ನೇ ಸಾಕ್ಷಿಗೊಳಿಸಿರುವರು.

ಪರಮಾತ್ಮನು ಯಾವುದಾದರೊಂದು ನಿರ್ದಿಷ್ಟ ಜನಾಂಗದವರಲ್ಲಿ ಅಥವಾ ನಿರ್ದಿಷ್ಟ ದೇಶದಲ್ಲಿ ಮಾತ್ರ ಪ್ರವಾದಿಗಳನ್ನು

# ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು

- ಕರುಣೆ ತೋರಿಸದವನ ಮೇಲೆ ಕರುಣೆ ತೋರಿಸಲ್ಪಡದು. (ಬುಖಾರಿ)
- ಕುಸ್ತಿಯಲ್ಲಿ ಗೆಲ್ಲುವವನು ಶಕ್ತಿವಂತನಲ್ಲ; ಕೋಪ ಬರುವಾಗ ತನ್ನನ್ನು ತಾನೇ ನಿಯಂತ್ರಿಸುವವನೇ ನಿಜವಾದ ಶಕ್ತಿವಂತನು. (ಬುಖಾರಿ)
- ಸತ್ಯವಿಶ್ವಾಸಿ ತನ್ನ ಉತ್ತಮ ಸ್ವಭಾವದಿಂದ, ಬಹಳ ಹೆಚ್ಚಾಗಿ ವ್ರತಾನುಷ್ಠಾನ ಮಾಡುವವನ ಮತ್ತು ನಮಾಝ್ ನಿರ್ವಹಿಸುವವನ ಸ್ಥಾನವನ್ನು ಪಡೆಯುತ್ತಾನೆ. (ಅಬೂ ದಾವೂದ್)
- ಉತ್ತಮ ರೀತಿಯಲ್ಲಿ ಮಾತನಾಡುವುದು ಪುಣ್ಯ ಕರ್ಮವಾಗಿದೆ. (ಬುಖಾರಿ)
- ನೀರುಳ್ಳಿ, ಬೆಳ್ಳುಳ್ಳಿ ಅಥವಾ ಕಟು ವಾಸನೆಯ ಮೂಲಿಕೆಯನ್ನು ತಿಂದು ನಮ್ಮ ಮಸೀದಿಗೆ ಬರಬಾರದು. (ಮುಸ್ಲಿಂ)
- ಕಪಟ ವಿಶ್ವಾಸಿಗೆ ಮೂರು ಲಕ್ಷಣಗಳಿವೆ. ಅವನು ಮಾತನಾಡುವಾಗ ಸುಳ್ಳು ಹೇಳುತ್ತಾನೆ. ವಾಗ್ದಾನ ಮಾಡಿದರೆ ಉಲ್ಲಂಘಿಸುತ್ತಾನೆ. ಅಮಾನತ್ತಾಗಿ ಇಟ್ಟುಕೊಳ್ಳಲು ಪಡೆದರೆ ವಂಚನೆ ಮಾಡುತ್ತಾನೆ (ಬುಖಾರಿ)
- ಯಾವ ಆಹಾರ ಸೇವಿಸಿದರೂ ಅಲ್ಲಾಹನನ್ನು ಸ್ತುತಿಸುವ ಮತ್ತು ಯಾವ ಪಾನೀಯ ಕುಡಿದರೂ ಅಲ್ಲಾಹನನ್ನು ಸ್ತುತಿಸುವ ದಾಸನಲ್ಲಿ ಅಲ್ಲಾಹನು ಸಂಪ್ರೀತನಾಗುತ್ತಾನೆ. (ಮುಸ್ಲಿಂ)
- ಅಲ್ಲಾಹನು ನಿಮ್ಮ ದೇಹ ಮತ್ತು ರೂಪವನ್ನು ನೋಡುವುದಿಲ್ಲ. ಆದರೆ ನಿಮ್ಮ ಹೃದಯಗಳನ್ನು ನೋಡುತ್ತಾನೆ. (ಮುಸ್ಲಿಂ)
- ಕರ್ಮಗಳು ಉದ್ದೇಶಾನುಸಾರವಾಗಿರುತ್ತವೆ. (ಬುಖಾರಿ)
- ವಿಧವೆಯರ ಮತ್ತು ದುರ್ಬಲರ ಸೇವೆ ಮಾಡಲು ಪ್ರಯತ್ನಿಸುವವನು ಅಲ್ಲಾಹನ ಮಾರ್ಗದಲ್ಲಿ ಪರಿಶ್ರಮಪಡುವವನ ಹಾಗೆ. (ಬುಖಾರಿ)

ನಿಯೋಜಿಸಿರುವನೆಂಬ ವಿಶ್ವಾಸವು ತಪ್ಪೆಂದು ಪವಿತ್ರ ಖುರ್‌ಆನಿನಲ್ಲಿ ಹಲವು ಸ್ಥಳಗಳಲ್ಲಿ ಅಲ್ಲಾಹನು ನುಡಿದಿರುವನು. ಆಧ್ಯಾತ್ಮಿಕ ಜ್ಞಾನವನ್ನು ನೀಡುವುದರಲ್ಲಿ ಯಾವ ಗೋತ್ರದವರನ್ನಾಗಲಿ ದೇಶದವರನ್ನಾಗಲಿ ಅವನು ಮರೆಯಲಿಲ್ಲ. ಈ ಸಂಗತಿಯನ್ನು ಪವಿತ್ರ ಖುರ್‌ಆನಿನಲ್ಲಿ ಹಲವೆಡೆಗಳಲ್ಲಿ ಉಪಯುಕ್ತ ಉದಾಹರಣೆಗಳಿಂದಲೂ ದೃಷ್ಟಾಂತಗಳಿಂದಲೂ ಸ್ಪಷ್ಟಪಡಿಸಲಾಗಿದೆ. ಸರ್ವಶಕ್ತನಾದ ಪರಮಾತ್ಮನು ಎಲ್ಲಾ ಸಮುದಾಯಗಳಿಗೂ ದೇಶದವರಿಗೂ ಅವರ ಭೌತಿಕಾವಶ್ಯಕತೆಗಳನ್ನು ಪೂರೈಸಲು ಸಕಲ ವಿಧದ ಸೌಕರ್ಯಗಳನ್ನು ಒದಗಿಸಿಕೊಟ್ಟಿರುವ ಹಾಗೆಯೇ ಎಲ್ಲಾ ಜನಾಂಗದವರ ಮತ್ತು ಎಲ್ಲಾ ದೇಶದವರ ಆಧ್ಯಾತ್ಮಿಕ ಆವಶ್ಯಕತೆಗಳಿಗಾಗಿಯೂ ಎಲ್ಲಾ ಏರ್ಪಾಡುಗಳನ್ನು ಮಾಡಿರುವನು. ಇದರ ಕುರಿತು ಪವಿತ್ರ ಖುರ್‌ಆನಿನ ಒಂದೆಡೆಯಲ್ಲಿ ಹೀಗೆ ಹೇಳಲಾಗಿದೆ: "ವ ಇನ್ ಮಿನ್ ಉಮ್ಮತಿನ್ ಇಲ್ಲಾ ಖಲಾ ಫೀಹಾ ನಧೀರ್" ಅಂದರೆ "ಒಬ್ಬ ಮುನ್ನೆಚ್ಚರಿಕೆಯನ್ನೀಯುವವನು (ಪ್ರವಾದಿ) ಬಂದಿರದ ಯಾವುದೇ ಜನಾಂಗವಿಲ್ಲ." (35 : 25)

ಆದುದರಿಂದ ನಾವೆಲ್ಲರೂ ವಿಶ್ವಾಸವಿಡಬೇಕಾದ ಸಕಲ ಸಂಪೂರ್ಣನೂ ಸತ್ಯ ಸ್ವರೂಪನೂ ಆದ ಪರಮಾತ್ಮನು ಸರ್ವಲೋಕಗಳ ಸೃಷ್ಟಿಕರ್ತನೂ ಪಾಲಕನೂ ಆಗಿದ್ದಾನೆಂಬುದು ಅವಿತರ್ಕ್ಯವಾಗಿದೆ. ಅವನ ಪರಿಪಾಲನೆಯು ಯಾವುದಾದರೊಂದು ನಿರ್ದಿಷ್ಟ ಜಾತಿಗೋ ನಿರ್ದಿಷ್ಟ ಕಾಲಕ್ಕೋ ನಿರ್ದಿಷ್ಟ ರಾಜ್ಯಕ್ಕೋ ಸೀಮಿತವಾದುದಲ್ಲ. ಅವನು ಎಲ್ಲಾ ಜಾತಿಯವರ, ಎಲ್ಲಾ ಕಾಲಗಳ, ಎಲ್ಲಾ ರಾಜ್ಯಗಳ ಪಾಲಕನಾಗಿದ್ದಾನೆ. ಭೌತಿಕವೂ ಆಧ್ಯಾತ್ಮಿಕವೂ ಆದ ಸರ್ವಶಕ್ತಿಗಳ ಆರಂಭ ಅವನಿಂದಾಗಿದೆ. ಎಲ್ಲಾ ಸೃಷ್ಟಿಗಳನ್ನು ಸಾಕಿಸಲಹುವವನು ಅವನೇ ಆಗಿದ್ದಾನೆ. ಎಲ್ಲಾ ವಸ್ತುಗಳು ಅವನನ್ನೇ ಆಶ್ರಯಿಸಿಕೊಂಡಿವೆ. ಅವನ ಅನುಗ್ರಹವು ಸಕಲ ಜಾತಿಗಳಲ್ಲಿಯೂ ಸಕಲ ರಾಜ್ಯಗಳಲ್ಲಿಯೂ ಸಕಲ ಯುಗಗಳಲ್ಲಿಯೂ ಸರ್ವವ್ಯಾಪಕವಾಗಿದೆ.

– ಹಝ್ರತ್ ಮಿರ್ಝಾ ಗುಲಾಂ ಅಹ್ಮದ್

ಅಹ್ಮದಿಯಾ ಸಂಘಟನೆಯ ಸ್ಥಾಪಕರು

# ಪರಮ ದಯಾವಂತನ ಭಕ್ತದಾಸರ ಗುಣಲಕ್ಷಣಗಳು

**ಅಹ್ಮದಿಯಾ ಮುಸ್ಲಿಂ ಜಮಾಅತಿನ ಪಂಚಮ ಖಲೀಫರಾದ ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್ ಸಾಹೇಬರು 25-09-2009ರಂದು ಲಂಡನಿನ ಬೈತುಲ್ ಫುತೂಹ್ ಮಸೀದಿಯಲ್ಲಿ ಮಾಡಿದ ಜುಮುಅ ಖುತುಬ**

وَعِبَادُ الرَّحْمٰنِ الَّذِيْنَ يَمْشُوْنَ عَلَى الْاَرْضِ هَوْنًا
وَّاِذَا خَاطَبَهُمُ الْجٰهِلُوْنَ قَالُوْا سَلٰمًا ﴿٦٤﴾ وَالَّذِيْنَ يَبِيْتُوْنَ
لِرَبِّهِمْ سُجَّدًا وَّقِيَامًا ﴿٦٥﴾ وَالَّذِيْنَ يَقُوْلُوْنَ رَبَّنَا اصْرِفْ
عَنَّا عَذَابَ جَهَنَّمَ ۖ اِنَّ عَذَابَهَا كَانَ غَرَامًا ﴿٦٦﴾ اِنَّهَا سَآءَتْ
مُسْتَقَرًّا وَّمُقَامًا ﴿٦٧﴾ وَالَّذِيْنَ اِذَآ اَنْفَقُوْا لَمْ يُسْرِفُوْا
وَلَمْ يَقْتُرُوْا وَكَانَ بَيْنَ ذٰلِكَ قَوَامًا ﴿٦٨﴾ وَالَّذِيْنَ لَا
يَدْعُوْنَ مَعَ اللّٰهِ اِلٰهًا اٰخَرَ وَلَا يَقْتُلُوْنَ النَّفْسَ الَّتِيْ
حَرَّمَ اللّٰهُ اِلَّا بِالْحَقِّ وَلَا يَزْنُوْنَ ۚ وَمَنْ يَّفْعَلْ ذٰلِكَ
يَلْقَ اَثَامًا ﴿٦٩﴾

وَالَّذِيْنَ لَا يَشْهَدُوْنَ الزُّوْرَ ۙ وَاِذَا مَرُّوْا بِاللَّغْوِ مَرُّوْا
كِرَامًا ﴿٧٣﴾ وَالَّذِيْنَ اِذَا ذُكِّرُوْا بِاٰيٰتِ رَبِّهِمْ لَمْ يَخِرُّوْا
عَلَيْهَا صُمًّا وَّعُمْيَانًا ﴿٧٤﴾ وَالَّذِيْنَ يَقُوْلُوْنَ رَبَّنَا هَبْ
لَنَا مِنْ اَزْوَاجِنَا وَذُرِّيّٰتِنَا قُرَّةَ اَعْيُنٍ وَّاجْعَلْنَا
لِلْمُتَّقِيْنَ اِمَامًا ﴿٧٥﴾ اُولٰٓئِكَ يُجْزَوْنَ الْغُرْفَةَ
بِمَا صَبَرُوْا وَيُلَقَّوْنَ فِيْهَا تَحِيَّةً وَّسَلٰمًا ﴿٧٦﴾ خٰلِدِيْنَ
فِيْهَا ۗ حَسُنَتْ مُسْتَقَرًّا وَّمُقَامًا ﴿٧٧﴾

ಪರಮ ದಯಾವಂತನಾದ ಅಲ್ಲಾಹನ ಭಕ್ತದಾಸರು ಭೂಮಿಯಲ್ಲಿ ನಮ್ರತೆಯಿಂದ ನಡೆಯುವವರಾಗಿದ್ದಾರೆ. ಅಜ್ಞಾನಿಗಳಾದ ಜನರು ಅವರನ್ನು ಮಾತಿಗೆಳೆದರೆ ಅವರು 'ಸಲಾಂ' (ಶಾಂತಿ) ಎಂದು ಹೇಳುತ್ತಾರೆ.

ಅವರು ರಾತ್ರಿ ಹೊತ್ತನ್ನು ತಮ್ಮ ಪ್ರಭುವಿನ ಮುಂದೆ ಪ್ರಣಾಮ ಮಾಡುತ್ತಲೂ ನಿಂತು ಪ್ರಾರ್ಥಿಸುತ್ತಲೂ ಕಳೆಯುತ್ತಾರೆ.

ಅವರು ಹೀಗೆ ಪ್ರಾರ್ಥಿಸುತ್ತಾರೆ: 'ನಮ್ಮ ಪ್ರಭೂ, ನಮ್ಮಿಂದ ನೀನು ನರಕ ಶಿಕ್ಷೆಯನ್ನು ದೂರಮಾಡು – ಖಂಡಿತವಾಗಿಯೂ ಆ ಶಿಕ್ಷೆ ಮಹಾ ನಾಶಕಾರಿಯಾಗಿದೆ.

'ಅದು ತಾತ್ಕಾಲೀನ ವಾಸಕ್ಕೂ ಶಾಶ್ವತ ವಾಸಕ್ಕೂ ಬಲು ಕೆಡುಕಿನ ಸ್ಥಳವಾಗಿದೆ.'

ಅವರು ದುಂದುವೆಚ್ಚ ಮಾಡದೆಯೂ ಜಿಪುಣತನ ತೋರಿಸದೆಯೂ ಅವೆರಡರ ಮಧ್ಯದಲ್ಲಿ ಮಿತವ್ಯಯ ಮಾಡುವವರಾಗಿದ್ದಾರೆ.

ಅವರು ಅಲ್ಲಾಹನ ಜೊತೆಗೆ ಅನ್ಯ ದೇವರನ್ನು ಕರೆದು ಪ್ರಾರ್ಥಿಸಲಾರರು. ಅಲ್ಲಾಹನು ನಿಷಿದ್ಧಗೊಳಿಸಿದ ಯಾವ ಜೀವವನ್ನೂ ವಿನಾ ಕಾರಣ ಅವರು ಕೊಲ್ಲಲಾರರು. ಅವರು ವ್ಯಭಿಚಾರ ಮಾಡಲಾರರು. ಹಾಗೆ ಮಾಡುವವನು ಪಾಪದ ಶಿಕ್ಷೆಯನ್ನು ಪಡೆಯುವನು.

(ಪವಿತ್ರ ಖುರ್‌ಆನ್ ಅಧ್ಯಾಯ 25: ವಚನಗಳು 64-69)

ಅವರು ಸುಳ್ಳು ಸಾಕ್ಷಿ ಹೇಳುವವರಲ್ಲ. ನಿಷ್ಪ್ರಯೋಜಕ ವಿಚಾರಗಳ ಬಗ್ಗೆ ಅವರು ಗಮನ ಕೊಡದೆ ಗಾಂಭೀರ್ಯದಿಂದ ವರ್ತಿಸುವವರಾಗಿದ್ದಾರೆ.

ಅವರಿಗೆ ಅವರ ಪ್ರಭುವಿನ ದೃಷ್ಟಾಂತಗಳನ್ನು ನೆನಪಿಸುವಾಗ ಆ ಬಗ್ಗೆ ಅವರು ಕಿವುಡರಂತಾಗಲಿ, ಕುರುಡರಂತಾಗಲಿ ವರ್ತಿಸಲಾರರು.

ಅವರು ಹೀಗೆ ಪ್ರಾರ್ಥಿಸುತ್ತಾರೆ: 'ನಮ್ಮ ಪ್ರಭೂ, ನಮ್ಮ ಬಾಳ ಸಂಗಾತಿಗಳನ್ನೂ ನಮ್ಮ ಮಕ್ಕಳನ್ನೂ ನಮಗೆ ನಯನಾನಂದಕರವಾಗಿ ಮಾಡು ಹಾಗೂ ನಮ್ಮನ್ನು ಸಜ್ಜನರಿಗೆ ನಾಯಕರನ್ನಾಗಿ ಮಾಡು.'

ಅವರು ಸಹನಶೀಲರಾಗಿದ್ದುದರಿಂದ ಅವರಿಗೆ ಸ್ವರ್ಗೀಯವಾದ ಉತ್ತುಂಗ ಸ್ಥಾನ ಪ್ರತಿಫಲವಾಗಿ ನೀಡಲ್ಪಡುವುದು. ಶುಭಾಶಂಸನೆಗಳಿಂದಲೂ ಶಾಂತಿಕೋರಿಕೆಯಿಂದಲೂ ಅವರು ಅಲ್ಲಿ ಸ್ವಾಗತಿಸಲ್ಪಡುವರು.

ಅಲ್ಲಿ ಅವರು ಶಾಶ್ವತವಾಗಿ ನೆಲೆಸುವರು. ಅದು ವಿಶ್ರಾಂತಿ ಮತ್ತು ವಾಸಕ್ಕೆ ಅತ್ಯುತ್ತಮ ಸ್ಥಳವಾಗಿದೆ.

(ಪವಿತ್ರ ಖುರ್‌ಆನ್ 25 : 73-77)

ರಮಝಾನ್ ಬಂದು ಹೋಯಿತು. ರಮಝಾನಿನಲ್ಲಿ ಪರಿಶುದ್ಧವಾದ ಮಾರ್ಪಾಟು ತರಲು ಸರಿಯಾದ ರೀತಿಯಲ್ಲಿ ಪರಿಶ್ರಮಿಸಿದ್ದರೆ ಅಲ್ಲಾಹನು ಅದನ್ನು ನೆಲೆನಿಲ್ಲಿಸಲಿ. ನಮ್ಮಲ್ಲಿ ಇಂತಹ ಒಂದು ಪರಿವರ್ತನೆ ಆಗಬೇಕೆಂಬ ಯೋಚನೆ ಕೆಲವರಲ್ಲಾದರೂ ಉಂಟಾಗಿದ್ದರೆ ಅದೇ ರಮಾಝಾನಿನ ಗಳಿಕೆ. ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಕೆಲವು ವಿಶಿಷ್ಟ ಗುಣಲಕ್ಷಣಗಳನ್ನು ಹೇಳಿದ್ದಾನೆ. ಅದನ್ನು ಸ್ವಾಯತ್ತ ಮಾಡಿದರೆ ನಾವು ಇಬಾದುರ್ರಹ್ಮಾನ್ (ಪರಮ ದಯಾವಂತನ ಭಕ್ತದಾಸರು) ಆಗುವೆವು.

ನಾನು ಓದಿದ ಖುರ್‌ಆನಿನ ವಚನಗಳಲ್ಲಿ ಆ ಗುಣಗಳನ್ನು ವಿವರಿಸಲಾಗಿದೆ. ವೈಯಕ್ತಿಕವಾದ ಜವಾಬ್ದಾರಿಕೆಗಳ ಕುರಿತು, ಸಾಮೂಹಿಕ ಹೊಣೆಗಾರಿಕೆಗಳ ಕುರಿತು, ಅಲ್ಲಾಹನೊಡನಿರುವ ಕರ್ತವ್ಯಗಳ ಕುರಿತು ಆ ವಚನಗಳಲ್ಲಿ ಪ್ರತಿಪಾದಿಸಲಾಗಿದೆ. ಇದನ್ನು ಗಳಿಸಲು ಪ್ರಯತ್ನಪಟ್ಟರೆ ಅಲ್ಲಾಹನು ಅವರನ್ನು ಇಬಾದುರ್ರಹ್ಮಾನ್‌ನಲ್ಲಿ ಸೇರಿಸಿ ಅವರಿಗೆ ತನ್ನ ಸ್ವರ್ಗದ ಕುರಿತು ಶುಭವಾರ್ತೆ ನೀಡುತ್ತಾನೆ. ಆದುದರಿಂದ ರಮಾಝಾನಿನ ನಂತರ ಸಹ ನಾವು ಅಲ್ಲಾಹನು ವಿವರಿಸಿರುವ ಮಾರ್ಗವನ್ನು ಅವಲಂಬಿಸಿದರೆ ಅಲ್ಲಾಹನ ಸಂಪ್ರೀತಿಯನ್ನು ಗಳಿಸುವವರಾಗಿ ನಾವು

ಮಾರ್ಪಡುವೆವು. ಅವನ ಸ್ವರ್ಗದ ಹಕ್ಕುದಾರರಾಗಿ ನಾವು ಮಾರ್ಪಾಟು ಹೊಂದುವೆವು. ಹೀಗೆ ಅಲ್ಲಾಹನು ಸಂಪ್ರೀತನಾದರೆ ಯಾರಲ್ಲಾದರೂ ಏನಾದರೂ ಪರಿಶುದ್ಧವಾದ ಬದಲಾವಣೆ ಸಹ ಉಂಟಾಗಿದ್ದರೆ ಎಂದೆಂದಿಗೂ ಅದು ನೆಲೆನಿಲ್ಲುವುದು.

ಪರಮ ದಯಾವಂತನ ಭಕ್ತದಾಸರ ಗುಣಗಳ ಪೈಕಿ ಪ್ರಥಮವಾಗಿ ಹೇಳಿರುವುದು يَمْشُوْنَ عَلَى الْاَرْضِ هَوْنًا ಎಂದಾಗಿದೆ. ಅವರು ಭೂಮಿಯಲ್ಲಿ ಶಾಂತವಾಗಿ ನಮ್ರತೆಯಿಂದ ನಡೆಯುವವರಾಗಿದ್ದಾರೆ. ಅವರ ಪ್ರತಿಯೊಂದು ತೀರ್ಮಾನ ನೀತಿ-ನ್ಯಾಯಯುತವಾಗಿರುವುದು. ಅನಾವಶ್ಯ ಕಾಠಿಣ್ಯ ಅಥವಾ ದ್ವೇಷ ಅವರಲ್ಲಿ ಇರಲಿಕ್ಕಿಲ್ಲ. ಈ ದ್ವೇಷ ಮತ್ತು ಕಾಠಿಣ್ಯ ಮನುಷ್ಯನನ್ನು ಕೊನೆಗೆ ಅಹಂಕಾರದ ತನಕ ತಲಪಿಸುತ್ತದೆ. ಭೀರುತ್ವ ಮತ್ತು ನಿಂದ್ಯತೆ ಪ್ರಕಟವಾಗುವ ರೀತಿಯ ಅನಾವಶ್ಯಕವಾದ ಮೃದುತ್ವ ಕೂಡ ಅವರ ಸ್ವಭಾವದಲ್ಲಿ ಇರಲಾರದು. ವೈಯಕ್ತಿಕವಾಗಿಯೂ ಸಾಮೂಹಿಕವಾಗಿಯೂ ಅವರಿಂದ ಸದ್ಗುಣಗಳು ಪ್ರಕಟಗೊಳ್ಳುವೆವು. ಇಬಾದುರ್ರಹ್ಮಾನ್ ಆಗಿದ್ದುಕೊಂಡು ಸಾಮೂಹಿಕವಾಗಿಯೂ ಈ ಗುಣಗಳು ತಮ್ಮಲ್ಲಿ ಉಂಟಾಗಲು ಅವರು ಪ್ರಯತ್ನಿಸುತ್ತಾರೆ. ಇಬಾದುರ್ರಹ್ಮಾನ್ ಆಗಿ ಮಾರ್ಪಾಡುವವರಿಗೆ ವಿಜಯ ಪ್ರಾಪ್ತಿಯಾಗುವುದೆಂಬ ಭವಿಷ್ಯನುಡಿ ಸಹ ಇದರಲ್ಲಿ ಅಡಕವಾಗಿದೆ. ವಿಜಯ ಸಿದ್ಧಿಸಿದರೂ ಅವರಲ್ಲಿ ಅಹಂಕಾರವಿರಲಿಕ್ಕಿಲ್ಲ. ತಮ್ಮ ವಿರುದ್ಧ ಮುಂಚೆ ಮಾಡಿದ ಕೃತ್ಯಕ್ಕೆ ಆಗ ಅವರು ಸೇಡು ತೀರಿಸಲಾರರು. ಆ ಸಂದರ್ಭದಲ್ಲಿ ನೀವು ಅಲ್ಲಾಹನನ್ನು ಮರೆತುಬಿಡುವವರಾಗಬಾರದು. ಆಗ ನೀವು ವಿನಯದಿಂದಲೂ ಶಾಂತವಾಗಿಯೂ ನಿಮ್ಮ ಕರ್ತವ್ಯಗಳನ್ನು ನಿರ್ವಹಿಸುವವರಾಗಿ ನೀವು ಮಾರ್ಪಡಬೇಕು.

ಎರಡನೇ ಗುಣವಾಗಿ ಹೇಳಿದ್ದು خَاطَبَهُمُ الْجٰهِلُوْنَ قَالُوْا سَلٰمًا ಎಂದಾಗಿದೆ. ಅಲ್ಲಾಹನ ಭಕ್ತದಾಸರ ಇನ್ನೊಂದು ಗುಣ ಅವರು ಗಲಭೆಗೊಂದಲ ಸೃಷ್ಟಿಸುವುದರಿಂದ ದೂರನಿಲ್ಲುವರು. ಅವರೊಡನೆ ಕುತರ್ಕ ಮಾಡುವವರಿಗೆ ಅವರು ಶಾಂತವಾಗಿ ವಿಚಾರಗಳನ್ನು ಮನಗಾಣಿಸಿಕೊಡುವರು.

ಅದೇ ಪ್ರಕಾರ ಮೊದಲಿನ ಆಜ್ಞೆಯಂತೆ ಕರಗತವಾಗಿರುವ ವಿನಯ ಮತ್ತು ಸಾಮೂಹಿಕವಾಗಿ ಸಿದ್ಧಿಸಿರುವ ಆದರ ಭಾವ ನೀವು ಸದಾ ನೆಲೆನಿಲ್ಲಿಸಬೇಕು. ಇನ್ನು ನಿಮಗೆ ಮೇಲಧಿಕಾರ ಕೈಗೂಡುವಾಗಲೂ ಅದನ್ನು ನೆಲೆಗೊಳಿಸಲು ಶ್ರಮವಹಿಸಬೇಕಾಗಿದೆ. ಶೈತಾನ್ ತನ್ನ ಚಟುವಟಿಕೆಗಳನ್ನು ಮಾಡುತ್ತಲೇ ಇರುತ್ತಾನೆ. ಅವನು ವಿವಿಧ ರೀತಿಯಲ್ಲಿ ನಿಮ್ಮ ವಿರುದ್ಧ ಯೋಜನೆಗಳನ್ನು ಹಾಕುತ್ತಾನೆ. ಹಾಗೆ ನಿಮ್ಮ ಅಭಿಮಾನಕ್ಕೆ ಕುಂದುಂಟಾಗುವ ವರ್ತನೆಗಳನ್ನು ಅವನು ಮಾಡುವನು. ಆ ಸಮಯದಲ್ಲಿ ನೀವು ನಿಮ್ಮ ಮನೋದ್ವೇಗಗಳನ್ನು ನಿಯಂತ್ರಿಸಬೇಕು. ಹಝ್ರತ್ ಮುಹಮ್ಮದ್ ಪೈಗಂಬರ್[ಸ] ಮತ್ತು ಶಿಷ್ಯರು ನಮ್ಮ ಮುಂದೆ ತೋರಿಸಿದ ಮಾದರಿ ಆಗ ನಾವು ಪ್ರದರ್ಶಿಸಬೇಕು. ಭಾವಿಕಾಲದಲ್ಲಿ ಜಮಾಅತಿನ ಸ್ಥಿತಿ ಉತ್ತಮಗೊಳ್ಳುವುದೆಂಬ ಸೂಚನೆ ಇದರಲ್ಲಿ ಅಡಕವಾಗಿದೆ.

ಆದರೆ ಈಗ ಕೆಲವು ದೇಶಗಳಲ್ಲಿ, ಮುಖ್ಯವಾಗಿ ಪಾಕಿಸ್ತಾನದಲ್ಲಿ ಅಹ್ಮದಿಯರಿಗೆ ಕಷ್ಟ ಕೊಡುತ್ತಿದ್ದಾರೆ. ಅವರ ಭಾವನೆಗಳನ್ನು ಘಾಸಿಗೊಳಿಸಲು ಪ್ರಯತ್ನಿಸಲಾಗುತ್ತದೆ. ನಿರಂತರವಾಗಿ ದೌರ್ಜನ್ಯ ಮಾಡುತ್ತಲಿದ್ದರೆ ಅದನ್ನು ಎದುರಿಸಲಿಕ್ಕಾಗಿ ಅಹ್ಮದಿಯರು ಕಾನೂನನ್ನು ಕೈಗೆತ್ತಿಕೊಳ್ಳುವರೆಂದೂ ಹಾಗೆ ನಿಯಮೋಲ್ಲಂಘನದ ಹೇತುವಾಗಿ ಅಹ್ಮದಿಯರನ್ನು ಇನ್ನೂ ಹೆಚ್ಚಾಗಿ ಪೀಡಿಸಲಿಕ್ಕೂ ಕಠಿಣವಾಗಿ ವರ್ತಿಸಲಿಕ್ಕೂ ಸಾಧ್ಯವಾಗುವುದೆಂದೂ ಅವರು ಲೆಕ್ಕಹಾಕಿದ್ದಾರೆ. ಆದರೆ ಅಲ್ಲಾಹನು ಹೇಳುವುದೇನೆಂದರೆ, ಇಂತಹ ಪೈಶಾಚಿಕ ವರ್ತನೆಗಳನ್ನು ಮನವರಿಕೆ ಮಾಡಿ ಅಲ್ಲಾಹನ ಭಕ್ತದಾಸರು ನಿಯಮದ ಚೌಕಟ್ಟಿನಲ್ಲಿ ಇದ್ದುಕೊಂಡು ವರ್ತಿಸುವರೆಂದಾಗಿದೆ.

ಅಸಭ್ಯ ಮಾತುಗಳಿಗೆ ನೀವು ಅದೇ ರೀತಿಯಲ್ಲಿ ಮರುನುಡಿಯಬಾರದು. ಆ ಮೂಲಕ ಇತರ ಅಹ್ಮದಿಯರಿಗೂ ಜಮಾಅತಿಗೂ ಜಟಿಲ ಸಮಸ್ಯೆ ಉಂಟಾಗುವುದು. ಆದುದರಿಂದ ಇಂದಿನ ಸ್ಥಿತಿಯಲ್ಲಿ ನನಗೆ ಅಹ್ಮದಿಯರೊಡನೆ ಹೇಳಲಿಕ್ಕಿರುವುದೇನೆಂದರೆ, ಅಲ್ಲಾಹನ ಪ್ರೀತಿಗಳಿಸುವ ಇಬಾದುರ್ರಹ್ಮಾನ್ ಆಗಿ ನೀವು ಪರಿವರ್ತಿತರಾಗಿರಿ. ನಾನು ಮೊದಲು ಹೇಳಿದ ಹಾಗೆ ಇದರಲ್ಲಿ ಜಮಾಅತಿನ ವಿಜಯದ ಕುರಿತು ಸೂಚನೆ ಇದೆ. ಮುಂದೊಂದು ಕಾಲ ಬರುವುದು. ಆಗ ನಮ್ಮ ಕೈಗಳು ಇವರಿಗಿಂತ ಮೇಲೆ ಬರುವುವು. ಆ ಸಂದರ್ಭ ನೀತಿ – ನ್ಯಾಯ ಏನೆಂದೂ ಶಕ್ತಿ ಇದ್ದರೂ ಇತರರ ಮನೋದ್ವೇಗಗಳನ್ನು ಹೇಗೆ ಗೌರವಿಸಬೇಕೆಂದೂ ತಮ್ಮ ಮನೋದ್ವೇಗಗಳನ್ನು ಹೇಗೆ ನಿಯಂತ್ರಿಸಬೇಕೆಂದೂ ಜಗತ್ತಿಗೆ ನೀವು ತೋರಿಸಿಕೊಡಬೇಕು. ಅಹ್ಮದಿಯರನ್ನು ಯಾವುದೇ ರೀತಿಯಲ್ಲಿ ಪ್ರಕೋಪನಗೊಳಿಸುವ ಪ್ರಯತ್ನಗಳನ್ನು ಪಾಕಿಸ್ತಾನದಲ್ಲಿ ವಿರೋಧಿಗಳು ಈಗ ಮಾಡುತ್ತಿದ್ದಾರೆ. ಅಹ್ಮದಿಯರಿಗೆ ಹಾನಿ ಮಾಡಲು ಸಾಧ್ಯವಿರುವ ಸರ್ವ ವಿಧ ಯೋಜನೆಗಳನ್ನು ವಿವಿಧ ಸ್ಥಳಗಳಲ್ಲಿ ಅವರು ರೂಪಿಸುತ್ತಿದ್ದಾರೆ. ಆದುದರಿಂದ ಈ ಯೋಜನೆಗಳನ್ನು ಮನವರಿಕೆ ಮಾಡಿಕೊಂಡು ಬಹಳ ಜಾಗ್ರತೆಯಿಂದ ನಡೆಯಿರಿ. ಸಹನೆ ಮತ್ತು ಪ್ರಾರ್ಥನೆ ಸಹಿತ ಅಲ್ಲಾಹನೊಡನೆ ಸಹಾಯ ಯಾಚಿಸುತ್ತಾ ಈ ಸ್ಥಿತಿಯನ್ನು ಎದುರಿಸಿರಿ.

ಪರಮ ದಯಾವಂತನಾದ ಅಲ್ಲಾಹನ ಭಕ್ತದಾಸರ ಗುಣಗಳನ್ನು ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್[ಅ] (ಅಹ್ಮದಿಯಾ ಮುಸ್ಲಿಂ ಜಮಾಅತಿನ ಸ್ಥಾಪಕರು) ಹೇಳುತ್ತಾರೆ: "ಭೂಮಿಯಲ್ಲಿ ವಿನಯಾನ್ವಿತರಾಗಿ ನಡೆದುಕೊಂಡು, ಅಜ್ಞಾನಿಗಳು ಅವರೊಡನೆ ಕಠಿಣವಾಗಿ ವರ್ತಿಸುವಾಗ ಸಮಾಧಾನ ಮತ್ತು ಶಾಂತಿಯ ಮಾತುಗಳನ್ನು ಹೇಳಿ ಅವರಿಂದ ದೂರ ಸರಿಯುವವರು ರಹ್ಮಾನನ ದಾಸರು. (ಅತ್ಯಂತ ಕೀಳ್ಮಟ್ಟದ ಅವಿವೇಕಿಗಳೊಡನೆ ನಮಗೆ ಈಗ ಸಂಪರ್ಕಿಸಬೇಕಾಗುತ್ತದೆ. ಆದುದರಿಂದ ನಮ್ಮ ಮನೋದ್ವೇಗಗಳನ್ನು ಸಂಪೂರ್ಣವಾಗಿ ನಿಯಂತ್ರಿಸಿಕೊಂಡು ಸಮಾಧಾನ ಮತ್ತು ದಯೆಯ ಮಾರ್ಗವನ್ನು ನಾವು ಅವಲಂಬಿಸಬೇಕಾಗಿದೆ.) ಕೆಟ್ಟ ವರ್ತನೆಗೆ ವಿರುದ್ಧವಾಗಿ ಅವರು ಸಭ್ಯತೆಯಿಂದ ಪ್ರತಿಕ್ರಿಯಿಸುವರು. ಬೈಯ್ಯುವವರ ಒಳಿತಿಗಾಗಿ ಅವರು ಪ್ರಾರ್ಥಿಸುವರು. ಪರಮ ದಯಾವಂತನಾದ ಅಲ್ಲಾಹನ ಸ್ವಭಾವವನ್ನು ಗಳಿಸಲು ಅವರು ಪ್ರಯತ್ನಿಸುತ್ತಾರೆ. ಕಾರಣವೇನೆಂದರೆ, ರಹ್ಮಾನ್ ಆದ ಅಲ್ಲಾಹನು ಒಳ್ಳೆಯವರೆಂದೋ ಕೆಟ್ಟವರೆಂದೋ ನೋಡದೆ ತನ್ನ ಎಲ್ಲ ದಾಸರಿಗೆ ಸೂರ್ಯ, ಚಂದ್ರ, ಭೂಮಿ ಮತ್ತಿತರ ಅಸಂಖ್ಯಾತ ಅನುಗ್ರಹಗಳಿಂದ ಅವರಿಗೆ ಪ್ರಯೋಜನ ನೀಡುತ್ತಿದ್ದಾನೆ. ಅಲ್ಲಾಹನ ಪರಮ ದಯಾವಂತ ಎಂಬ ಗುಣ ಯಾವುದಕ್ಕಾಗಿ ಉಪಯೋಗಿಸಲಾಗುತ್ತದೆಂಬ ವಿಚಾರಗಳನ್ನು ಈ ವಚನಗಳಲ್ಲಿ ಅಲ್ಲಾಹನು ಸ್ಪಷ್ಟಪಡಿಸಿದ್ದಾನೆ. ಅವನ ವಿಶಾಲವಾದ ಕಾರುಣ್ಯ ಸಾಮಾನ್ಯವಾಗಿ ಎಲ್ಲ ಒಳ್ಳೆಯವರಲ್ಲೂ ಕೆಟ್ಟವರಲ್ಲೂ ವ್ಯಾಪಿಸಿಕೊಂಡಿದೆ."

ಆದುದರಿಂದ ಈಗ ಮತ್ತು ಭಾವಿಕಾಲದಲ್ಲಿ ನಮ್ಮ ಶತ್ರು-ಮಿತ್ರರೊಡನೆ ಅಲ್ಲಾಹನ ಕಾರುಣ್ಯದ ಪ್ರತೀಕಗಳಾಗಿ ನಾವು ಮಾರ್ಪಟ್ಟು ಕರುಣೆ ಮತ್ತು ಕ್ಷಮೆ ತೋರಿಸುತ್ತಾ ಮುಂದೆ ಸಾಗಬೇಕಾಗಿದೆ. ತನಗೋಸ್ಕರ ಮತ್ತು ಇತರರ ಸನ್ಮಾರ್ಗಕ್ಕೋಸ್ಕರ ಅಲ್ಲಾಹನೊಡನೆ ಪ್ರಾರ್ಥನೆ ಮೂಲಕ ಸಹಾಯ ಬೇಡಬೇಕಾಗಿದೆ. ಹಾಗೆ ನಾವು ಸದಾ ಇಬಾದುರ್ರಹ್ಮಾನ್‌ನಲ್ಲಿ

ಸೇರಿದವರಾಗುವೆವು.

ಇಬಾದುರ್ರಹ್ಮಾನಿನ ಮೂರನೆಯ ಗುಣವಾಗಿ ಹೇಳಿದ್ದು يَبِيتُونَ لِرَبِّهِمْ سُجَّدًا وَّقِيَامًا ಎಂದಾಗಿದೆ. ರಾತ್ರಿ ಸಾಷ್ಟಾಂಗವೆರಗಿ ಮತ್ತು ನಿಂತುಕೊಂಡು ತಮ್ಮ ಪ್ರಭುವಿಗೋಸ್ಕರ ಅವರು ಕಾಲ ಕಳೆಯುತ್ತಾರೆ. ಕಳೆದ (ರಮಝಾನ್) ಕಾಲದಲ್ಲಿ ಕೆಲವು ದಿವಸಗಳಿಗೋಸ್ಕರ ಒಂದು ದೊಡ್ಡ ಪಾಲು ಜನರು ಇದಕ್ಕನುಸಾರವಾಗಿ ವರ್ತಿಸಿದರು. ಇಲ್ಲಿ ಅಲ್ಲಾಹನು ಹೇಳಿದ್ದು ಕೆಲವು ದಿವಸ ಮಾತ್ರ ಅವರು ರಾತ್ರಿ ಹೀಗೆ ಕಳೆಯುವರು ಎಂದಲ್ಲ. ಸದಾ ಅವರ ರಾತ್ರಿಗಳಲ್ಲಿ ಸುಜೂದ್ ಮತ್ತು ಖಿಯಾಮ್‌ನಲ್ಲಿ (ಸಾಷ್ಟಾಂಗ ಪ್ರಣಾಮ ಮತ್ತು ನಿಂತುಕೊಂಡು) ಪ್ರಾರ್ಥಿಸುತ್ತಾ ಇರುವವರೆಂದಾಗಿದೆ. ಇಂದಿನ ಈ ಪರಿಸ್ಥಿತಿಯಲ್ಲಿ ಒಬ್ಬ ಅಹ್ಮದಿಯ ಅತಿ ಪ್ರಧಾನವಾದ ಒಂದು ಕರ್ತವ್ಯ ಇದೆಂದು ತಿಳಿದುಕೊಳ್ಳಬೇಕು. ಇಂದು ಜಗತ್ತಿನಲ್ಲಿರುವ ಎಲ್ಲ ಮುಸ್ಲಿಂ ದೇಶಗಳಲ್ಲಿ ಅಹ್ಮದಿಯರು ಅತ್ಯಂತ ಕಷ್ಟಗಳನ್ನು ಅನುಭವಿಸುತ್ತಿರುವ ಒಂದು ಕಾಲಘಟ್ಟವಾಗಿದೆ ಇದು. ಆದುದರಿಂದ ಈಗ ಕಡ್ಡಾಯ (ಫರ್ಝ್) ನಮಾಝ್‌ಗಳಲ್ಲಿ ಮಾತ್ರ ಶ್ರದ್ಧೆ ವಹಿಸಿದರೆ ಸಾಲದು. ರಾತ್ರಿಗಳಲ್ಲಿ ನಫ್ಲ್ (ಐಚ್ಛಿಕ) ನಮಾಝ್‌ಗಳನ್ನು ಅನುಷ್ಠಿಸುವುದರಲ್ಲಿ ಶ್ರದ್ಧೆ ವಹಿಸಬೇಕು. ತಹಜ್ಜುದ್ ನಮಾಝ್ ಮಾಡಬೇಕು. ರಾತ್ರಿಯಲ್ಲಿ ಎದ್ದೇಳುವುದರಿಂದ ನಮ್ಮ ಮನಸ್ಸನ್ನು ನಮ್ಮ ನಿಯಂತ್ರಣದಲ್ಲಿ ತರಲು ಸಾಧ್ಯವಾಗುವುದು. ಇದು ಅಲ್ಲಾಹನು ಹೇಳಿದ್ದಾಗಿದೆ. ನಿಷ್ಕಪಟವಾಗಿ ರಾತ್ರಿಗಳಲ್ಲಿ ಅಲ್ಲಾಹನ ಸನ್ನಿಧಾನದಲ್ಲಿ ಆರಾಧನೆಯಲ್ಲಿ ಮಗ್ನರಾಗುವವರಾಗಿ ನಾವು ಮಾರ್ಪಡುವುದಾದರೆ ಜಮಾಅತಿನ ಕಷ್ಟಗಳನ್ನು ದೂರೀಕರಿಸಲು ಇದು ಕಾರಣವಾಗುವುದು - ಇನ್‌ಶಾಅ್ ಅಲ್ಲಾಹ್.

ಆದರೆ ಒಂದು ಸಂಗತಿ ನೆನಪಿಡಿರಿ. ರಾತ್ರಿಗಳಲ್ಲಿ ಎದ್ದು ಪ್ರಾರ್ಥಿಸುವುದು ಸ್ವಂತಕ್ಕೆ ಬೇಕಾಗಿ ಇರಬಾರದು. ಬದಲು, ಅಲ್ಲಾಹನ ಪ್ರೀತಿಗಳಿಸಲಿಕ್ಕೂ ಜಮಾಅತಿನ ವಿಜಯಕ್ಕೂ ಆಗಿರಬೇಕು. ಜಗತ್ತಿನಲ್ಲಿರುವ ಪ್ರತಿಯೊಬ್ಬ ಅಹ್ಮದಿ ನಿಷ್ಕಳಂಕವಾಗಿ ಅಲ್ಲಾಹನ ಪ್ರೀತಿ ಆಶಿಸುತ್ತಾ ಜಮಾಅತಿನ ಏಳಿಗೆಗೋಸ್ಕರ ರಾತ್ರಿ ಎರಡು ರಕ್‌ಅತಾದರೂ ನಮಾಝ್ ಮಾಡುವೆನೆಂದು ತನ್ನನ್ನು ನಿರ್ಬಂಧಗೊಳಿಸುವುದಾದರೆ ಇನ್‌ಶಾಅ್ ಅಲ್ಲಾಹ್, ಅಲ್ಲಾಹನ ಸಹಾಯ ಮೊದಲಿಗಿಂತ ಹೆಚ್ಚು ಎಷ್ಟು ಮಾತ್ರ ನಮ್ಮಲ್ಲಿ ವರ್ಧಿಸುವುದೆಂದು ಕಾಣಲು ಸಾಧ್ಯ. ಶತ್ರುವಿನ ಶತ್ರುತ್ವ ಮತ್ತು ವಿರೋಧಿಗಳ ದ್ವೇಷವನ್ನು ಅಲ್ಲಾಹು ಹೇಗೆ ಗಾಳಿಯಲ್ಲಿ ತೂರಿಬಿಡುವನೆಂದು ಕಾಣಲು ಸಾಧ್ಯ. ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಹೀಗೆ ನುಡಿದಿದ್ದರು: "ಅಲ್ಲಾಹನು ನನ್ನೊಡನೆ ಹೇಳಿದ್ದಾನೆಂದರೆ, ನಫ್ಲ್‌ಗಳ ಮೂಲಕ ಮನುಷ್ಯನು ನನ್ನ ಸಮೀಪಕ್ಕೆ ಬರುತ್ತಾನೆ. ಎಷ್ಟರ ವರೆಗೆಂದರೆ, ಅವನು ಕೇಳುವ ಕಿವಿಯಾಗಿ ನಾನು ಮಾರ್ಪಡುತ್ತೇನೆ. ಅವನು ಕಾಣುವ ಕಣ್ಣು ನಾನಾಗುತ್ತೇನೆ. ಅವನು ಹಿಡಿಯುವ ಕೈ ನಾನಾಗುತ್ತೇನೆ. ಅವು ನಡೆಯುವ ಕಾಲಾಗಿ ನಾನು ಮಾರ್ಪಾಟು ಹೊಂದುತ್ತೇನೆ."

ಸಂಕ್ಷಿಪ್ತವಾಗಿ, ನಫ್ಲ್ ಅನುಷ್ಠಿಸುವವರ ಮತ್ತು ತಹಜ್ಜುದ್ ನಮಾಝ್ ಮಾಡುವವರ ಬಹಳ ಸಮೀಪಸ್ಥನಾಗಿ ಅಲ್ಲಾಹನು ಮಾರ್ಪಡುತ್ತಾನೆ. ಅಲ್ಲಾಹನ ಈ ಸಾಮೀಪ್ಯ ಗಳಿಸಲು ನಾವು ಪ್ರತಿಯೊಬ್ಬರು ಪ್ರಯತ್ನಿಸಬೇಕಾಗಿದೆ. ರಮಝಾನ್ ಕಳೆದುದರಿಂದ ಇನ್ನು ವ್ಯರ್ಥವಾದ ಕೂಟಗಳನ್ನು ಏರ್ಪಡಿಸಿ ರಾತ್ರಿ ಹೆಚ್ಚು ಸಮಯ ವ್ಯರ್ಥಗೊಳಿಸಿ, ಹಾಗೆ ಸುಬ್‌ಹಿ ನಮಾಝಿಗೆ ಕೂಡ ಎದ್ದೇಳಲು ಸಾಧ್ಯವಾಗದ ಒಂದು ಪರಿಸ್ಥಿತಿಯನ್ನು ಸೃಷ್ಟಿಸುವುದಲ್ಲ. ಬದಲು, ಅಲ್ಲಾಹನನ್ನು ನಮ್ಮ ಸಮೀಪಸ್ಥನನ್ನಾಗಿ ಮಾಡಲಿಕ್ಕೆ ಉಪಯುಕ್ತವಾದ ರಾತ್ರಿಗಳನ್ನು ಪಡೆಯಲು ನಾವು ಪರಿಶ್ರಮಿಸಬೇಕು. ಅಲ್ಲಾಹನ ಭಕ್ತದಾಸರಾಗಲಿಕ್ಕೆ ರೀತಿಯನ್ನು ರಮಝಾನ್ ನಮಗೆ ಕಲಿಸಿಕೊಟ್ಟಿದೆ. ಅದಕ್ಕನುಗುಣವಾಗಿ ವರ್ತಿಸಿ ನಮ್ಮ ರಾತ್ರಿಗಳನ್ನು ಆರಾಧನೆಯಿಂದ ಅಲಂಕರಿಸಬೇಕಾಗಿದೆ. ಇದು ಸುಕ್ರಾಂತಿಗೆ ಕಾರಣವಾಗುತ್ತದೆ. ಹಝ್ರತ್ ಪೈಗಂಬರರ(ಸ) ಶಿಷ್ಯವೃಂದ ಈ ರೀತಿಯನ್ನು ಅವಲಂಬಿಸಿದ್ದರು. ಹಾಗೆ ಅವರು ತಂದ ಸುಕ್ರಾಂತಿ ಲೋಕ ಜನರು ಕಂಡರು. ನಿರ್ಬಂಧಿತಾವಸ್ಥೆಯಲ್ಲಿ ಹಗಲು ಅವರಿಗೆ ಯುದ್ಧ ಮಾಡಬೇಕಾಗಿ ಬಂದರೆ, ರಾತ್ರಿಗಳಲ್ಲಿ ಅವರು ಆರಾಧನೆಯಲ್ಲಿ ಕಳೆದರು. ಮುಸ್ಲಿಮರಲ್ಲಿ ರಾತ್ರಿ ಕಾಲದ ಆರಾಧನೆ ನೆಲೆಗೊಂಡಿದ್ದ ಕಾಲದಲ್ಲಿ ಅವರಿಗೆ ವಿಜಯ ಸಿದ್ಧಿಸುತ್ತಿತ್ತು. ಇಂದು ಇದಕ್ಕನುಗುಣವಾಗಿ ವರ್ತಿಸಬೇಕಾದುದು ಅಹ್ಮದಿಯರ ಕರ್ತವ್ಯವಾಗಿದೆ. ಅಹ್ಮದಿಯತ್ ಮತ್ತು ಇಸ್ಲಾಮಿನ ವಿಜಯಕ್ಕೋಸ್ಕರ ಹೆಚ್ಚಾಗಿ ಪ್ರಾರ್ಥಿಸುತ್ತಾ ಇರಿ. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ:

"ಹಝ್ರತ್ ಪೈಗಂಬರರು(ಸ) ಬಂದಾಗ ಇದ್ದ ಅರಬಿಯರ ಮತ್ತು ಲೋಕದ ಇತರರ ಸ್ಥಿತಿ ಯಾರಿಂದಲೂ ಗೋಪ್ಯವಲ್ಲ. ಮೃಗತುಲ್ಯ ಜೀವನವನ್ನು ಅವರು ಸಾಗಿಸುತ್ತಿದ್ದರು. ತಿನ್ನುವುದು, ಕುಡಿಯುವುದು ಹೊರತು ಬೇರೇನೂ ಅವರಿಗೆ ತಿಳಿದಿರಲಿಲ್ಲ. ಸಹಸೃಷ್ಟಿಗಳೊಡನೆ ತಮಗಿರುವ ಜವಾಬ್ದಾರಿಕೆಗಳ ಕುರಿತು ಅಥವಾ ಸೃಷ್ಟಿಕರ್ತನೊಡನೆ ತಮಗಿರುವ ಜವಾಬ್ದಾರಿಕೆಗಳ ಕುರಿತು ಏನೂ ಗೊತ್ತಿರಲಿಲ್ಲ. ಅವರ ಅವಸ್ಥೆಯ ಬಗ್ಗೆ ಒಂದು ಕಡೆಯಲ್ಲಿ ಅಲ್ಲಾಹನು ಹೇಳಿದ್ದು 'ಯಅ್‌ಕುಲೂನ ಕಮಾ ತಅ್‌ಕುಲುಲ್ ಅನ್‌ಆಮ್' - ಮೃಗಗಳು ತಿನ್ನುವುದು ಕುಡಿಯುವುದು ಮಾಡುವ ಹಾಗೆ ಅವರು ತಿನ್ನುತ್ತಲೂ ಕುಡಿಯುತ್ತಲೂ ಇದ್ದರು ಎಂದಾಗಿದೆ. ಆದರೆ ಹಝ್ರತ್ ಪೈಗಂಬರರ(ಸ) ಉಪದೇಶಗಳು ಅವರನ್ನು ಪೂರ್ಣವಾಗಿ ಬದಲಾಯಿಸಿ 'ಯಬೀತೂನ ಲಿರಬ್ಬಿಹಿಂ ಸುಜ್ಜದನ್ ವ್ವಖಿಯಾಮ' ಎಂಬ ಅವಸ್ಥೆಗೆ ಅವರು ಪರಿವರ್ತಿತರಾದರು. ತಮ್ಮ ಪ್ರಭುವಿನ ಸ್ಮರಣೆಯಲ್ಲಿ ಸಾಷ್ಟಾಂಗ ಪ್ರಣಾಮ ಮಾಡುತ್ತಲೂ ನಿಂತುಕೊಂಡೂ ಅವರು ರಾತ್ರಿಗಳನ್ನು ಕಳೆಯಲು ತೊಡಗಿದರು. ಅಲ್ಲಾಹ್! ಅಲ್ಲಾಹ್! ಇದು ಎಷ್ಟು ಮಹತ್ತರವಾಗಿದೆ! ಹಝ್ರತ್ ಪೈಗಂಬರ್(ಸ) ಮೂಲಕ ಅತುಲ್ಯವಾದ ಸುಕ್ರಾಂತಿಯೂ ಅತಿ ಮಹತ್ತಾದ ಬದಲಾವಣೆಯೂ ಅವರಲ್ಲಿ ಉಂಟಾಯಿತು. ಸೃಷ್ಟಿಗಳೊಡನೆ ತಮಗಿರುವ ಕರ್ತವ್ಯಗಳು ಮತ್ತು ಸೃಷ್ಟಿಕರ್ತನೊಡನೆ ತಮಗಿರುವ ಹೊಣೆಗಾರಿಕೆಗಳನ್ನು ಸಂತುಲಿತವಾಗಿ ಅವರು ನಿರ್ವಹಿಸಿದರು. ಮೃತತುಲ್ಯವಾದ ಒಂದು ಸಮುದಾಯವನ್ನು ಉನ್ನತ ಮಟ್ಟದ ಪರಿಶುದ್ಧ ಸಮೂಹವಾಗಿ ಮಾರ್ಪಡಿಸಿದರು. ಸಾಮಾನ್ಯವಾಗಿ ಗುಣಗಳನ್ನು ಎರಡಾಗಿ ವಿಂಗಡಿಸಬಹುದು. ಒಂದು ವಿಜ್ಞಾನಪರವಾದ ಗುಣ. ಮತ್ತೊಂದು ಪ್ರವರ್ತನಪರವಾದ ಗುಣ. ಪ್ರವರ್ತನ ಪರವಾಗಿ ನೋಡಿದರೆ ಅವರು "ಯಬೀತೂನ ಲಿರಬ್ಬಿಹಿಮ್ ಸುಜ್ಜದನ್ ವ್ವಖಿಯಾಮ" ಅವಸ್ಥೆಗೆ ಅವರು ಏರಿದರು. ವೈಜ್ಞಾನಿಕ ಪರವಾಗಿ ನೋಡಿದರೆ, ಗ್ರಂಥರಚನೆ ಮತ್ತು ಭಾಷೆಯ ವಿಪುಲತೆ ಕಾಣಲು ಸಾಧ್ಯ. ಅದಕ್ಕೆ ಬೇರೆ ಉದಾಹರಣೆ ಅಲಭ್ಯ."

ಆ ಮಹಾಪುರುಷರು ಪುನಃ ಹೇಳುತ್ತಾರೆ: "ಆಧ್ಯಾತ್ಮಿಕತೆ ಮತ್ತು ಪರಿಶುದ್ಧತೆ ಇಲ್ಲದಿದ್ದರೆ ಯಾವುದೇ ಧರ್ಮಕ್ಕೆ ಮುನ್ನೇರಲು ಸಾಧ್ಯವಿಲ್ಲ. ಹಝ್ರತ್ ಪೈಗಂಬರರ(ಸ) ಆಗಮನಕ್ಕೆ ಮುಂಚೆ ಲೋಕದ ಅವಸ್ಥೆ ಏನೆಂದು ಪವಿತ್ರ ಖುರ್‌ಆನ್ ಹೇಳಿದೆ: 'ಯಅ್‌ಕುಲೂನ ಕಮಾ ತಅ್‌ಕುಲುಲ್ ಅನ್‌ಆಮ್.' ಈ ಸಮೂಹ ಇಸ್ಲಾಮನ್ನು ಸ್ವೀಕರಿಸಿದಾಗ ಅವರ ಬಗ್ಗೆ ಹೇಳಿದ್ದು 'ಯಬೀತೂನ ಲಿರಬ್ಬಿಹಿಮ್ ಸುಜ್ಜದನ್ ವ್ವಖಿಯಾಮ' ಎಂದಾಗಿದೆ. ಆಕಾಶದಿಂದ ಶಮನೌಷಧ ಲಭಿಸದಿರುವ

ತನಕ ಹೃದಯ ಸರಿಯಾಗಲಾರದು. ಮನುಷ್ಯನು ಮುಂದಕ್ಕೆ ಕಾಲಿಡುತ್ತಾನೆ. ಆದರೆ ಅದು ಅವನ ಹಿಂದಕ್ಕೆ ಬರುತ್ತದೆ. ಪರಿಶುದ್ಧ ಸ್ವಭಾವ ಮತ್ತು ಯಥಾರ್ಥ ಪ್ರಕೃತಿಯುಳ್ಳ ಮನುಷ್ಯನಾಗಿದ್ದರೆ ಮಾತ್ರ ಧರ್ಮ ಮುಂದಕ್ಕೆ ಸಾಗುವುದು. ಇದಿಲ್ಲದೆ ಯಾವ ಧರ್ಮವೂ ಅಭಿವೃದ್ಧಿಗೊಳ್ಳಲಾರದು. ಇನ್ನು ಅಭಿವೃದ್ಧಿಹೊಂದಿದರೂ ಅದು ನೆಲೆನಿಲ್ಲಲಾರದು."

ಆದುದರಿಂದ ಜಮಾಅತ್ ಅಭಿವೃದ್ಧಿಗೊಳ್ಳಬೇಕೆಂದೂ ಜಮಾಅತಿನ ಸದಸ್ಯರು ಎದುರಿಸುತ್ತಿರುವ ಕಷ್ಟಗಳು ಕೊನೆಗೊಳ್ಳಬೇಕೆಂದೂ ನಾವು ಬಯಸುವುದಾದರೆ, ಹಝ್ರತ್ ಮಸೀಹ್ ಮೌಊದ್(ಅ) ನುಡಿದಂತೆ ಆಕಾಶದಿಂದ ಇಳಿಯುವ ಔಷಧ ಇದಕ್ಕೆ ಅನಿವಾರ್ಯವಾಗಿದೆ. ಅಲ್ಲಾಹನು ನೀಡಿದ ನಿರ್ದೇಶಾನುಸಾರ ಅವನ ಮುಂದೆ ಹಾಜರಾಗಿ ಬೇಡುವಾಗ ಆಕಾಶದ ಔಷಧ ಲಭಿಸುವುದು. ಅಲ್ಲಾಹನು ಆ ಸೌಭಾಗ್ಯವನ್ನು ನಮಗೆ ಒದಗಿಸಲಿ.

ನಾಲ್ಕನೆಯ ಗುಣವಾಗಿ ಹೇಳಿದ್ದು ಅಲ್ಲಾಹನ ಭಕ್ತದಾಸರು ನರಕದಿಂದ ದೂರವಾಗಲಿಕ್ಕೋಸ್ಕರ ಅಲ್ಲಾಹನೊಡನೆ ಪ್ರಾರ್ಥಿಸುತ್ತಾ ಇರುವರೆಂದಾಗಿದೆ. ಪಾಪ ಕಾರಣದಿಂದ ಪರಲೋಕದಲ್ಲಿ ಸಿಗುವ ನರಕದಿಂದ, ತಪ್ಪುಗಳು ಮತ್ತು ಕೆಟ್ಟ ವರ್ತನೆಗಳ ಕಾರಣದಿಂದ ಈ ಲೋಕದಲ್ಲಿ ಪ್ರತ್ಯಕ್ಷಗೊಳ್ಳುವ ನರಕದಿಂದ ಅವನು ರಕ್ಷಣೆಯನ್ನು ಬೇಡುತ್ತಾನೆ. ಆದುದರಿಂದ ಪರಮ ದಯಾವಂತನಾದ ಅಲ್ಲಾಹನ ಭಕ್ತದಾಸರು ಸದಾ ಪಶ್ಚಾತ್ತಾಪ ಪಡುತ್ತಲೂ (ತೌಬ) ಕ್ಷಮೆ ಯಾಚಿಸುತ್ತಲೂ (ಇಸ್ತಿಗ್‌ಫಾರ್) ಇರಬೇಕಾಗಿದೆ. ಅಲ್ಲಾಹನ ಸಂರಕ್ಷಣೆಯಲ್ಲಿ ನೆಲೆನಿಲ್ಲಲಿಕ್ಕೆ ಯಾವಾಗಲೂ ಪ್ರಾರ್ಥಿಸುತ್ತಾ ಇರಬೇಕು. ಎರಡೂ ಲೋಕಗಳ ನಿಂದ್ಯತೆಗಳಿಂದ ಅಲ್ಲಾಹನು ನಮ್ಮನ್ನು ಕಾಪಾಡಲಿ ಎಂದು ಪ್ರಾರ್ಥಿಸಿರಿ. ಈ ಲೋಕದಲ್ಲಿ ಬರುವ ಕಷ್ಟಗಳಿಂದ ಮತ್ತು ನರಕದಿಂದ ಅಲ್ಲಾಹನು ಸಂರಕ್ಷಿಸಲಿ. ಲೋಕದ ಥಳಕು ಬೆಳಕು ಮತ್ತು ಆರ್ಭಟಗಳು ನಮ್ಮನ್ನು ಸೋಲಿಸದಿರಲಿ. ಇವೆಲ್ಲ ನಮ್ಮನ್ನು ಈ ಲೋಕದಲ್ಲಿ ಅಲ್ಲಾಹನಿಂದ ದೂರಗೊಳಿಸಿ, ಹಾಗೆ ಪರಲೋಕ ನರಕದ ಹಕ್ಕುದಾರರನ್ನಾಗಿ ನಮ್ಮನ್ನು ಮಾರ್ಪಡಿಸುವುದು. ನಮ್ಮ ಮಕ್ಕಳ ಬಗ್ಗೆ ನಮ್ಮ ವ್ಯಾಕುಲತೆಯನ್ನೂ ಅಲ್ಲಾಹನು ನೀಗಿಸಲಿ. ಇವರನ್ನು ನೆನೆಸಿ ನಾವು ಅಸ್ವಸ್ಥತೆಯ ಅಗ್ನಿಯಲ್ಲಿ ಉರಿಯದಿರಲಿ.

ಇಬಾದುರ್ರಹ್ಮಾನಿನ ಐದನೆಯ ಗುಣವಾಗಿ ಹೇಳಿದ್ದು "ಲಾ ಯುಸ್ರಿಫೂ" ಎಂದಾಗಿದೆ. ಅವರು ಅಮಿತ ವ್ಯಯ ಮಾಡಲಾರರು. ದುಂದುವೆಚ್ಚ ಅವರು ಮಾಡಲಿಕ್ಕಿಲ್ಲ. ಸ್ವಂತ ಸಂಪತ್ತನ್ನು ಇತರರಿಗೆ ತೋರಿಸಲಿಕ್ಕಾಗಿ ಖರ್ಚು ಮಾಡಲಿಕ್ಕಿಲ್ಲ. ಜಮಾಅತಿನ ಸಂಪತ್ತನ್ನೂ ಮಿತಿಮೀರಿ ಖರ್ಚು ಮಾಡಲಿಕ್ಕಿಲ್ಲ. ವೈಯಕ್ತಿಕವಾದ ದುಂದುವೆಚ್ಚದ ಬಗ್ಗೆ ಹೇಳುವುದಾದರೆ ಈಗ ಅದು ಸಮೂಹದಲ್ಲಿ ಬಹಳ ಹೆಚ್ಚುತ್ತಿರುವುದಾಗಿ ಕಂಡುಬರುತ್ತದೆ. ವೈವಾಹಿಕ ದುಂದುವೆಚ್ಚ ಆ ಪೈಕಿ ಒಂದು. ಅನ್ಯರನ್ನು ಕಂಡು ವಿವಿಧ ತರದ ಭಕ್ಷ್ಯಗಳು ಇಲ್ಲಿಯೂ ಪಾಕಿಸ್ತಾನದಲ್ಲೂ ಪಾಕಮಾಡಲ್ಪಡುತ್ತವೆ. ಮದುವೆ ದಿವಸ ಭಕ್ಷ್ಯ ವಸ್ತುಗಳನ್ನು ಮಾಡಿ ಆಮಂತ್ರಿಸಲಾಗುತ್ತದೆ. ಅದಲ್ಲದೆ, "ವಲೀಮ"ದ ಆಹ್ವಾನವೂ ಇರುತ್ತದೆ. ಆಮಂತ್ರಿಸುವುದು ತಪ್ಪಲ್ಲ. ಆದರೆ ಅದನ್ನು ಕೂಡ ಸರಳ ಮಾಡಬಹುದಲ್ಲವೇ. ಮದುವೆಗೆ ಮುಂಚೆ "ಮೆಹಂದಿ" ಮದುವೆ ನಡೆಯುತ್ತದೆ. ಅದಕ್ಕಾಗಿ ಬಹಳ ಹೆಚ್ಚು ಖರ್ಚು ಮಾಡಲಾಗುತ್ತದೆ. ಹುಡುಗಿಯ ಮನೆಯವರು ಮದುವೆಯ ಸಡಗರ ಎಂಬ ಹೆಸರು ಹೇಳಿ ಮೆಹಂದಿಯ ಆಮಂತ್ರಣ ಪತ್ರವನ್ನು ಕೊಟ್ಟು ಇತರರನ್ನು ಕರೆದು ದೊಡ್ಡ ಔತಣವನ್ನು ಕೊಡುತ್ತಾರೆ. ಮೆಹಂದಿ ಇಡಬೇಕೆಂದಿದ್ದರೆ ಮದುಮಗಳ ಸಹಪಾಠಿಗಳು ಒಟ್ಟು ಸೇರಿ ಸಂಭ್ರಮಿಸಲಿ. ಈ ಆಚಾರ ಸಹ ದಿನೇ ದಿನೇ ವರ್ಧಿಸುತ್ತಿರುವುದಾಗಿ ಕಂಡುಬರುತ್ತದೆ. ಇತರರನ್ನು ನೋಡಿ ಇವೆಲ್ಲ ಮಾಡಲ್ಪಡುತ್ತವೆ. ಹುಡುಗನ ಕುಟುಂಬದವರು ಸಹ ಮದುವೆಯ ದಿವಸಕ್ಕಿಂತ ಮುಂಚೆ ಸಡಗರದ ಹೆಸರು ಹೇಳಿ ಔತಣ ಏರ್ಪಡಿಸುತ್ತಾರೆ. ತಪ್ಪಾದ ಈ ಅನಾಚಾರದಲ್ಲಿ ಧರ್ಮದ ಅರಿವುಳ್ಳವರು ಸಹ ಸೇರುತ್ತಾರೆಂದು ಕಾಣಲು ಸಾಧ್ಯ. ಇಂತಹ ಔತಣಗಳನ್ನು ಕೊಡದವರ ಬಗ್ಗೆ ಇತರರು ಮುನಿಸುತ್ತಾರೆ. ಕಡು ಲೋಭಿಯಾದ ಕಾರಣ ಔತಣ ಕೊಡಲಿಲ್ಲವೆಂದು ಲೇವಡಿ ಮಾಡುತ್ತಾರೆ. ವಿಶೇಷವಾಗಿ, ಹೊರ ದೇಶಗಳಿಂದ ಪಾಕಿಸ್ತಾನಕ್ಕೆ ತೆರಳುವವರು ಆಹಾರ, ಆಭರಣ ಮತ್ತು ಉಡುಪಿಗೋಸ್ಕರ ಲೆಕ್ಕವಿಲ್ಲದಷ್ಟು ಖರ್ಚು ಮಾಡುತ್ತಾರೆ. ಒಬ್ಬನು ಖರ್ಚು ಮಾಡಿದುದಕ್ಕಿಂತ ಹೆಚ್ಚು ಇನ್ನೊಬ್ಬನು ಖರ್ಚು ಮಾಡುತ್ತಾನೆ. ಇವೆಲ್ಲ ದುಂದು ವೆಚ್ಚವಾಗಿವೆ. ನಾನು ಮೊದಲೊಮ್ಮೆ ಹೇಳಿದ ಪ್ರಕಾರ ಈ ಹಣವನ್ನು ಬಡವರ ಮದುವೆಗೆ ಖರ್ಚು ಮಾಡಬಹುದಾಗಿದೆ. ಅನಾಥರ ಸಂರಕ್ಷಣೆಗೆ ಇದನ್ನು ವಿನಿಯೋಗಿಸಬಹುದಾಗಿದೆ. ಬೇರೆ ಹಲವು ಒಳ್ಳೆಯ ಕಾರ್ಯಗಳಿಗೋಸ್ಕರ ಇದನ್ನು ಉಪಯೋಗಿಸಬಹುದಾಗಿದೆ. ಅಮಿತ ಖರ್ಚು ಮಾಡದಿದ್ದರೆ ಇವೆಲ್ಲ ಮಾಡಲು ಸಾಧ್ಯ. ಹಾಗಿರುವವರು ಪರಮ ದಯಾವಂತನಾದ ಅಲ್ಲಾಹನ ಯಥಾರ್ಥ ದಾಸರಾಗುತ್ತಾರೆ.

ಆರನೇ ಗುಣವಾಗಿ ಹೇಳಿದ್ದು "ಲಾ ಯಖ್ತುರು" ಎಂದಾಗಿದೆ. ಅವರು ಜಿಪುಣತೆ ತೋರಿಸದವರು. ಕೆಲವರು ಜಿಪುಣತೆ ಕಾರಣ ಅಗತ್ಯಕ್ಕೆ ಕೂಡ ಖರ್ಚುಮಾಡಲಾರರು. ಕೆಲವರು ಕಡು ಲೋಭಿಗಳಾಗುತ್ತಾರೆ. ಹಣವನ್ನು ಶೇಖರಿಸಿಡಲಿಕ್ಕೋಸ್ಕರ ಮಾತ್ರ ಹೀಗೆ ಅವರು ಮಾಡುತ್ತಾರೆ. ವೈಯಕ್ತಿಕವಾದ ಅತ್ಯಾವಶ್ಯಕತೆಗಳಿಗೆ ಕೂಡ ಖರ್ಚು ಮಾಡದ ಕೆಲವರಿದ್ದಾರೆ. ಹತ್ತಿರದ ಸಂಬಂಧಿಕರಿಗೆ ಸಹಾಯ ಮಾಡುವ, ಬಡವರಿಗೆ ಏನಾದರೂ ನೀಡುವ, ಜಮಾಅತಿಗೋಸ್ಕರ ತ್ಯಾಗ ಮಾಡುವ ಸ್ವಭಾವ ಅವರಲ್ಲಿ ಇರಲಿಕ್ಕಿಲ್ಲ. ಆದುದರಿಂದ ಹಣವಿದ್ದೂ ಖರ್ಚು ಮಾಡದವರು ಕೂಡ ಪರಮ ದಯಾವಂತನ ಭಕ್ತದಾಸರಲ್ಲಿ ಸೇರಲಾರರು. ದುಂದುವೆಚ್ಚವನ್ನು ಅಲ್ಲಾಹನು ನಿರುತ್ಸಾಹಗೊಳಿಸಿ ಇಬಾದುರ್ರಹ್ಮಾನನ್ನು ಅದರಿಂದ ವಿಮುಕ್ತಗೊಳಿಸಿದಾಗ ಜಿಪುಣತನವನ್ನು ಅಲ್ಲಾಹನು ದ್ವೇಷಿಸಿದನು. ಕೆಲವು ಜನರು ಖರ್ಚು ಮಾಡಬೇಕಾದ ಮಾನದಂಡಕ್ಕೆ ಅನುಸಾರವಾಗಿ ಖರ್ಚು ಮಾಡುವುದಿಲ್ಲ. ಬೇರೆ ಕೆಲವರು ಹಣವನ್ನು ತಡೆದಿಟ್ಟುಕೊಂಡು ಅದನ್ನು ಶೇಖರಿಸಿ ಸಮೂಹದ ಅಭಿವೃದ್ಧಿಗೆ ತಡೆಯೊಡ್ಡುತ್ತಾರೆ. ಅಲ್ಲಾಹನು ಹೇಳುತ್ತಾನೆ: ಪರಮ ದಯಾವಂತನ ಭಕ್ತದಾಸರು ಜನರಿಗೆ ತೋರಿಸಲಿಕ್ಕಾಗಿ ದುಂದುವೆಚ್ಚವಾಗಲಿ, ಅದೇ ಪ್ರಕಾರ ಅತ್ಯಾವಶ್ಯ ಕಾರ್ಯಗಳಿಗೆ ಕೂಡ ಖರ್ಚು ಮಾಡದ ಜಿಪುಣತೆಯಾಗಲಿ ಮಾಡಲಿಕ್ಕಿಲ್ಲ. ಇವೆರಡರ ಮಧ್ಯೆ ಇರುವ ಮಾರ್ಗವನ್ನು ಅವರು ಕೈಗೊಳ್ಳುವರು. ಇಬಾದುರ್ರಹ್ಮಾನ್ ಖರ್ಚು ಮಾಡುವುದು ಮತ್ತು ಖರ್ಚು ಕಡಿತ ಮಾಡುವುದು ಎಲ್ಲವೂ ಅಲ್ಲಾಹನ ಪ್ರೀತಿಗನುಸಾರವಾಗಿರುವುದು.

ಏಳನೆಯ ಗುಣವಾಗಿ ಹೇಳಿದ್ದು ಇಬಾದುರ್ರಹ್ಮಾನ್ ಶಿರ್ಕಿನ ಸಮೀಪಕ್ಕೆ ಕೂಡ ಹೋಗಲಿಕ್ಕಿಲ್ಲ ಎಂದಾಗಿದೆ. ಕಾರಣವೇನೆಂದರೆ, ಅಲ್ಲಾಹನ ದೃಷ್ಟಿಯಲ್ಲಿ ಅತಿ ದೊಡ್ಡ ಅಕ್ರಮ ಶಿರ್ಕಾಗಿದೆ. ಅಲ್ಲಾಹನು ಹೇಳುತ್ತಾನೆ: ಬೇರೆಲ್ಲ ಪಾಪಗಳು ಕ್ಷಮಿಸಲ್ಪಡಬಹುದು. ಆದರೆ ಶಿರ್ಕ್ ಕ್ಷಮಿಸಲ್ಪಡದು. ಇಬಾದುರ್ರಹ್ಮಾನನ್ನು ಜೋಡಿಸಿಕೊಂಡು ಶಿರ್ಕ್ ಪರಾಮರ್ಶಿಸಲ್ಪಟ್ಟಿರುವುದರಿಂದ ತಿಳಿದು ಬರುವುದೇನೆಂದರೆ, ಇದು ಬಾಹ್ಯವಾಗಿ ಕಾಣುವ ವಿಗ್ರಹಾರಾಧನೆಯಲ್ಲವೆಂದಾಗಿದೆ. ಸೂಕ್ಷ್ಮವಾದ ಶಿರ್ಕ್‌ನಿಂದಲೂ ಅವರು ದೂರನಿಲ್ಲುವರು. ಅವರ ಆರಾಧನೆಗಳು ಮತ್ತು ಬಾಧ್ಯತೆ ನಿರ್ವಹಣೆ ಎಲ್ಲವೂ ಅಲ್ಲಾಹನ ಆಜ್ಞಾನುಸಾರ

ವಾಗಿರುವುವು. ಗುಪ್ತ ಶಿರ್ಕಿಗೆ ಕಾರಣವಾಗಬಾರದೆಂದು ಚಿಂತಿಸುತ್ತಾ ಬಹಳ ಜಾಗರೂಕತೆಯಿಂದ ಅವರು ವರ್ತಿಸುತ್ತಾರೆ. ಬಹಳ ಜಾಗ್ರತೆಯಿಂದ ಅವರು ಮುಂದಕ್ಕೆ ಸಾಗುತ್ತಾರೆ. ಅವರ ಉದ್ಯೋಗಗಳೂ ಇತರ ಪ್ರವೃತ್ತಿಗಳೂ ಅವರ ಆರಾಧನೆಗೆ ತಡೆಯಾಗುವುದಿಲ್ಲ. ಕಳೆದ ಖುತುಬದಲ್ಲಿ ಇದಕ್ಕೆ ಸಂಬಂಧಿಸಿ ನಾನು ಹೇಳಿದ್ದೇನೆ.

ಎಂಟನೇ ಗುಣವಾಗಿ ಹೇಳಿದ್ದು ಅನಗತ್ಯವಾಗಿ ಯಾವುದೇ ಜೀವಿಯನ್ನು ಅವರು ಕೊಲ್ಲಲಿಕ್ಕಿಲ್ಲ ಎಂದಾಗಿದೆ. ಹಝ್ರತ್ ಪೈಗಂಬರ್(ಸ) ಮತ್ತು ಶಿಷ್ಯರು, ಖಿಲಫಾಯೆ ರಾಶಿದ, ಅವರ ನಂತರ ಮುಸ್ಲಿಮರೂ ಯುದ್ಧ ಮಾಡಿದ್ದರೆ ಅದು ತಖ್ವ (ಭಯಭಕ್ತಿ, ನೀತಿ ನ್ಯಾಯ) ದಲ್ಲಿದ್ದುಕೊಂಡಾಗಿತ್ತು. ಮಾತ್ರವಲ್ಲ, ಶತ್ರುಗಳು ಹದ್ದು ಮೀರಿದುದರಿಂದಲೂ ಅವರ ಅಕ್ರಮವನ್ನು ತಡೆಯಲಿಕ್ಕೂ ಬೇಕಾಗಿ ಅವರು ಯುದ್ಧ ಮಾಡಿದ್ದರು. ಇಂತಹ ಯುದ್ಧಗಳಲ್ಲಿ ಸಹ ಹಝ್ರತ್ ಪೈಗಂಬರ್(ಸ) ಮತ್ತು ಖಿಲಫಾಯೆ ರಾಶಿದ ನೀಡಿದ್ದ ನಿರ್ದೇಶನವೇನೆಂದರೆ, ಮಕ್ಕಳನ್ನೂ ಮಹಿಳೆಯರನ್ನೂ ಧರ್ಮ ಪಂಡಿತರನ್ನೂ ಅವರು ಯುದ್ಧದಲ್ಲಿ ಭಾಗವಹಿಸದಿದ್ದರೆ ಕೊಲ್ಲಬಾರದೆಂದಾಗಿದೆ. ಆದರೆ ಎರಡನೇ ಲೋಕ ಮಹಾಯುದ್ಧದಲ್ಲಿ ನಾವು ಕಂಡದ್ದೇನು. ಅಂದು ಲಕ್ಷಗಟ್ಟಲೆ ನಿರಪರಾಧಿಗಳಾದ ಜಪಾನಿಯರನ್ನು ಕೊಂದರು. ಇಂದು ಸಹ ಶಾಂತಿ ಸ್ಥಾಪಿಸುವುದೆಂಬ ಹೆಸರು ಹೇಳಿ ಬಾಂಬರ್ ವಿಮಾನಗಳನ್ನು ಉಪಯೋಗಿಸಿ ಆಕ್ರಮಣ ಮಾಡಿ ನಿರಪರಾಧಿಗಳಾದ ನಗರವಾಸಿಗಳನ್ನು ಕೊಲ್ಲುತ್ತಿದ್ದಾರೆ. ಇಸ್ಲಾಮನ್ನು ಆಕ್ಷೇಪಿಸುವವರ ಅವಸ್ಥೆ ಇದಾಗಿದೆ. ಆದರೆ ತಾವು ಇಬಾದುರ್ರಹ್ಮಾನ್ ಎಂದು ವಾದಿಸುವ ಮುಸ್ಲಿಮರು ಆತ್ಮಹತ್ಯಾ ಸ್ಫೋಟನಗಳನ್ನು ನಡೆಸಿ ನಿರಪರಾಧಿಗಳ ರಕ್ತ ಹರಿಸುತ್ತಾರೆ. ಇದು ಧರ್ಮದ ನಾಮದಲ್ಲಿ, ಇಸ್ಲಾಮಿನ ನಾಮದಲ್ಲಿ ರಕ್ತ ಹರಿಸುವುದು ಭಯಾನಕವಾದ ಮತ್ತೊಂದು ಸಮಸ್ಯೆಯಾಗಿದೆ. ಹೀಗಿರುವವರ ಕುರಿತು ಅಲ್ಲಾಹನ ತೀರ್ಮಾನವೇನೆಂದರೆ, ಅವರು ಯಾವುದೇ ಕಾರಣದಿಂದ ಇಬಾದುರ್ರಹ್ಮಾನ್ ಆಗಲಾರರು ಎಂದಾಗಿದೆ.

ಪರಮ ದಯಾವಂತ ಅಲ್ಲಾಹನ ಭಕ್ತದಾಸರ ಒಂಬತ್ತನೇ ಗುಣವಾಗಿ ಹೇಳಿದ್ದು ಅವರು ವ್ಯಭಿಚರಿಸಲಿಕ್ಕಿಲ್ಲ ಎಂದಾಗಿದೆ. ಇದರಲ್ಲಿ ಪ್ರತ್ಯಕ್ಷವಾದ ವ್ಯಭಿಚಾರ ಮತ್ತು ಅದರೊಂದಿಗೆ ಬಹಳ ಕೆಟ್ಟ ಪ್ರೋಗ್ರಾಮ್‌ಗಳನ್ನು ಕಂಡು ಅದರಲ್ಲಿ ಆನಂದಿಸುವುದು ಸಹ ಸೇರುತ್ತದೆ. ಇಂಟರ್‌ನೆಟ್‌ನಲ್ಲೂ ಟಿ.ವಿ. ಚ್ಯಾನೆಲ್‌ಗಳಲ್ಲೂ ಈ ಕಾಲದಲ್ಲಿ ಕಾಣುವ ದೃಶ್ಯಗಳು ಮಾನಸಿಕವಾಗಿಯೂ ದೃಷ್ಟಿಪರವಾಗಿಯೂ ಇರುವ ವ್ಯಭಿಚಾರವಾಗಿದೆ. ಇದರಿಂದೆಲ್ಲ ಅಹ್ಮದಿಯರು ಸುರಕ್ಷಿತರಾಗಿರಬೇಕು.

ಹತ್ತನೇ ಗುಣವಾಗಿ ಹೇಳಿದ್ದು ಇಬಾದುರ್ರಹ್ಮಾನ್ ಸುಳ್ಳು ಹೇಳಲಾರರು, ಸುಳ್ಳು ಸಾಕ್ಷಿ ಹೇಳಲಾರರು ಎಂದಾಗಿದೆ. ಸುಳ್ಳು ಸಮೂಹದ ಅಧಃಪತನಕ್ಕೂ ನಾಶಕ್ಕೂ ದೊಡ್ಡ ಪಾತ್ರವಹಿಸುತ್ತದೆ. ಅಲ್ಲಾಹನ ದಾಸರು ಮತ್ತು ದೈವಿಕ ಸಂಘಟನೆಗಳು ಉನ್ನತಿಗೆ ಏರಿಹೋಗಬೇಕಾದವರಾಗಿದ್ದಾರೆ. ಅಭಿವೃದ್ಧಿಯಿಂದ ಅಭಿವೃದ್ಧಿಗೆ ಅವರು ಮುನ್ನೇರಬೇಕಾಗಿದೆ. ಅವರಲ್ಲಿ ಸುಳ್ಳು ವ್ಯಾಪಿಸುವುದಾದರೆ ಮತ್ತೆ ಅವರು ಹೇಗೆ ಅಲ್ಲಾಹನು ಅನುಗ್ರಹಿಸುವನೆಂದು ವಾಗ್ದಾನ ಮಾಡಿದ್ದ ಅವನ ವಿಶಿಷ್ಟ ದಾಸರಲ್ಲಿ ಸೇರುವರು? ಆದುದರಿಂದ ಅಹ್ಮದಿಯರು ತಮ್ಮ ಸಾಕ್ಷ್ಯ ನೀಡುವುದರಲ್ಲೂ ತಮ್ಮ ವ್ಯಾಪಾರಗಳಲ್ಲೂ ಶೇಕಡ ನೂರು ಸತ್ಯದಲ್ಲಿ ದೃಢವಾಗಿ ನಿಲ್ಲಬೇಕಾಗಿದೆ. ಉದಾಹರಣೆಗೆ, ವಿವಾಹ ಸಮಸ್ಯೆಯನ್ನೇ ತೆಗೆಯೋಣ. ನಿಖಾಹ್ ಸಂದರ್ಭದಲ್ಲಿ, ಎಲ್ಲ ವಿಚಾರಗಳನ್ನು ಮುಚ್ಚುಮರೆಯಿಲ್ಲದೆ ಹೇಳಲಾಗುವುದೆಂಬ ಭರವಸೆಯಲ್ಲಿ ಸಂಬಂಧ ಕುದುರಿಸಲ್ಪಡುತ್ತದೆ. ಯಾವ ಸಂದೇಹಕ್ಕೂ ಎಡೆಯಿಲ್ಲದ ರೀತಿಯಲ್ಲಿ ಸತ್ಯ ನುಡಿಯಲಾಗುವುದೆಂದು ಒಪ್ಪುತ್ತಾರೆ. ವಕ್ರವಾಗಿ ಏನನ್ನೂ ಹೇಳದೆ ನೇರವಾಗಿ ಎಲ್ಲವನ್ನೂ ಹೇಳಲಾಗುವುದೆಂದು ಸಮ್ಮತಿಸುತ್ತಾರೆ. ಆದರೆ ಮದುವೆಯ ಬಳಿಕ ಹೆಣ್ಣು ಮತ್ತು ಗಂಡು ಪರಸ್ಪರ ತಪ್ಪಾದ ರೀತಿಯಲ್ಲಿ ವಿಚಾರಗಳನ್ನು ಸಮರ್ಥಿಸುತ್ತಾರೆ. ಎರಡೂ ಕಡೆಯವರು ವಿಷಯಗಳನ್ನು ವಕ್ರವಾದ ಮಾರ್ಗದಲ್ಲಿ ಮುಂದಕ್ಕೊಯ್ಯುತ್ತಾರೆ. ಪರಿಣಾಮವಾಗಿ ಈ ಸಂಬಂಧದಲ್ಲಿ ಒಡಕುಂಟಾಗುತ್ತದೆ. ಹಾಗೆ ಈ ಸಂಬಂಧ ವಿಚ್ಛೇದಿಸಲ್ಪಡುತ್ತದೆ. ಸ್ವಾರ್ಥ ಮನೋಭಾವ ಮತ್ತು ಅಹಂ ಕಾರಣದಿಂದ ಸಂಬಂಧ ಕಡಿಯುತ್ತದೆ. ಮಕ್ಕಳಿದ್ದರೆ ಅವರು ಸಹ ನಷ್ಟವಾಗುತ್ತಾರೆ. ನಾನು ಹಲವು ಸಲ ಈ ವಿಚಾರವನ್ನು ಹೇಳಿದ್ದೇನೆ. ಆದುದರಿಂದ ಅಲ್ಲಾಹನೊಡನೆ ಹೊಣೆಗಾರಿಕೆಯನ್ನು ನಿರ್ವಹಿಸಲಿಕ್ಕೂ ಸೃಷ್ಟಿಗಳೊಡನೆ ಜವಾಬ್ದಾರಿಕೆಯನ್ನು ನಿರ್ವಹಿಸಲಿಕ್ಕೂ ಎಲ್ಲ ವಿಧ ಸುಳ್ಳಿನೊಡನೆ ಒಬ್ಬ ವಿಶ್ವಾಸಿಗೆ ದ್ವೇಷ ಉಂಟಾಗಬೇಕಾಗಿದೆ.

ಹನ್ನೊಂದನೆಯ ಗುಣವಾಗಿ ಹೇಳಿದ್ದು "ಮರ್ರೂಬಿಲ್ಲಿಗ್ವಿ ಮರ್ರೂ ಕಿರಾಮಾ" ಎಂದಾಗಿದೆ. ಅವರು ಭೌತಿಕ ಸುಖಾಡಂಬರಗಳಲ್ಲಿ ಮಗ್ನರಾಗಿ ಅದರಲ್ಲಿ ಲೀನರಾಗಲಿಕ್ಕಿಲ್ಲ. ಈ ಕಾಲದ ವ್ಯರ್ಥವಾದ ವಿಚಾರಗಳ ಕುರಿತು ನಾನು ಹೇಳಿದ್ದೇನೆ. ಅದರಲ್ಲಿ ಒಂದು ಇಂಟರ್‌ನೆಟ್ ಆಗಿದೆ. ವಿವಿಧ ರೀತಿಯಲ್ಲಿರುವ ಪ್ರೋಗ್ರಾಮ್‌ಗಳನ್ನು ತೋರಿಸುವುದರಲ್ಲಿ ಅವರು ಮುಳುಗಿದ್ದಾರೆ. ಹಾಗೆಯೇ ಟಿ.ವಿ. ಚ್ಯಾನೆಲ್‌ಗಳು. ಈ ಕಾಲದಲ್ಲಿ ಗಂಡು ಮಕ್ಕಳೂ ಹೆಣ್ಣು ಮಕ್ಕಳೂ ಶಾಲೆ-ಕಾಲೇಜುಗಳಲ್ಲಿ ಗುಂಪುಗಳಾಗಿ ತಿರುಗಾಡುತ್ತಾರೆ. ಕ್ಲಬ್ಬಿಗೆ ಹೋಗುತ್ತಾರೆ. ಡ್ಯಾನ್ಸ್, ಹಾಡು ಇತ್ಯಾದಿ ಕಾರ್ಯಕ್ರಮಗಳನ್ನು ನಡೆಸುತ್ತಾರೆ. ಅಥವಾ ಅಂತಹ ಕಾರ್ಯಕ್ರಮಗಳನ್ನು ನೋಡಲು ಹೋಗುತ್ತಾರೆ. ಒಬ್ಬ ವಿಶ್ವಾಸಿಗೆ ಸಂಬಂಧಿಸಿ ಇವೆಲ್ಲ ವ್ಯರ್ಥ ವಿಚಾರಗಳಾಗಿವೆ. ಇಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು ನಮಗೆ ಭೂಷಣವಲ್ಲ. ಆದುದರಿಂದ ಒಬ್ಬ ಯಥಾರ್ಥ ಅಹ್ಮದಿ ಇದರಿಂದೆಲ್ಲ ಅಗಲಿರಬೇಕಾಗಿದೆ.

ವ್ಯರ್ಥವಾದ ವಿಚಾರಗಳಲ್ಲಿ ಕಲಹ, ಗಲಭೆ ಸೇರುತ್ತವೆ. ಈ ಬಗ್ಗೆ ಸಹ ಮೊದಲು ವಿವರಿಸಲಾಗಿದೆ. ಸಮೂಹದಲ್ಲಿ ಶಾಂತಿಭಂಗ ಮಾಡುವ ಯಾವುದೇ ವಿಚಾರವೂ ಲಗ್ವ್ (ನಿಷ್ಪ್ರಯೋಜಕ)ನಲ್ಲಿ ಸೇರುತ್ತದೆ. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: "ವ ಇಧಾ ಮರ್ರೂ ಬಿಲ್ಲಗ್ವಿ ಮರ್ರೂ ಕಿರಾಮಾ - ಯಾರಿಂದಾದರೂ ನಿಷ್ಪ್ರಯೋಜಕ ವಿಚಾರ ಕೇಳುವುದಾದರೆ ಅಥವಾ ಯಾರಾದರೂ ಕಲಹ, ಗಲಭೆ ಆರಂಭಿಸಿದರೆ ಅವರು ಮಾನ್ಯವಾಗಿ ಅದರಿಂದ ಬಿಟ್ಟು ನಿಲ್ಲುತ್ತಾರೆ. ಚಿಕ್ಕ ಪುಟ್ಟ ವಿಚಾರಗಳಿಗೆ ಅವರು ಜಗಳಾಡಲಿಕ್ಕಿಲ್ಲ. ಅವರು ಸರಿಯಾಗಿ ತೊಂದರೆಗೊಳಗಾಗದೆ ಸಮಸ್ಯೆಗಳಲ್ಲಿ ಹಸ್ತಕ್ಷೇಪ ಮಾಡಲಾರರು. ಕ್ಷುಲ್ಲಕ ವಿಚಾರಗಳನ್ನು ಗಮನಿಸದೆ ಕ್ಷಮಿಸುವುದು ಶಾಂತಿಯನ್ನು ಬಯಸುವವರು ಮಾಡಬೇಕಾಗಿದೆ. ಈ ಮೇಲಿನ ಖುರ್‌ಆನ್ ವಚನದಲ್ಲಿ ಬಂದಿರುವ ಲಗ್ವ್ ಎಂಬ ಪದಕ್ಕೆ ಅರಬಿ ಭಾಷೆಯಲ್ಲಿ, ಒಬ್ಬನು ಕೆಟ್ಟ ಉದ್ದೇಶದಿಂದ ಏನಾದರೂ ಹೇಳುವುದು ಮತ್ತು ಕಷ್ಟಕ್ಕೊಳಪಡಿಸಬೇಕೆಂಬ ಉದ್ದೇಶದಿಂದ ಏನಾದರೂ ವರ್ತಿಸುವುದು, ಆದರೆ ಅದರಿಂದ ದೊಡ್ಡ ಸಮಸ್ಯೆಯೇನೂ ಉಂಟಾಗುವುದಿಲ್ಲ ಎಂಬುದಕ್ಕೆ ಬಳಸುತ್ತಾರೆ. ಸಂಕ್ಷಿಪ್ತವಾಗಿ ಇಂತಹ ಕ್ಷುಲ್ಲಕವಾದ ಕೆಟ್ಟ ವರ್ತನೆಗಳನ್ನು ಕಂಡಿಲ್ಲವೆಂದು ನಟಿಸಿ ಗೌರವದಿಂದಲೂ ಮಾನ್ಯತೆಯಿಂದಲೂ ವರ್ತಿಸುವುದು ಸೌಮ್ಯತೆಯ ಲಕ್ಷಣ.

ಹನ್ನೆರಡನೇ ಗುಣವಾಗಿ ಹೇಳಿದ್ದು ಅವರ ಮುಂದೆ ಅಲ್ಲಾಹನ ವಚನ ಓದಲ್ಪಟ್ಟಾಗ ಅವರು ಕಿವುಡರಂತಾಗಲಿ ಕುರುಡರಂತಾಗಲಿ ವರ್ತಿಸದೆ ಕಿವಿ ತೆರೆದು ವಿಷಯಗಳನ್ನು ಆಲಿಸುವವರಾಗಿದ್ದಾರೆ ಎಂದಾಗಿದೆ. ಪವಿತ್ರ ಖುರ್‌ಆನಿನ ಆಧಾರದಲ್ಲಿ ಅವರಿಗೆ ಉಪದೇಶಗಳನ್ನು ನೀಡುವಾಗ ಅದಕ್ಕನುಗುಣವಾಗಿ ವರ್ತಿಸಲಿಕ್ಕೂ ತಮ್ಮ

ಆಧ್ಯಾತ್ಮಿಕತೆಯನ್ನು ವೃದ್ಧಿಗೊಳಿಸಲಿಕ್ಕೂ ಅವರು ಪ್ರಯತ್ನಿಸುತ್ತಾರೆ. ಅದುದರಿಂದ ಇಬಾದುರ್ರಹ್ಮಾನ್ ಆಗಬೇಕಾದರೆ ಸರ್ವ ವಿಧ ಸದುದ್ದೇಶಗಳನ್ನು ಅನುಸರಿಸಿ ವರ್ತಿಸಲು ಪರಿಶ್ರಮಿಸಬೇಕು. ಯಾರು ಹೇಳುವುದೆಂದು ನೋಡದೆ ಅಲ್ಲಾಹ್ ಮತ್ತು ಅಲ್ಲಾಹನ ಪ್ರವಾದಿಯ ಹೆಸರಿನಲ್ಲಿ ಹೇಳಲ್ಪಡುವ ವಿಚಾರಗಳನ್ನು ಅನುಸರಿಸಲು ಯತ್ನಿಸಿರಿ. ಕರ್ಮಗಳಿಲ್ಲದಿದ್ದರೆ ದಾರಿ ತಪ್ಪಲು ಸಂದರ್ಭ ಉಂಟಾದೀತು. ಮಾತ್ರವಲ್ಲ ಇಬಾದುರ್ರಹ್ಮಾನಿನ ಗುಣದಿಂದ ಹೊರದೂಡಲ್ಪಟ್ಟು ಜಮಾಅತಿನಿಂದ ಕೂಡ ಅಗಲಿ ಹೋಗಲು ಎಡೆಯಾಗುವುದು.

ಹದಿಮೂರನೇ ಗುಣವಾಗಿ ಹೇಳಿದ್ದು, ಅವರು ತಮ್ಮ ಬಾಳ ಸಂಗಾತಿಗಳಿಗೆ ಮತ್ತು ಮಕ್ಕಳಿಗೋಸ್ಕರ ಹೀಗೆ ಪ್ರಾರ್ಥಿಸುವವರೆಂದಾಗಿದೆ: "ನಮ್ಮ ಪ್ರಭೂ, ನಮ್ಮ ಬಾಳಸಂಗಾತಿಗಳನ್ನೂ ನಮ್ಮ ಮಕ್ಕಳನ್ನೂ ನಮಗೆ ನಯನಾನಂದಕರವಾಗಿ ಮಾಡು." ಭಾವಿ ತಲೆಮಾರಿನ ನೆಲೆನಿಲ್ಲುವಿಕೆಗಾಗಿ ಅವರ ಧಾರ್ಮಿಕ ಮತ್ತು ಭೌತಿಕ ಉನ್ನತಿಗೋಸ್ಕರ ಬಾಹ್ಯ ಪ್ರಯತ್ನಗಳನ್ನು ಮಾಡುವುದರೊಂದಿಗೆ ಅವರಿಗೋಸ್ಕರ ಪ್ರಾರ್ಥಿಸುವುದು ಸಹ ಅನಿವಾರ್ಯವಾಗಿದೆ. ಕಾರಣವೇನೆಂದರೆ, ಅಲ್ಲಾಹನು ಸತ್ಫಲ ಉಂಟುಮಾಡುತ್ತಾನೆ. ತಮ್ಮ ಸಾಮರ್ಥ್ಯದಿಂದ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಲು ಸಾಧ್ಯವಾಗುತ್ತದೆಂದು ಯಾರಾದರೂ ಭಾವಿಸುವುದಾದರೆ ಅದು ತಪ್ಪು. ಭೌತಿಕರು ತಮ್ಮ ಮಕ್ಕಳ ಅಭಿವೃದ್ಧಿ ಕಾಣುವುದಾದರೆ ಅದು ಸಹ ಅಲ್ಲಾಹನ ರಹ್ಮಾನಿಯ್ಯತ್ (ಪರಮ ದಯಾವಂತ) ಎಂಬ ಗುಣದ ಫಲವಾಗಿ ಲಭಿಸುವುದಾಗಿದೆ. ಬೇರೆ ಮಾತಿನಲ್ಲಿ ಹೇಳುವುದಾದರೆ, ಆ ದೇವಗುಣದಿಂದ ಅವರು ಪ್ರಯೋಜನ ಪಡೆಯುತ್ತಾರೆ. ಅದು ಕೇವಲ ಭೌತಿಕ ವಿಚಾರಗಳ ವಿಜಯವಾಗಿದೆ; ರಹ್ಮಾನನ ಭಕ್ತದಾಸರಿಗೆ ಸಿಗುವ ವಿಜಯವಲ್ಲ. ಕಾರಣವೇನೆಂದರೆ, ಅಲ್ಲಾಹನು ಅವರಿಗೆ "ಸಜ್ಜನರಿಗೆ ನಾಯಕರಾಗುವ" ಸ್ಥಾನವನ್ನು ನೀಡಲಿಲ್ಲ. ಮುತ್ತಖಿಗಳ (ಸಜ್ಜನರ) ಇಮಾಮಾಗಲಿಕ್ಕೆ ತಖ್ವದಲ್ಲಿ (ಭಯ-ಭಕ್ತಿಯಲ್ಲಿ) ಮುನ್ನೇರಲಿಕ್ಕೆ ಅವರು ಪ್ರಯತ್ನಿಸಲಿಲ್ಲ. ಆದರೆ ಯಾರು ತಮ್ಮ ಮಕ್ಕಳು ತಖ್ವದಲ್ಲಿ ಮುನ್ನೇರಬೇಕೆಂದು ಪ್ರಾರ್ಥಿಸುತ್ತಾರೋ, ಅವರು ಮಕ್ಕಳ ಭೌತಿಕವಾದ ಅಭಿವೃದ್ಧಿಗೆ ಮಾತ್ರವಲ್ಲ ಪ್ರಾರ್ಥಿಸುವುದು; ಬದಲು, ಅವರ ಆಧ್ಯಾತ್ಮಿಕ ಮತ್ತು ಭೌತಿಕ ಅಭಿವೃದ್ಧಿಗೋಸ್ಕರ ಬೇಡುತ್ತಾರೆ. ಅವರು ಸ್ವಯಂ ತಖ್ವದಲ್ಲಿ ಮುನ್ನೇರಲು ಪ್ರಯತ್ನಿಸುತ್ತಾರೆ. ಹೀಗಿರುವವರು ಅಲ್ಲಾಹನ ಅನುಗ್ರಹವನ್ನು ಪಡೆಯುವವರಾಗುತ್ತಾರೆ.

ಈ ಕಾಲದಲ್ಲಿ ಸಮೂಹದಲ್ಲಿ ಎಲ್ಲೆಡೆಯೂ ಮಕ್ಕಳ ಭೌತಿಕ ವಿದ್ಯಾಭ್ಯಾಸದ ಕುರಿತು ಮತ್ತು ಅವರ ಭೌತಿಕ ಪ್ರಗತಿಯ ಕುರಿತು ಮಾತಾಪಿತರು ಚಿಂತಾಕ್ರಾಂತರಾಗಿದ್ದಾರೆ. ಆದರೆ ಆಧ್ಯಾತ್ಮಿಕ ವಿಚಾರದಲ್ಲಿ ಚಿಂತೆ ಬಹಳ ಕಡಿಮೆ. ಇಲ್ಲಿ ಪಾಶ್ಚಾತ್ಯ ದೇಶಗಳಲ್ಲಿ ಸ್ವಾತಂತ್ರ್ಯದ ಹೆಸರು ಹೇಳಿ ಮಕ್ಕಳನ್ನು ಸಂಪೂರ್ಣವಾಗಿ ಬಿಟ್ಟುಬಿಟ್ಟಿರುವರು. ಮಾತಾಪಿತರ ಉಪದೇಶಗಳನ್ನು ಅವರು ಕೇಳಲು ಸಿದ್ಧರಲ್ಲ. ಈ ಸ್ವಾತಂತ್ರ್ಯ ಅಗತ್ಯಕ್ಕಿಂತ ಹೆಚ್ಚಾಯಿತೆಂದು ಈಗ ಅವರಿಗೆ ತೋಚ ತೊಡಗಿದೆ. ಮಾತ್ರವಲ್ಲ ಈ ಬಗ್ಗೆ ಪ್ರೋಗ್ರಾಮ್‌ಗಳು ಟಿ.ವಿ.ಯಲ್ಲಿ ಬರುತ್ತಿವೆ. ಈ ಸಮೂಹದಲ್ಲಿ ಮಾತಾಪಿತರು ಮಕ್ಕಳ ನಾಯಕರಾಗುವ ಬದಲು ·ಮಕ್ಕಳು ಮಾತಾಪಿತರಿಗೆ ನಾಯಕರಾಗಿ ಮಾರ್ಪಟ್ಟಿದ್ದಾರೆ. ಮಕ್ಕಳು ಮಾತಾಪಿತರ ಮೇಲೆ ಕೈಯೆತ್ತಲು ತೊಡಗಿದ್ದಾರೆ. ಮಾತಾಪಿತರು ಏನಾದರೂ ವಿಚಾರದಲ್ಲಿ ಕ್ಷುಲ್ಲಕವಾಗಿ ವಿರೋಧಿಸಿದರೆ ಅಥವಾ ತಡೆಯುವ ಮಾತು ಹೇಳಿದರೆ ಅದನ್ನು ಸಹಿಸಲು ಮಕ್ಕಳಿಂದಾಗುವುದಿಲ್ಲ. ಇನ್ನು ಯಾರಾದರೂ ಏನಾದರೂ ಸದುಪದೇಶ ಮಾಡಿದರೆ ಅದು ಅವರಿಗೆ ಅಸಹನೀಯವಾಗುತ್ತದೆ.

ಭಾವಿ ತಲೆಮಾರನ್ನು ರಕ್ಷಿಸಲು ಮಾತಾಪಿತರು ಎಷ್ಟೆಲ್ಲ ಕ್ಷಮಿಸಬೇಕೆಂದೂ ಮಕ್ಕಳಿಗೆ ಎಷ್ಟು ಶಿಕ್ಷೆ ನೀಡಬೇಕೆಂದೂ ಸೀಮೆಗಳನ್ನು ನಿರ್ಧರಿಸಬೇಕೆಂಬ ಧ್ವನಿ ಈಗ ಇಲ್ಲೆಲ್ಲ ಕೇಳಿಸಲು ತೊಡಗಿದೆ. ಕಾರಣವೇನೆಂದರೆ, ಇಲ್ಲಿ ಮಾತಾಪಿತರು ಮಕ್ಕಳ ತಪ್ಪಿಗೇನಾದರೂ ಶಿಕ್ಷೆ ಕೊಟ್ಟರೆ ಮಕ್ಕಳ ಕ್ಷೇಮ ಕಾರ್ಯಗಳನ್ನು ನೋಡಿಕೊಳ್ಳುವ ಸಂಸ್ಥೆಗಳು ಮಕ್ಕಳನ್ನು ತಮ್ಮ ಜೊತೆಯಲ್ಲಿ ಕರಕೊಂಡು ಹೋಗುತ್ತಾರೆ. ತಮಗೆ ಏನಾದರೂ ಹೇಳಿದರೆ ತಾವು ಅಲ್ಲಿಗೆ ಹೋಗುವೆವೆಂದು ಹೇಳಿ ಮಕ್ಕಳು ಮಾತಾಪಿತರಿಗೆ ಬೆದರಿಕೆ ನೀಡುತ್ತಾರೆ. ಈ ವಿಚಾರ ಮಕ್ಕಳನ್ನು ಅತಿಯಾಗಿ ಸ್ವಚ್ಛಂದರನ್ನಾಗಿ ಮಾಡಿದೆ. ಮಾತಾಪಿತರು ಮತ್ತು ಮಕ್ಕಳ ಪರಸ್ಪರ ಸಂಬಂಧ ಬಹಳ ಬಿಗಡಾಯಿಸುತ್ತಿದೆ. ಇದರ ಪ್ರಧಾನ ಕಾರಣ ಪ್ರಾರ್ಥಿಸದಿರುವುದೂ ಆಗಿದೆ. ಮಕ್ಕಳ ಶಿಕ್ಷಣ ಸರಿಯಾದ ರೀತಿಯಲ್ಲಿ ನಡೆಯಲಿಕ್ಕೋಸ್ಕರ ಪ್ರಾರ್ಥಿಸಲಿಕ್ಕೂ ಅದರೊಂದಿಗೆ ಉತ್ತಮ ಮಾದರಿಯನ್ನು ತೋರಿಸಲಿಕ್ಕೂ ಅಲ್ಲಾಹನು ಆಜ್ಞಾಪಿಸಿದ್ದಾನೆ. ಹಝ್ರತ್ ಮಸೀಹ್ ಮೌಊದ್[ಅ] ನುಡಿಯುತ್ತಾರೆ: "ಮಕ್ಕಳುಂಟಾಗಬೇಕೆಂದು ಜನರು ಅತಿಯಾಗಿ ಬಯಸುತ್ತಾರೆ. ಮಕ್ಕಳು ಹುಟ್ಟುತ್ತವೆ. ಆದರೆ ಮಕ್ಕಳ ಶಿಕ್ಷಣದ ಬಗ್ಗೆ ಅಥವಾ ಅವರನ್ನು ಉತ್ತಮರೂ ಸಜ್ಜನರೂ ಅಲ್ಲಾಹನನ್ನು ಅನುಸರಿಸುವವರೂ ಆಗಿ ಮಾರ್ಪಡಿಸಬೇಕೆಂಬ ವಿಚಾರದಲ್ಲಿ ಪ್ರಯತ್ನಿಸುವುದನ್ನು ಕಾಣಲು ಸಾಧ್ಯವಾಗುವುದಿಲ್ಲ. ಅವರಿಗೋಸ್ಕರ ಪ್ರಾರ್ಥಿಸುವುದಿಲ್ಲ. ಅವರಿಗೆ ತರಬೇತಿ ನೀಡುವ ವಿಚಾರದಲ್ಲಿ ಚಿಂತಿಸುವುದಿಲ್ಲ. ತರಬೇತಿಗೂ ವ್ಯತ್ಯಸ್ತ ಕ್ಷೇತ್ರಗಳಿವೆ. ಯಾವ ಪ್ರಾಯದಲ್ಲಿ ಏನು ಕಲಿಸಬೇಕು, ಯಾವ ವಯಸ್ಸಿನಲ್ಲಿ ಮಕ್ಕಳನ್ನು ನಿಯಂತ್ರಿಸಬೇಕು ಎಂಬುದರ ಬಗ್ಗೆ ಗಮನಿಸುವುದಿಲ್ಲ. ನನ್ನ ಸ್ನೇಹಿತರಿಗೂ ಮಕ್ಕಳಿಗೂ ಪತ್ನಿಗೂ ಬೇಕಾಗಿ ಪ್ರಾರ್ಥಿಸದ ಒಂದು ಪ್ರಾರ್ಥನೆಯಾದರೂ ನಾನು ಅನುಷ್ಠಿಸುವುದಿಲ್ಲ ಎಂಬುದು ನನ್ನ ಸ್ಥಿತಿ. ಹಲವು ಮಾತಾಪಿತರು ತಮ್ಮ ಮಕ್ಕಳಿಗೆ ದುಃಸ್ವಭಾವ ಕಲಿಸುತ್ತಾರೆ. ಅವರು ತಪ್ಪು ಮಾಡಲು ತೊಡಗುವಾಗ ಪ್ರಾರಂಭದಲ್ಲೇ ಅವರನ್ನು ತಡೆಯುವುದಿಲ್ಲ. ಈ ಕಾರಣದಿಂದ ಕ್ರಮೇಣ ಅವರು ಶೂರರೂ ಧೈರ್ಯವಂತರೂ ಆಗುತ್ತಾರೆ. ಮಕ್ಕಳು ಹುಟ್ಟಬೇಕೆಂದು ಬಯಸುವುದು ಅವರು ಧರ್ಮದ ಸೇವಕರಾಗಬೇಕೆಂಬ ಇಚ್ಛೆಯಿಂದಲ್ಲ. ಬದಲು, ಇಲ್ಲಿ ತಮಗೆ ಓರ್ವ ಉತ್ತರಾಧಿಕಾರಿ ಇರಬೇಕೆಂದು ಅವರು ಬಯಸುತ್ತಾರೆ. ಮಕ್ಕಳು ಹುಟ್ಟಿದರೆ ಅವರಿಗೆ ಧಾರ್ಮಿಕ ಶಿಕ್ಷಣ ನೀಡುವ ವಿಚಾರದಲ್ಲಿ ಗಮನಿಸುವುದಿಲ್ಲ; ಅವರ ವಿಶ್ವಾಸಗಳನ್ನು ಸರಿಪಡಿಸಿಕೊಡುವುದಿಲ್ಲ. ಮಕ್ಕಳ ಸ್ವಭಾವ ಸಂಸ್ಕರಣೆಗೆ ಪ್ರಯತ್ನಿಸುವುದಿಲ್ಲ."

ಮಕ್ಕಳ ಸ್ವಭಾವವನ್ನು ಕಿರಿಯ ಪ್ರಾಯದಲ್ಲೇ ಸರಿಪಡಿಸಿದರೆ ಮಾತಾಪಿತರನ್ನು ಧಿಕ್ಕರಿಸಲಿಕ್ಕೆ ಯಾವ ಮಗುವೂ ಧೈರ್ಯ ತೋರಿಸಲಿಕ್ಕಿಲ್ಲ. ಮಕ್ಕಳ ವಸ್ತ್ರಧಾರಣೆ ಬಗ್ಗೆ ನಾನು ಇದಕ್ಕಿಂತ ಮುಂಚೆ ಸಹ ಹೇಳಿದ್ದೇನೆ. ಹೆಣ್ಣು ಮಕ್ಕಳ ವಸ್ತ್ರಧಾರಣೆ ಹೇಗಿರಬೇಕೆಂದು ನಾಲ್ಕನೆಯ ಅಥವಾ ಐದನೆಯ ಪ್ರಾಯದಲ್ಲೇ ಅವರಿಗೆ ಕಲಿಸಬೇಕು. ಆಗ, ದೊಡ್ಡ ಪ್ರಾಯಕ್ಕೆ ಬಂದಾಗ ಸರಿಯಾದ ವಸ್ತ್ರಧಾರಣೆ ಬಗ್ಗೆ ಅವರಿಗೆ ತಿಳುವಳಿಕೆಯಾಗುತ್ತದೆ. ಹದಿಮೂರು, ಹದಿನಾಲ್ಕನೆಯ ವಯಸ್ಸಿನಲ್ಲಿ ನಾವು ಅವಳೊಡನೆ ಜೀನ್ಸ್ ಮತ್ತು ಬ್ಲೌಸ್ ಬಿಟ್ಟು ಮೈಮುಚ್ಚುವ ಸರಿಯಾದ ಬೇರೆ ವಸ್ತ್ರ ಧರಿಸಬೇಕೆಂದು ಹೇಳಿದರೆ ಅವಳು ಕೂಡಲೇ ಅದಕ್ಕೆ ವಿರುದ್ಧವಾಗಿ ಪ್ರತಿಕ್ರಿಯಿಸುವಳು. ಆದ್ದರಿಂದ ಅವರ ಸ್ವಭಾವ ಸಂಸ್ಕರಣೆಕ್ಕಾಗಿ ಪ್ರಯತ್ನಿಸುವುದಿಲ್ಲ ಎಂದು ಹೇಳಿದ್ದು. ಚಿಕ್ಕ ಪ್ರಾಯದಲ್ಲೇ ಈ ವಿಚಾರದಲ್ಲಿ ಗಮನವಿರಬೇಕಾಗಿದೆ.

ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: "ನೆನಪಿಡಿರಿ. ಸಮೀಪ ಸಂಬಂಧಗಳನ್ನು ಗುರುತಿಸದವನ ವಿಶ್ವಾಸ ಸರಿಯಾಗುವುದಿಲ್ಲ.

ನಿಕಟ ಸಂಬಂಧಗಳನ್ನು ಕೂಡ ಗುರುತಿಸದವರಿಂದ ಬೇರೆ ಯಾವ ಒಳಿತನ್ನು ಪ್ರತೀಕ್ಷಿಸಲಿಕ್ಕಿದೆ? ಮಕ್ಕಳು ಹುಟ್ಟಬೇಕೆಂದು ಯಾಕೆ ಬಯಸಬೇಕೆಂಬುದರ ಕುರಿತು ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೀಗೆ ಹೇಳುತ್ತಾನೆ: رَبَّنَا هَبْ لَنَا مِنْ أَزْوَاجِنَا وَذُرِّيَّاتِنَا قُرَّةَ أَعْيُنٍ وَاجْعَلْنَا لِلْمُتَّقِينَ إِمَامًا

"ನಮ್ಮ ಪ್ರಭೂ, ನಮ್ಮ ಬಾಳ ಸಂಗಾತಿಗಳನ್ನೂ ನಮ್ಮ ಮಕ್ಕಳನ್ನೂ ನಮಗೆ ನಯನಾನಂದಕರವಾಗಿ ಮಾಡು ಹಾಗೂ ನಮ್ಮನ್ನು ಸಜ್ಜನರಿಗೆ ನಾಯಕರನ್ನಾಗಿ ಮಾಡು ಎಂದು ಅವರು ಪ್ರಾರ್ಥಿಸುತ್ತಾರೆ."

ಅಲ್ಲಾಹನು ನಮ್ಮ ಬಾಳಸಂಗಾತಿಗಳಿಂದಲೂ ನಮ್ಮ ಮಕ್ಕಳಿಂದಲೂ ನಮ್ಮ ಕಣ್ಣುಗಳಿಗೆ ತಂಪುಂಟುಮಾಡಲಿ. ದುಷ್ಕರ್ಮ ಮತ್ತು ದುರ್ವರ್ತನೆ ಮಾಡದಿರುವಾಗ ಹಾಗೂ ಪರಮ ದಯಾವಂತನಾದ ಅಲ್ಲಾಹನ ಭಕ್ತದಾಸರಂತೆ ಜೀವನ ನಡೆಸುವಾಗ ಇದು ಸಾಧ್ಯವಾಗುತ್ತದೆ. ಅಲ್ಲಾಹನಿಗೆ ಬೇರೆ ಎಲ್ಲ ವಿಚಾರಗಳಿಗಿಂತ ಆದ್ಯತೆ ನೀಡಬೇಕಾಗಿದೆ. ಮುಂದುವರಿದು ಅಲ್ಲಾಹನು ಸ್ಪಷ್ಟವಾಗಿ ಹೇಳುತ್ತಾನೆ:

وَاجْعَلْنَا لِلْمُتَّقِينَ إِمَامًا ಮಕ್ಕಳು ಸಜ್ಜನರೂ ಭಯ ಭಕ್ತಿಯುಳ್ಳವರೂ ಆಗಿದ್ದರೆ ಖಂಡಿತ ವಾಗಿಯೂ ಅವರ ನಾಯಕರು ಮಾತಾಪಿತರಾಗುವರು. ಇಲ್ಲಿ ಸ್ವಯಂ ಮುತ್ತಖಿ (ಸಜ್ಜನ) ಆಗುವ ಪ್ರಾರ್ಥನೆ ಸಹ ಅಡಕವಾಗಿದೆ. ಆದುದರಿಂದ ಮಕ್ಕಳ ತರಬೇತಿಗೋಸ್ಕರ ಮುತ್ತಖಿ ಮತ್ತು ಇಬಾದುರ್ರಹ್ಮಾನ್ ಆಗಬೇಕಾಗಿದೆ. ನಾವು ಮುತ್ತಖಿ ಆಗಲು ಪ್ರಯತ್ನಿಸುವಾಗ ಇಬಾದುರ್ರಹ್ಮಾನ್ ಕುರಿತು ಅಲ್ಲಾಹನು ಹೇಳಿರುವ ಗುಣಗಳು ನಮ್ಮಲ್ಲಿ ಉಂಟಾಗುವುವು. ಅಲ್ಲಾಹನ ಸಾಮೀಪ್ಯ ಸಿದ್ಧಿಸುವುದು ಇಂತಹ ವಿಚಾರಗಳಿಂದಾಗಿದೆ. ಹಝ್ರತ್ ಮಸೀಹ್ ಮೌಊದ್(ಅ) ಒಂದೆಡೆ ಹೀಗೆ ಹೇಳುತ್ತಾರೆ:

"ಮನುಷ್ಯರಲ್ಲಿ ಅತ್ಯಂತ ಅದರಣೀಯರಾದವರನ್ನು ಅಲ್ಲಾಹನು ಸಂರಕ್ಷಿಸುತ್ತಾನೆ. ಅವರು ಅಲ್ಲಾಹನೊಡನೆ ನಿಷ್ಕಪಟ ಸಂಬಂಧವನ್ನು ಸ್ಥಾಪಿಸುವವರೂ ತಮ್ಮ ಅಂತರಂಗವನ್ನು ಪರಿಶುದ್ಧವಾಗಿಡುವವರೂ ಮನುಷ್ಯ ಕುಲದೊಡನೆ ಒಳಿತು ಮತ್ತು ಸಹಾನುಭೂತಿಯಿಂದ ವರ್ತಿಸುವವರೂ ಅಲ್ಲಾಹನ ಯಥಾರ್ಥ ಅನುಸಾರಿಗಳೂ ಆಗಿರುತ್ತಾರೆ."

ಒಬ್ಬ ಯಥಾರ್ಥ ಅಹ್ಮದಿಯಲ್ಲಿ ಈ ರೀತಿಯ ಗುಣಗಳು ಇರಬೇಕಾಗಿದೆ. ಅಲ್ಲಾಹನೊಂದಿಗೆ ನಿಷ್ಕಪಟ ಸಂಬಂಧ ಸ್ಥಾಪಿಸಲಿಕ್ಕೆ ಮತ್ತು ನಮ್ಮ ಅಂತರಂಗವನ್ನು ಸದಾ ಸಂಶುದ್ಧವಾರಿಸಲಿಕ್ಕೆ ಬೇಕಾದ ಎಲ್ಲ ಗುಣಗಳನ್ನು ಸ್ವಾಯತ್ತ ಮಾಡಲು ಅಲ್ಲಾಹನು ನಮಗೆ ಸೌಭಾಗ್ಯ ದಯಪಾಲಿಸಲಿ. ಅಲ್ಲಾಹನು ನಮ್ಮನ್ನು ಅವನ ಶಾಶ್ವತವಾದ ಸ್ವರ್ಗದ ಹಕ್ಕುದಾರರನ್ನಾಗಿ ಮಾಡಲಿ. ಆಮೀನ್.

(ಭಾಷಾಂತರ : ಮುಹಮ್ಮದ್ ಯೂಸುಫ್)

# "LOVE FOR ALL HATRED FOR NONE"

# "ಎಲ್ಲರೊಡನೆ ಸ್ನೇಹ ಯಾರೊಡನೆಯೂ ದ್ವೇಷವಿಲ್ಲ"

# "ಇನ್‌ಸಾನಿಯತ್ ಜಿಂದಾಬಾದ್"

# "ಮಾನವೀಯತೆ ಚಿರಕಾಲ ಬಾಳಲಿ"

# ಮುಹಮ್ಮದ್ ಪೈಗಂಬರ್(ಸ)
## ಮುಸ್ಲಿಮೇತರ ವಿದ್ವಾಂಸರ ದೃಷ್ಟಿಯಲ್ಲಿ

* ಶಹಾಬ್ ಅಹ್ಮದ್, ಎಡ್‌ಮಂಟನ್

**ಪ್ರಸಿದ್ಧರಾದ ಮುಸ್ಲಿಮೇತರ ವಿದ್ವಾಂಸರು ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಕುರಿತು ಬರೆದ ಅಭಿಪ್ರಾಯಗಳನ್ನು ಕೆಳಗೆ ಕ್ರೋಢೀಕರಿಸಲಾಗಿದೆ.**

### ಖುಷ್ವಂತ್ ಸಿಂಗ್

"ವಿಶ್ವದ ಮುಖ್ಯ ಧರ್ಮಗಳಲ್ಲಿ ಅತ್ಯಂತ ತಪ್ಪು ಗ್ರಹಿಕೆಗೆ ಗುರಿಯಾದ ಧರ್ಮವು ಇಸ್ಲಾಮ್ ಆಗಿದೆ. ಕ್ರೈಸ್ತ ಧರ್ಮದ ನಂತರ ಅದು ಅದರ ಅನುಯಾಯಿಗಳ ಸಂಖ್ಯೆಯ ದೃಷ್ಟಿಯಲ್ಲಿ ದ್ವಿತೀಯ ಸ್ಥಾನದಲ್ಲಿದೆ. ಇತರ ಎಲ್ಲಾ ಧರ್ಮಗಳ ಪೈಕಿ ಯಾವುದೇ ಧರ್ಮಕ್ಕೆ ಹೊಸದಾಗಿ ಸೇರುವ ಜನರಿಗಿಂತ ಹೆಚ್ಚಿಗೆ ಜನರು ಇಸ್ಲಾಮಿಗೆ ಸೇರುತ್ತಿದ್ದಾರೆ. ಮುಸ್ಲಿಮರು ಮಧ್ಯಪೂರ್ವದೇಶಗಳಲ್ಲಿ, ಉತ್ತರ ಆಫ್ರಿಕಾದಲ್ಲಿ ಮತ್ತು ಸ್ಪೈನಿನಲ್ಲಿ ಪ್ರಭುತ್ವ ಗಳಿಸಿದ ನಂತರ ಇಸ್ಲಾಮಿನ ವಿರುದ್ಧ ದ್ವೇಷಾಸೂಯೆಗಳು ಕ್ರೈಸ್ತ ದೇಶಗಳಲ್ಲಿ ಹಬ್ಬಿತು. ಕ್ರೈಸ್ತ ಕ್ರೂಸೇಡರ್‌ಗಳು (ಹೋರಾಟಗಾರರು) ಇಸ್ಲಾಮನ್ನು ಅದರ ಮಾತೃ ಭೂಮಿಯಲ್ಲಿ ನಾಶಗೊಳಸಲು ಸಮರ್ಥರಾಗಲಿಲ್ಲ. ಆದರೆ ಅವರು ಇಸ್ಲಾಮ್ ಧರ್ಮದ ಸ್ಥಾಪಕರಾದ ಮುಹಮ್ಮದರನ್ನು ನಿಂದಿಸುವುದನ್ನು ಮುಂದುವರಿಸಿದರು.

"ಅವರ ಎರಡು ಮುಖ್ಯ ವಾದಗಳು ಹೀಗಿದ್ದುವು: ಒಂದು – ಇಸ್ಲಾಮ್ ಖಡ್ಗಬಲದಿಂದ ಹಬ್ಬಿತು. ಎರಡು – ಮುಹಮ್ಮದರು ಆದರ್ಶ ಸ್ವಭಾವ ಗುಣಗಳನ್ನು ಹೊಂದಿದ್ದರೆಂದು ಮುಸ್ಲಿಮರು ಪ್ರತಿಪಾದಿಸುತ್ತಾರಾದರೂ ಅವರು ಹಾಗೆ ಆದರ್ಶ ಸ್ವಭಾವ ಗುಣಗಳನ್ನು ಹೊಂದಿದವರು ಆಗಿರಲಿಲ್ಲ. ಇಸ್ಲಾಮನ್ನು ಬಲಾತ್ಕಾರದಿಂದ ಜನರ ಮೇಲೆ ಹೇರಿರಲಿಲ್ಲ ಎಂದು ಚಾರಿತ್ರಿಕ ಸಾಕ್ಷ್ಯಗಳ ಮೂಲಕ ಸಾಬೀತುಗೊಳಸಬಹುದು. ಅದನ್ನು ಮಿಲಿಯಗಟ್ಟಲೆ ಜನರು ಸ್ವಂತ ಇಚ್ಛೆಯಿಂದ ಅಂಗೀಕರಿಸಲು ಎರಡು ಹೊಸ ಕಾರಣಗಳಿದ್ದುವು. ಒಂದನೆಯದಾಗಿ, ಅದು ಜನರಿಗೆ ಸಮಾನತೆಯನ್ನು ನೀಡಿ ಮಾನವರೆಲ್ಲರೂ ಸಹೋದರರೆಂಬ ಹೊಸ ಮೌಲ್ಯವನ್ನು ಬೋಧಿಸಿತು. ಎರಡನೆಯದಾಗಿ, ಅಂದಿನ ಕಾಲದಲ್ಲಿ ಯಾರೂ ಎಂದೂ ಆಲಿಸದ, ಮಹಿಳೆಯರಿಗೆ ಹಕ್ಕುಗಳು ಎಂಬ ತತ್ವವನ್ನು ಇಸ್ಲಾಮ್ ಅವರಿಗೆ ನೀಡಿತು. ಇಂಡೋನೇಶಿಯಾ, ಮಲೇಶಿಯಾ ಮೊದಲಾದ ದೇಶಗಳಲ್ಲಿ ಇಸ್ಲಾಮ್ ಧರ್ಮವನ್ನು ಪ್ರಚಾರಗೊಳಸಿದುದು ಮುಸ್ಲಿಮ್ ಆಕ್ರಮಣಗಾರರಾಗಿರಲಿಲ್ಲ. ಮುಸ್ಲಿಮ್ ಧರ್ಮ ಪ್ರಚಾರಕರು ಅಲ್ಲಿನ ಜನರನ್ನು ಇಸ್ಲಾಮಿಗೆ ಸೇರಿಸಿದರು.

"ಅಲ್‌ಖಾಯಿದಾ, ತಾಲಿಬಾನ್ ಮೊದಲಾದ ಸಂಘಟನೆಗಳು ನಡೆಸುವ ಕೃತ್ಯಗಳು ಅಥವಾ ಅರೆಬೆಂದ ಮುಲ್ಲಾಗಳು ನೀಡುವ ಫತ್ವಾಗಳನ್ನು ಆಧಾರವಾಗಿಟ್ಟುಕೊಂಡು ಇಸ್ಲಾಮ್ ಬಗ್ಗೆ ತೀರ್ಪು ನೀಡಬಾರದು. ವೇದ ಮತ್ತು ಉಪನಿಷತ್ತುಗಳು ಪ್ರತಿಪಾದಿಸುವ ಹಿಂದೂ ಧರ್ಮದ ಬಗ್ಗೆ, ಮಸ್‌ಜಿದ್‌ಗಳನ್ನು ಕೆಡವಿಹಾಕುವ, ಧರ್ಮ ಪ್ರಚಾರಕರನ್ನು ಮತ್ತು ಸನ್ಯಾಸಿನಿಯರನ್ನು ಹತ್ಯೆಗೈಯುವ, ಪುಸ್ತಕ ಭಂಡಾರಗಳನ್ನೂ ಕಲಾಕೃತಿಗಳನ್ನೂ ಧ್ವಂಸಗೊಳಸುವ ಹಿಂದುತ್ವದ ಪ್ರತಿಪಾದಕರಾದ ಹಿಂದುಗಳ ಕೃತ್ಯಗಳನ್ನು ನೋಡಿ ತೀರ್ಪು ನೀಡಬಾರದು. ಭಿಂದ್ರನ್‌ವಾಲೆಯ ಭಾಷಣಗಳನ್ನು ಮತ್ತು ನಿರಪರಾಧಿಗಳನ್ನು ಕೊಲ್ಲುವ ಮುಂಡರನ್ನು ನೋಡಿ ಸಿಖ್ ಗುರುಗಳ ಉಪದೇಶಗಳ ಬಗ್ಗೆ ತೀರ್ಪು ನೀಡಬಾರದು.

"ಇದೇ ರೀತಿ ಮುಹಮ್ಮದರು ಏನನ್ನು ಉಪದೇಶಿಸಿದರು ಮತ್ತು ಅವರು ಹೇಗೆ ವರ್ತಿಸಿದರು ಎಂಬುದನ್ನು ಆಧಾರವಾಗಿಟ್ಟುಕೊಂಡು ನೀವು ಅವರ ಬಗ್ಗೆ ತೀರ್ಪು ನೀಡಬೇಕು ಹೊರತು ಅವರ ತಥಾಕಥಿತ ಅನುಯಾಯಿಗಳು ಅವರ ಹೆಸರಲ್ಲಿ ಮಾಡುವ ಕೃತ್ಯಗಳನ್ನು ನೋಡಿಕೊಂಡು ಅಲ್ಲ.

"ಮುಹಮ್ಮದರ ಬಗ್ಗೆ ಮಾಡಲಾಗುವ ಆಧಾರ ರಹಿತ ವಿಮರ್ಶೆಗಳಲ್ಲಿ ಒಂದು, ಅವರು ಅವರ ಪ್ರಥಮ ಪತ್ನಿ ಖದೀಜ ನಿಧನ ಹೊಂದಿದ ನಂತರ ಮಾಡಿದ ವಿವಾಹಗಳ ಕುರಿತಾಗಿದೆ. ಈ ವಿಷಯವನ್ನು ಅಂದಿನ ಕಾಲದ ಅರಬ್ ದೇಶದ ಸಾಮಾಜಿಕ ಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಪರಿಶೀಲಿಸಬೇಕಾಗಿದೆ. ಆ ಕಾಲದಲ್ಲಿ ಅರಬ್ ದೇಶದಲ್ಲಿ ವಿವಿಧ ಗೋತ್ರವರ್ಗಗಳ ಜನರು ಪರಸ್ಪರ ಹೋರಾಡುತ್ತಾ ಮತ್ತು ವ್ಯಾಪಾರಿ ಸಂಘಗಳನ್ನು ಕೊಳ್ಳೆ ಹೊಡೆಯುತ್ತಾ ಜೀವಿಸುತ್ತಿದ್ದರು. ಆಗ ಪುರುಷರು ಅಧಿಕ ಸಂಖ್ಯೆಯಲ್ಲಿ ಕೊಲ್ಲಲ್ಪಡುತ್ತಿದ್ದರು. ಅದರಿಂದ ಸ್ತ್ರೀಯರ ಸಂಖ್ಯೆ ಮತ್ತು ಪುರುಷರ ಸಂಖ್ಯೆಯಲ್ಲಿ ಆತಂಕಕಾರಿ ವ್ಯತ್ಯಾಸಗಳು ತಲೆದೋರುತ್ತಿದ್ದುವು. ಕೊಲ್ಲಲ್ಪಟ್ಟವರ ವಿಧವೆಯರಿಗೆ ಮತ್ತು ಅನಾಥರಾದ ಮಕ್ಕಳಿಗೆ ಮನೆಗಳನ್ನೂ ಜೀವನಾಧಾರವನ್ನೂ ಒದಗಿಸುವ ಆವಶ್ಯಕತೆ ಇತ್ತು. ಹೀಗೆ ಮಾಡದಿದ್ದರೆ ಅವರು ವ್ಯಭಿಚಾರಕ್ಕೆ ಮತ್ತು ಭಿಕ್ಷಾಟನೆಗೆ ಇಳಿಯುತ್ತಿದ್ದರು. ಇದನ್ನು ತಡೆಗಟ್ಟಲು ವಿಧವೆಯರಿಗೆ ವಿವಾಹ ಏರ್ಪಡಿಸಿ ಅವರಿಗೆ ಸಂರಕ್ಷಣೆ ನೀಡಲಾಗುತ್ತಿತ್ತು. ವಿವಾಹವು ವಿವಿಧ ಗೋತ್ರಗಳ ಮಧ್ಯೆ

ಸೌಹಾರ್ದ ಸಂಬಂಧ ಸ್ಥಾಪಿಸಲು ಉತ್ತಮ ಮಾರ್ಗವಾಗಿತ್ತು. ಮುಹಮ್ಮದರು ತನ್ನ ಜನತೆ ಅಂಗೀಕರಿಸಲಾರದಂತಹ ಯಾವ ಕೆಲಸವನ್ನೂ ಮಾಡಲಿಲ್ಲ. ಅವರು ಇನ್ನಷ್ಟು ಮುಂದುವರಿದರು. ಏಕಪತ್ನಿಯನ್ನು ಹೊಂದುವುದು ಅತ್ಯುತ್ತಮವೆಂದು ಹೇಳಿದ ಧರ್ಮೋಪದೇಶಕರಲ್ಲಿ ಅವರು ಪ್ರಥಮರಾಗಿದ್ದಾರೆ. ಪತ್ನಿಯರನ್ನು ಹೊಂದುವ ಗರಿಷ್ಠ ಮಿತಿಯನ್ನು ಅವರು ನಾಲ್ಕಕ್ಕೆ ಸೀಮಿತಗೊಳಿಸಿದರು. ಆದರೆ ಅವರೆಲ್ಲರನ್ನೂ ಸಮಾನವಾಗಿ ಸಂತೋಷಪಡಿಸಲು ಸಾಧ್ಯವಿದ್ದರೆ ಮಾತ್ರ ಒಬ್ಬನು ಹಾಗೆ ಮಾಡಬಹುದೆಂದು ವಿಧಿಸಿದರು. – ಇದು ಕಷ್ಟಸಾಧ್ಯವಾದುದೇ ಆಗಿತ್ತು."

**(The Asian Times, March - 2008)**

*~*~* ● *~*~*

# ದಿ ವರ್ಲ್ಡ್ ಬುಕ್ ಎನ್‌ಸೈಕ್ಲೋಪೀಡಿಯಾ

"ಮುಹಮ್ಮದ್ ಎಲ್ಲಾ ಕಾಲಗಳಿಗೆ ಸೇರಿದ ಅತ್ಯಂತ ಪ್ರಭಾವಶಾಲಿ ಜನರ ಪೈಕಿ ಒಬ್ಬರಾಗಿದ್ದರು.... ಮುಹಮ್ಮದರು ಏಳನೆಯ ಶತಮಾನದಲ್ಲಿ ಧರ್ಮೋಪದೇಶವನ್ನು ಪ್ರಾರಂಭಿಸಿದಾಗ ಅರಬ್ ದೇಶವು ಕಾಡುಗುಡ್ಡ ಮರುಭೂಮಿ ಭರಿತ, ಕಾನೂನು ಕಾಯಿದೆಗಳ ಹತೋಟಿ ಇಲ್ಲದ ದೇಶವಾಗಿತ್ತು. ಮರುಭೂಮಿ ನಿವಾಸಿಗಳಾದ, ವೈರತ್ವದಲ್ಲಿ ಅತ್ಯುಗ್ರರಾದ ಗೋತ್ರಗಳು ಪರಸ್ಪರ ನಿರಂತರ ಹೋರಾಡುತ್ತಾ ರಕ್ತಪಾತ ಮಾಡುತ್ತಿದ್ದವು. ಅರಬ್ ದೇಶದ ನೈರುತ್ಯ ಭಾಗದಲ್ಲಿದ್ದ ಮಕ್ಕ ಎಂಬ ನಗರದಲ್ಲಿ ಬಡವರು ಬಹಳ ಹಿಂಸಾಚಾರಗಳಿಗೆ ಗುರಿಯಾಗುತ್ತಿದ್ದರು. ಆ ದೇಶದ ಬಹುತೇಕ ಜನರು ಅನೇಕ ದೇವರುಗಳನ್ನೂ ವಿಗ್ರಹಗಳನ್ನೂ ಪ್ರೇತಗಳನ್ನೂ ಪೂಜಿಸುತ್ತಾ ಪ್ರಾರ್ಥಿಸುತ್ತಿದ್ದರು. ಮುಹಮ್ಮದ್ ದೇವನಿಂದ ತನ್ನ ಜನತೆಗೆ ಹೊಸ ಸಂದೇಶವನ್ನು ತಂದರು. ಅವರು ಹೀಗೆ ಉಪದೇಶಿಸಿದರು: ದೇವನೊಬ್ಬನೆ. ಎಲ್ಲರೂ ಅವನಿಗೆ ಶರಣಾಗತರಾಗಬೇಕು. ದೇವನಿಗೆ ಶರಣಾಗುವುದೇ ಇಸ್ಲಾಮ್ ಆಗಿದೆ. ಜನರು ತಮ್ಮ ಗೋತ್ರಗಳಿಗೆ ತೋರಿಸುತ್ತಿದ್ದ ನಿಷ್ಠೆಯನ್ನು ಅವರು ಬದಲಾಯಿಸಿ ಮುಸ್ಲಿಮರ ಮಧ್ಯೆ ಸಮಾನತೆ ಮತ್ತು ಭ್ರಾತೃ ಸಂಬಂಧ ಸ್ಥಾಪನೆಗೆ ಅವರು ನಿಷ್ಠರಾಗುವಂತೆ ಮಾಡಿದರು. ಅವರು ಮಕ್ಕದ ಶ್ರೀಮಂತರು ಮಾಡುತ್ತಿದ್ದ ಅನ್ಯಾಯಗಳ ವಿರುದ್ಧ ಉಪದೇಶಿಸಿ ಬಡವರಿಗೆ ಸಹಾಯ ಮಾಡಲು ಪ್ರಯತ್ನಿಸಿದರು. ಮುಹಮ್ಮದರು ತನ್ನ ಜೀವಿತ ಕಾಲದಲ್ಲಿಯೇ ತನ್ನ ಜನತೆಯನ್ನು ಒಂದು ಭವ್ಯ ಧಾರ್ಮಿಕ ಅಭಿಯಾನದಲ್ಲಿ ಒಗ್ಗೂಡಿ ವರ್ತಿಸುವಂತೆ ಮಾಡಿದರು. ಅವರು ನಿಧನ ಹೊಂದಿದ ನಂತರ ಒಂದು ನೂರು ವರ್ಷಗಳೊಳಗೆ ಮುಸ್ಲಿಮರು ಮುಹಮ್ಮದರ ಸಂದೇಶವನ್ನು ಮಧ್ಯಪೂರ್ವದ ಇತರ ಪ್ರದೇಶಗಳಿಗೂ ಉತ್ತರ ಆಫ್ರಿಕಕ್ಕೂ ಯುರೋಪಿಗೂ ಏಶಿಯಾ ಖಂಡಕ್ಕೂ ಕೊಂಡೊಯ್ದರು.

"ಇಸ್ಲಾಮ್ ವಿಶ್ವದ ಅತಿ ದೊಡ್ಡ ಧರ್ಮಗಳಲ್ಲಿ ಒಂದಾಗಿದೆ. ಇಂದು ಸೌದಿ ಅರೇಬಿಯಾ ಎಂದು ಗುರುತಿಸಲ್ಪಡುವ ಪ್ರದೇಶದಲ್ಲಿ ಅದು ಜನ್ಮ ತಾಳಿತು. ಇಸ್ಲಾಮಿನ ಸ್ಥಾಪಕರು ಕ್ರಿ.ಶ. 570ರಲ್ಲಿ ಮಕ್ಕದಲ್ಲಿ ಜನಿಸಿದ ಮುಹಮ್ಮದ್ ಆಗಿದ್ದಾರೆ. ಅವರು ಶಿಶುವಾಗಿದ್ದಾಗಲೇ ಅನಾಥರಾಗಿದ್ದರು. ಹಾಗೆ ಅವರ ಚಿಕ್ಕಪ್ಪ ಅವರ ರಕ್ಷಕರಾದರು.

"ಆ ಕಾಲದಲ್ಲಿ ಅರಬ್ ದೇಶ ಕಾಡು ಮೇಡು ಮರುಭೂಮಿಗಳಿಂದ ಕೂಡಿದ, ಕಾನೂನು ಕಾಯಿದೆಗಳ ಹತೋಟಿಗೆ ಅಧೀನವಾಗಿರದ ದೇಶವಾಗಿತ್ತು. ಅಲ್ಲಿ ಮರುಭೂಮಿ ನಿವಾಸಿಗಳಾದ ಗೋತ್ರಗಳು ಪರಸ್ಪರ ರಕ್ತಪಾತ ಮಾಡುವ ಯುದ್ಧಗಳನ್ನು ಮಾಡುತ್ತಿದ್ದರು. ಬಡವರು ಅತ್ಯಂತ ಹೆಚ್ಚು ಕಷ್ಟಕ್ಕೀಡಾಗಿದ್ದರು. ಅರಬ್ ದೇಶದ ಜನರು ಅನೇಕ ದೇವರುಗಳನ್ನು ನಂಬುತ್ತಿದ್ದರು. ಅವರು ವಿಗ್ರಹಗಳನ್ನು ಮತ್ತು ಪ್ರೇತಗಳನ್ನು ಪ್ರಾರ್ಥಿಸುತ್ತಿದ್ದರು.

"ಅಂದಾಜು 610ನೇ ವರ್ಷದಲ್ಲಿ ಮುಹಮ್ಮದ್ ಬಹಿರಂಗವಾಗಿ ಉಪದೇಶ ಮಾಡಲು ತೊಡಗಿದರು. ಅಲ್ಲಾಹ್ ಎಂಬ ಒಬ್ಬನೇ ಒಬ್ಬ ದೇವನಿದ್ದಾನೆಂದೂ ಮುಹಮ್ಮದ್ ಅವನ ಪ್ರವಾದಿ ಎಂದೂ ಅವರು ಉಪದೇಶಿಸಿದರು. ಜನರು ಏಕದೇವನಿಗೆ ಶರಣಾಗಬೇಕೆಂದು ಸಹ ಅವರು ಉಪದೇಶಿಸಿದರು. ಅವರು ಹಳೆಯ ಗೋತ್ರ ನಿಷ್ಠೆಯನ್ನು ಬದಲಾಯಿಸಿ ಮುಸ್ಲಿಮರ ಮಧ್ಯೆ ಸಮಾನತೆ ಮತ್ತು ಪರಸ್ಪರ ನಿಷ್ಠೆಯನ್ನು ಸ್ಥಾಪಿಸಲು ಪ್ರಯತ್ನಿಸಿದರು. ಮಕ್ಕದ ಶ್ರೀಮಂತರು ಮಾಡುತ್ತಿದ್ದ ಅನ್ಯಾಯ ವರ್ತನೆಗಳ ವಿರುದ್ಧ ಅವರು ಉಪದೇಶಿಸಿದರು.

"ಒಂದು ಧರ್ಮದ ಮತ್ತು ಒಂದು ಸಮುದಾಯದ ನಾಯಕರಾಗಿದ್ದ ಮುಹಮ್ಮದರು ತನ್ನ ಉಪದೇಶಗಳಿಗೆ ಕಾನೂನು ಕಾಯಿದೆಗಳ ರೂಪ ನೀಡಲು ಪ್ರಯತ್ನಿಸಿದರು. ಅವರು ಮೂರ್ತಿ ಪೂಜೆಯನ್ನು ನಿಷಿದ್ಧಗೊಳಿಸಿದರು. ಅವರು ಬಹುಭಾರ್ಯತ್ವವನ್ನೂ ವಿವಾಹ ವಿಚ್ಛೇದನೆಯನ್ನೂ ನಿಯಂತ್ರಣಕ್ಕೊಳಪಡಿಸಿದರು. ಅವರು ವಾರೀಸು ಹಕ್ಕುಗಳನ್ನು ಸುಧಾರಣೆ ಮಾಡಿದರು, ಗುಲಾಮಗಿರಿಯನ್ನು ನಿಯಂತ್ರಿಸಿದರು, ಬಡವರ ಹಿತಕ್ಕೋಸ್ಕರ ಕಾರ್ಯಶೀಲರಾದರು. ಕೆಲವು ಗೋತ್ರಗಳ ಜನರು ದಾರಿದ್ರ್ಯದ ಅಪಾಯದಿಂದ ಮುಕ್ತಿ ಹೊಂದಲು ಹೆಣ್ಣು ಶಿಶುಗಳನ್ನು ಕೊಲ್ಲುತ್ತಿದ್ದರು. ಮುಹಮ್ಮದರು ಈ ಆಚಾರವನ್ನು ನಿಷಿದ್ಧಗೊಳಿಸಿದರು."

**(The World Book Encyclopedia, World Book, Inc. Chicago, USA 2006, Volume 13, p. 910)**

*~*~* ● *~*~*

## ದಿ ನ್ಯೂ ಎನ್‌ಸೈಕ್ಲೋಪೀಡಿಯಾ ಬ್ರಿಟಾನಿಕ

"ಅವರ ಧೈರ್ಯ, ದೃಢನಿರ್ಧಾರ, ನಿಷ್ಪಕ್ಷತೆ, ಸ್ಥಿರತೆ ಮತ್ತು ಔದಾರ್ಯಗಳಿಗೋಸ್ಕರ ಮುಹಮ್ಮದರು ತಮ್ಮ ಸಮಕಾಲೀನ ಮೆಚ್ಚುಗೆಗೆ ಪಾತ್ರರಾಗಿದ್ದರು. ಅವರು ತಮ್ಮ ವ್ಯಕ್ತಿತ್ವದ ಮೋಹಕ ಗುಣದಿಂದ ಜನರ ಹೃದಯಗಳನ್ನು ಗೆದ್ದಿದ್ದರು. ಅವರು ಮೃದು ಸ್ವಭಾವಿಯಾಗಿದ್ದರು, ವಿಶಿಷ್ಟವಾಗಿ ಮಕ್ಕಳೊಂದಿಗೆ ವರ್ತಿಸುವಾಗ. ಅವರು ಕೆಲವು ಸಾರಿ ಯೋಚನಾಮಗ್ನರಾಗಿ ಮೌನವಾಗಿರುತ್ತಿದ್ದರೂ ಅವರು ತಮ್ಮ ಜೀವಿತದ ಬಹುತೇಕ ಭಾಗವನ್ನು ಉದ್ದೇಶಪೂರಿತ ಕೆಲಸಗಳಿಗಾಗಿ ವಿನಿಯೋಗಿಸಿದರು. ಅವರು ವೇಗವಾಗಿ ನಡೆಯುತ್ತಿದ್ದರು ಮತ್ತು ನಿರರ್ಗಳವಾಗಿ ಮಾತನಾಡುತ್ತಿದ್ದರು. ಅವರು ಮುಸ್ಲಿಮರಿಗೆ ನೈತಿಕ ಸ್ವಭಾವ ಗುಣಗಳ ಮಾದರಿಯಾದರು. ಮಾನವ ಜೀವಿತದ ಇಸ್ಲಾಮಿಕವಾದ ಅತ್ಯುತ್ತಮ ಆದರ್ಶವನ್ನು ಪಾಲಿಸಿದ ಮಹಾನುಭಾವರೆಂದು ಅವರ ಬಗ್ಗೆ ಇರುವ ಕಥೆಗಳು ಪ್ರಸ್ತಾಪಿಸುತ್ತವೆ."

**(The New Encyclopedia Britannica, Volume 22, Macropaedia. 15th Edition, 1998, p.5)**

*~*~* ● *~*~*

## ಜೋರ್ಜ್ ಬೆಶೋರ್

"ವೈದ್ಯಶಾಸ್ತ್ರ, ಗಣಿತ, ಖಗೋಳ ಶಾಸ್ತ್ರ, ತತ್ವಶಾಸ್ತ್ರ ಮತ್ತು ರಸಾಯನ ಶಾಸ್ತ್ರದಲ್ಲಿ ಪುರಾತನ ಈಜಿಪ್ಟಿನ, ಗ್ರೀಸಿನ ಮತ್ತು ರೋಮಿನ ವಿಜ್ಞಾನಿಗಳು ಗಮನಾರ್ಹ ಪ್ರಗತಿಯನ್ನು ಗಳಿಸಿದ್ದರು. ಅಂದಾಜು 570ರ ವರ್ಷದಲ್ಲಿ ಅರಬ್ ದೇಶದಲ್ಲಿ ಮುಹಮ್ಮದ್ ಎಂಬ ಮಗು ಹುಟ್ಟದೆ ಇರುತ್ತಿದ್ದರೆ ಈ ಎಲ್ಲಾ ಸಂಶೋಧನೆಗಳು ಲೋಕಕ್ಕೆ ಶಾಶ್ವತವಾಗಿ ನಷ್ಟವಾಗಿ ಹೋಗುತ್ತಿದ್ದುವು."

**(Beshore, George : Science in Early Islamic Cultures, Grolier Publishing, 1998, p.8)**

*~*~* ● *~*~*

## ಕೆ. ಎಸ್. ರಾಮಕೃಷ್ಣರಾವ್

"ಮುಸ್ಲಿಮ್ ಚರಿತ್ರೆಗಾರರ ಪ್ರಕಾರ ಅರಬ್ ದೇಶದ ಮರುಭೂಮಿಯಲ್ಲಿ ಮುಹಮ್ಮದ್ 571 ಎಪ್ರಿಲ್ ದಿನಾಂಕ 20ರಂದು ಜನಿಸಿದರು. ಈ ಹೆಸರಿನ ಅರ್ಥ 'ಅತ್ಯಂತ ಸ್ತುತಿಸಲ್ಪಟ್ಟವನು' ಎಂದು. ಅರಬ್ ದೇಶದ ಪುತ್ರರಲ್ಲಿ ಅವರು ಅತ್ಯಂತ ಮೇಧಾವಿ ಆಗಿದ್ದರೆಂದು ನಾನು ಗಣಿಸುತ್ತೇನೆ. ಅವರಿಗಿಂತ ಮುಂಚಿತವಾಗಿ ಅರಬ್ ದೇಶದ ಕೆಂಪು ಮರಳಿನ ಅಭೇದ್ಯ ಮರುಭೂಮಿಯಲ್ಲಿ ಎಲ್ಲಾ ಕವಿಗಳು ಮತ್ತು ದೊರೆಗಳು ಸಾಧಿಸಿದುದಕ್ಕಿಂತ ಹೆಚ್ಚಿನದನ್ನು ಅವರು ಸಾಧಿಸಿ ತೋರಿಸಿದರು. ಅವರು ಕಾಣಿಸಿಕೊಂಡಾಗ ಅರಬ್ ದೇಶವು ಶೂನ್ಯ ಮರುಭೂಮಿಯಾಗಿತ್ತು. ಶೂನ್ಯತೆಯಿಂದ ಒಂದು ಹೊಸ ಲೋಕವನ್ನು ಮುಹಮ್ಮದರ ಮಹಾನ್ ಚೇತನವು ರೂಪಿಸಿತು. ಒಂದು ಹೊಸ ಜೀವಿತ, ಹೊಸ ಸಂಸ್ಕೃತಿ, ಹೊಸ ನಾಗರಿಕತೆ ಮತ್ತು ಮೊರಕ್ಕೋದಿಂದ ಭಾರತದ ತನಕ ವ್ಯಾಪಿಸಿದ ಸಾಮ್ರಾಜ್ಯದ ಸ್ಥಾಪನೆ ಆಯಿತು. ಏಶಿಯಾ, ಆಫ್ರಿಕಾ ಮತ್ತು ಯುರೋಪ್ ಎಂಬ ಮೂರು ಖಂಡಗಳ ಚಿಂತನೆಗಳನ್ನೂ ಜೀವಿತವನ್ನೂ ಅದು ಪ್ರಭಾವಕ್ಕೊಳಪಡಿಸಿತು.... ಇಸ್ಲಾಮ್ ಮತ್ತು ಖಡ್ಗ ಎಂಬ ಸಿದ್ಧಾಂತವು ಹೆಚ್ಚಿನ ವಲಯಗಳಲ್ಲಿ ಪದೇ ಪದೇ ಈಗ ಕೇಳಿಸುತ್ತಾ ಇಲ್ಲ.... ವಿಶ್ವ ಭ್ರಾತೃತ್ವ ಮತ್ತು ಮಾನವರೆಲ್ಲರೂ ಸಮಾನರೆಂಬ ಸಿದ್ಧಾಂತ ಮುಹಮ್ಮದರು ಪ್ರತಿಪಾದಿಸಿದರು. ಅದು ಮಾನವರ ಸ್ಥಿತಿ ಸುಧಾರಣೆಗೆ ಅವರು ನೀಡಿದ ಬಹು ಅಮೂಲ್ಯವಾದ ಕೊಡುಗೆಯಾಗಿದೆ. ಎಲ್ಲಾ ಮಹಾನ್ ಧರ್ಮಗಳು ಈ ಸಿದ್ಧಾಂತವನ್ನು ಉಪದೇಶಿಸಿವೆ. ಆದರೆ ಇಸ್ಲಾಮಿನ ಪ್ರವಾದಿ ಈ ಸಿದ್ಧಾಂತವನ್ನು ಕೃತಿಗಿಳಿಸಿ ತೋರಿಸಿದರು. ಪ್ರಾಯಶಃ ಶತಮಾನಗಳ ನಂತರ ಅಂತಾರಾಷ್ಟ್ರೀಯ ಪ್ರಜ್ಞೆ ಎಚ್ಚರಗೊಳ್ಳುವಾಗ, ಜನಾಂಗೀಯ ದ್ವೇಷಗಳು ಕಣ್ಮರೆಯಾಗುವಾಗ, ಜಗತ್ತಿನಲ್ಲಿ ಮಾನವೀಯ ಭ್ರಾತೃತ್ವವು ಸ್ಥಾಪಿತವಾಗುವಾಗ ಮುಹಮ್ಮದರು ಕೈಗೊಂಡ ಉಪಕ್ರಮಗಳ ಮೌಲ್ಯವು ಹೆಚ್ಚು ಪೂರ್ಣವಾಗಿ ಗುರುತಿಸಲ್ಪಡುವುದು.... ಅರಬ್ ದೇಶದ ಜನರು ಒಂದು ಬಲಿಷ್ಠವಾದ ಪಾರಂಪರಿಕ ನಡವಳಿಕೆಯನ್ನು ಹೊಂದಿದ್ದರು. ಯಾರು ಈಟಿಯಿಂದ ತಿವಿಯಬಲ್ಲನೋ ಮತ್ತು ಖಡ್ಗವನ್ನು ಚಲಾಯಿಸಬಲ್ಲನೋ ಅವನೇ ಸ್ವತ್ತಿಗೆ ವಾರೀಸುದಾರನಾಗುವನು. ಆದರೆ ಇಸ್ಲಾಮ್ ಧರ್ಮವು ಮಹಿಳೆಯರ ರಕ್ಷಕನಾಗಿ ಆಗಮಿಸಿ ತಂದೆ ತಾಯಂದಿರ ಸ್ವತ್ತಿನಲ್ಲಿ ಮಹಿಳೆಯರಿಗೂ ವಾರೀಸು ಹಕ್ಕನ್ನು ನೀಡಿತು. ಇಸ್ಲಾಮ್ ಧರ್ಮವು ಶತಮಾನಗಳ ಹಿಂದೆ ಮಹಿಳೆಯರಿಗೆ ಭೂಸ್ವತ್ತನ್ನು ಹೊಂದುವ ಹಕ್ಕನ್ನು ನೀಡಿತು. ಆದರೆ ಹನ್ನೆರಡು ಶತಮಾನಗಳ ನಂತರ 1881ರಲ್ಲಿ 'ಪ್ರಜಾಪ್ರಭುತ್ವದ ತೊಟ್ಟಿಲು' ಎಂದು ಕರೆಯಲ್ಪಡುವ ಇಂಗ್ಲೆಂಡ್ ಇಸ್ಲಾಮಿನ ಈ ನಿಯಮವನ್ನು ದೇಶದಲ್ಲಿ ಜಾರಿಗೊಳಿಸಿತು. ಆ ನಿಯಮವು 'ವಿವಾಹಿತ ಮಹಿಳೆಯ ನಿಯಮ' ಎಂದು ಕರೆಯಲ್ಪಡುತ್ತದೆ....... ಮುಹಮ್ಮದರ ಸಮಕಾಲೀನರು, ಅವರ ಸ್ನೇಹಿತರಾದರೂ ಶತ್ರುಗಳಾದರೂ ಅವರ ಅತ್ಯುತ್ತಮ ಸ್ವಭಾವ ಗುಣಗಳನ್ನು, ನಿಷ್ಕಳಂಕ ಪ್ರಾಮಾಣಿಕತೆ, ಅವರ ಭವ್ಯ ವರ್ತನೆ, ಅವರ ಪರಿಪೂರ್ಣ ವಿಧೇಯತೆ, ಅವರ ವಿಶ್ವಾಸಾರ್ಹತೆಯನ್ನು ಎಲ್ಲಾ ಜೀವಿತ ಕ್ಷೇತ್ರಗಳಲ್ಲೂ ಗುರುತಿಸಿ ಪ್ರಶಂಸಿದ್ದಾರೆ.... ಪರಿಸ್ಥಿತಿಗಳು ಬದಲಾಯಿಸಿದವು. ಆದರೆ ದೇವನ ಪ್ರವಾದಿಯಲ್ಲಿ ಯಾವ ಬದಲಾವಣೆಯೂ ಉಂಟಾಗಲಿಲ್ಲ. ಜಯಶಾಲಿಯಾಗಿದ್ದಾಗಲೂ ಸೋತಾಗಲೂ ಅಧಿಕಾರ

ಹೊಂದಿದಾಗಲೂ ಕಷ್ಟದಲ್ಲಿದ್ದಾಗಲೂ ಸಿರಿತನದಲ್ಲೂ ಬಡತನದಲ್ಲೂ ಅವರು ಒಂದೇ ರೀತಿಯ ಸ್ವಭಾವವನ್ನು ಪ್ರಕಟಿಸಿದರು. ದೇವನ ರೀತಿಗಳು ಮತ್ತು ನಿಯಮಗಳು ಬದಲಾವಣೆ ಹೊಂದಲಾರವು. ಇದೇ ರೀತಿ ದೇವನ ಪ್ರವಾದಿಗಳ ಸ್ವಭಾವಗುಣಗಳು ಬದಲಾವಣೆ ಹೊಂದಲಾರವು. ಒಬ್ಬ ಪ್ರಾಮಾಣಿಕ ಮನುಷ್ಯನು ದೇವನ ಅತ್ಯುತ್ತಮ ಸೃಷ್ಟಿಯಾಗಿದ್ದಾನೆ ಎಂದು ಒಂದು ನುಡಿಮುತ್ತು ಇದೆ. ಮುಹಮ್ಮದರು ಪ್ರಾಮಾಣಿಕತೆಗಿಂತ ಮಿಗಿಲಾಗಿ ಇದ್ದರು. ಅವರು ತನ್ನ ಎಲುಬಿನ ಮಜ್ಜೆಯ ತನಕ ಮಾನವೀಯತೆಯನ್ನು ಹೊಂದಿದ್ದರು. ಮಾನವರ ಬಗ್ಗೆ ಸಹತಾಪ, ಮಾನವೀಯ ಪ್ರೇಮ ಅವರ ಆತ್ಮದ ಸಂಗೀತವಾಗಿತ್ತು. ಮಾನವರ ಸೇವೆ, ಮಾನವರನ್ನು ಮೇಲೆತ್ತುವುದು, ಮಾನವರನ್ನು ಶುದ್ಧೀಕರಿಸುವುದು, ಮಾನವರಿಗೆ ವಿದ್ಯಾಭ್ಯಾಸ ನೀಡುವುದು ಇವುಗಳು ಅವರ ಜೀವಿತದ ಪರಮ ಉದ್ದೇಶ ಲಕ್ಷ್ಯಗಳಾಗಿದ್ದುವು. ಯೋಚನೆಗಳಲ್ಲಿ, ವಚನಗಳಲ್ಲಿ, ಕೆಲಸಗಳಲ್ಲಿ ಮಾನವರ ಹಿತಕಾಂಕ್ಷೆಯೇ ಅವರ ಏಕಮಾತ್ರ ಪ್ರಚೋದನೆಯೂ ಅವರ ಏಕಮಾತ್ರ ಮಾರ್ಗದರ್ಶಿ ಸೂತ್ರವೂ ಆಗಿತ್ತು."

**(Rao, K. S. Ramakrishna. Mohammad: The Prophet. Abdul Rahman, 1996, pp. 1-14)**

*~*~* ● *~*~*

## ಕರೆನ್ ಆರ್ಮ್‌ಸ್ಟ್ರಾಂಗ್

"ಅವರು ಪ್ರತಿಭಾವಂತ ಆಕರ್ಷಕ ರಾಜಕೀಯ ನಾಯಕರಾಗಿದ್ದರು. ಅವರು ಅರಬ್ ದೇಶವನ್ನು ಮಾತ್ರವಲ್ಲ, ಲೋಕದ ಚರಿತ್ರೆಯನ್ನು ಪರಿವರ್ತಿಸಿದರು... ಮಾನವ ಕುಲದ ಸಮಾನತೆಯಲ್ಲಿ ನಿಷ್ಠೆಯುಳ್ಳ ಆದರ್ಶವನ್ನು ಹೊಂದಿದ ಇಸ್ಲಾಮ್ ಎಲ್ಲಾ ಜನರನ್ನು ಸಮಾನ ಸಾಮಾಜಿಕ ಮತ್ತು ರಾಜಕೀಯ ಹಂತಕ್ಕೆ ತಂದು ಭ್ರಾತೃಭಾವನೆಯನ್ನು ಬೆಳೆಸುವ ಪ್ರಾಯೋಗಿಕ ವಿಧಾನವನ್ನು ಜಾರಿಗೊಳಿಸಿತು.... ನಿಶ್ಚಯವಾಗಿಯೂ ಮುಹಮ್ಮದ್ ಸ್ವತಃ ತನ್ನ ನಡೆವಳಿಕೆಯಿಂದ ಭ್ರಾತೃ ಸಂಬಂಧ ಸ್ಥಾಪಿಸುವ ಉನ್ನತ ಮಟ್ಟವನ್ನು ತೋರಿಸಿಕೊಟ್ಟರು.. ಹಲವು ಶತಮಾನಗಳ ಕಾಲ ನಾವು ಪಾಶ್ಚಿಮಾತ್ಯರು ಮುಹಮ್ಮದರ ಕುರಿತು ನಿರ್ದಯಿ, ಕ್ರೂರ ಯೋಧ, ಕಳ್ಳೆದೆಯ ರಾಜಕಾರಣಿ ಎಂಬ ಭಾವನೆ ಹೊಂದಿದ್ದೆವು. ಆದರೆ ವಾಸ್ತವಿಕವಾಗಿ ಅವರು ಬಹಳ ದಯೆದೋರುವವರೂ ಬುದ್ಧಿಶಾಲಿಯೂ ಆಗಿದ್ದರು.... ಮುಹಮ್ಮದರ ಅಸಾಧಾರಣವಾದ ವಿಜಯಕ್ಕೆ ದೇವನ ಸಹಾಯ ಎಂದಲ್ಲದೆ ಬೇರೇನೂ ವಿವರಣೆ ನೀಡಲು ಸಾಧ್ಯವಾಗದು... ರೋಮನ್ ಸಾಮ್ರಾಜ್ಯಕ್ಕೆ ಅಧೀನವಾದ ದೇಶಗಳ ವಿರುದ್ಧ ಯುದ್ಧ ಮಾಡದಿರುವುದು ಎಂಬ ತತ್ವ ಪ್ರಕಾರ ತಮ್ಮ ವೈಯಕ್ತಿಕ ಜೀವಿತವನ್ನು ಪರಿವರ್ತಿಸಿದ ಆದಿಕಾಲೀನ ಕ್ರೈಸ್ತರ ಹಾಗೆ ವರ್ತಿಸದೆ ಮುಹಮ್ಮದ್ ಮತ್ತು ಅವರ ಸಂಗಡಿಗರು ತಮ್ಮ ಸಮಾಜದ ಸುಧಾರಣೆಗೆ ಕಾರ್ಯಪ್ರವೃತ್ತರಾದರು. ಹಾಗೆ ಮಾಡದ ಹೊರತು ಯಾವುದೇ ನೈತಿಕ ಮತ್ತು ಆಧ್ಯಾತ್ಮಿಕ ಪ್ರಗತಿ ಉಂಟಾಗಲಾರದು.... ಇಸ್ಲಾಮಿಕ ಸಾಮ್ರಾಜ್ಯವು ಅದರ ವಿಸ್ತಾರದ ಮಿತಿಯನ್ನು ಮುಹಮ್ಮದರು ಮೃತರಾದ ನಂತರ ಒಂದು ನೂರು ವರ್ಷದೊಳಗೆ ತಲಪಿತು. ಮುಸ್ಲಿಮರು ತಮ್ಮ ನೆರೆಹೊರೆಯ ಮುಸ್ಲಿಮೇತರ ದೇಶಗಳೊಂದಿಗೆ, ಅವರ ಪ್ರದೇಶ ಯುದ್ಧದ ಮನೆ (ದಾರುಲ್ ಹರ್ಬ್) ಎಂದು ಕರೆಯಲ್ಪಡುತ್ತಿದ್ದರೂ ರಾಜಕೀಯ ಮತ್ತು ಆರ್ಥಿಕ ಸಂಬಂಧವನ್ನು ಸ್ಥಾಪಿಸಿದರು. ಯಹೂದಿಯರ, ಕ್ರೈಸ್ತರ ಮತ್ತು ಝೊರಾಸ್ಟ್ರಿಯನರ ಮೇಲೆ ಇಸ್ಲಾಮಿಗೆ ಪರಿವರ್ತನೆ ಹೊಂದಬೇಕೆಂಬ ಯಾವದೇ ಒತ್ತಡ ಹೇರಿರಲಿಲ್ಲ... ಪಶ್ಚಿಮದಲ್ಲಿರುವ ನಮಗೆ ಇಸ್ಲಾಮಿನೊಂದಿಗೆ ಹೆಣಗಾಡಲು ಎಂದೂ ಸಾಧ್ಯವಾಗಲಿಲ್ಲ. ಅದರ ಬಗ್ಗೆ ನಮ್ಮ ಯೋಚನೆಗಳು ಅಪಕ್ವವೂ ತಿರಸ್ಕಾರ ಯೋಗ್ಯವೂ ಆಗಿವೆ. ಇಂದು ಮುಸ್ಲಿಮ್ ಲೋಕದಲ್ಲಿರುವ ನೋವು ಮತ್ತು ಅಲ್ಲಿ ಆರಂಭಗೊಂಡ ದಾರುಣ ಯಾತನೆಯ ಬಗ್ಗೆ ನಮ್ಮ ಅಸಡ್ಡೆಯು ಸಹಿಷ್ಣುತೆ ಮತ್ತು ದಯೆದೋರುವಿಕೆಯ ಬಗ್ಗೆ ನಮಗಿರುವ ಬದ್ಧತೆಯನ್ನು ನಿರಾಕರಿಸುವಂತಿದೆ. ಇಸ್ಲಾಮ್ ಧರ್ಮವು ಅಪ್ರತ್ಯಕ್ಷವಾಗಲಾರದು. ಅಥವಾ ಅದು ಸೊರಗಿ ಹೋಗದು. ಅದು ಆರೋಗ್ಯಪೂರ್ಣವೂ ಶಕ್ತಿಯುತವೂ ಆಗಿದ್ದರೆ ಚೆನ್ನಾಗಿತ್ತು. ಇನ್ನೂ ಕ್ರಮಕ್ಕೈಗೊಳ್ಳಲು ಬಹಳ ತಡವಾಗಿಲ್ಲ ಎಂದು ಮಾತ್ರ ನಾವು ಪ್ರತೀಕ್ಷಿಸಬಹುದು.... ಮುಸ್ಲಿಮರು ನಮ್ಮ ಪಾಶ್ಚಿಮಾತ್ಯ ಪರಂಪರೆಗಳನ್ನೂ ಸಂಸ್ಥೆಗಳನ್ನೂ ಚೆನ್ನಾಗಿ ಅರ್ಥಮಾಡಿಕೊಳ್ಳಲು ಪಶ್ಚಿಮದಲ್ಲಿರುವ ನಾವು ನಮ್ಮ ಹಳೆಯ ಪೂರ್ವಗ್ರಹಗಳನ್ನು ಬಿಟ್ಟು ಬಿಡಬೇಕಾಗಿದೆ. ಪ್ರಾಯಶಃ ಮೊದಲನೆಯದಾಗಿ ನಾವು ಮುಹಮ್ಮದರ ಬಗ್ಗೆ ನಮ್ಮ ನಿಲುವನ್ನು ಸರಿಪಡಿಸಬೇಕು. ಮುಹಮ್ಮದರು ವಿವಿಧ ಭಾವೋದ್ವೇಗಗಳನ್ನು ಹೊಂದಿದ ವ್ಯಕ್ತಿಯಾಗಿದ್ದರು. ಅವರು ಕೆಲವು ಸಾರಿ ಮಾಡಿದ ಕೆಲಸಗಳನ್ನು ಅಂಗೀಕರಿಸಲು ನಮಗೆ ಕಷ್ಟಕರವಾಗಿದೆ. ಆದರೆ ಅವರು ಅತ್ಯಂತ ಬುದ್ಧಿಶಾಲಿಯಾಗಿದ್ದರು. ಅವರು ಒಂದು ಧರ್ಮವನ್ನು ಮತ್ತು ಸಂಸ್ಕೃತಿಯ ಪರಂಪರೆಯನ್ನು ಸ್ಥಾಪಿಸಿದರು. ಪಾಶ್ಚಿಮಾತ್ಯ ಐತಿಹ್ಯಗಳು ಅದರ ಬಗ್ಗೆ ಸೂಚಿಸಿದರೂ ಅದು ಖಡ್ಗದ ಮೇಲೆ ಆಧರಿಸಿರಲಿಲ್ಲ. ಅವರು ಸ್ಥಾಪಿಸಿದ ಧರ್ಮದ ಹೆಸರು 'ಇಸ್ಲಾಮ್' ಶಾಂತಿ ಮತ್ತು ಸೌಹಾರ್ದ ಸ್ಥಾಪನೆಯನ್ನು ಸೂಚಿಸುತ್ತದೆ."

**(Armstrong, Karen : A Biography of the Prophet. Victor Gollancz, 1996, pp. 164-166)**

*~*~* ● *~*~*

## ಎಲನ್ ಬ್ಲಾಕ್‌ವುಡ್

"ಮುಹಮ್ಮದರು ಇಸ್ಲಾಮ್ ಧರ್ಮವನ್ನು ಸ್ಥಾಪಿಸಿದರು. ಅವರು ಅರಬ್ ದೇಶದ ಮಕ್ಕ ನಗರದಲ್ಲಿ ಜನಿಸಿದರು... ಅರಬ್

ದೇಶವು ಬಂಜರು, ಒರಟು ಮತ್ತು ಕ್ರೂರ ದೇಶವಾಗಿತ್ತು. ತನ್ನ ಹೊಸಧರ್ಮವನ್ನು ಪ್ರಚಾರಗೊಳಿಸಲು ಮುಹಮ್ಮದರಿಗೆ ಧೈರ್ಯವು ಆವಶ್ಯಕವಾಗಿತ್ತು. ಅವರು ಮತ್ತು ಅವರ ಆರಂಭಕಾಲದ ಅನುಯಾಯಿಗಳಿಗೆ ಆಗಾಗ ಕಲ್ಲೆಸೆಯಲಾಯಿತು. ಅವರು ಹೊಡೆತಗಳಿಗೆ ತುತ್ತಾದರು. ಕ್ರಿ.ಶ. 622ರಲ್ಲಿ ಮುಹಮ್ಮದ್ ಮಕ್ಕದಿಂದ ಮದೀನಕ್ಕೆ ಪಲಾಯನ ಮಾಡಬೇಕಾಯಿತು. ಅದನ್ನು ಹಿಜ್‌ರ ಎನ್ನುತ್ತಾರೆ. ಅದು ಇಸ್ಲಾಮೀ ಕಾಲಗಣನೆಯ ಪ್ರಾರಂಭವನ್ನು ಸೂಚಿಸುತ್ತದೆ. ಕ್ರಮೇಣ ಮುಹಮ್ಮದರ ಸಂದೇಶವು ಅಂಗೀಕರಿಸಲ್ಪಟ್ಟಿತು....

"ಮುಹಮ್ಮದರು ಮೃತರಾಗುವುದರೊಳಗೆ ಅರಬ್ ದೇಶದ ಗೋತ್ರಗಳು ಇಸ್ಲಾಮ್ ಎಂಬ ಹೊಸ ಧರ್ಮದಲ್ಲಿ ಐಕ್ಯತೆಯನ್ನು ಪಡೆದಿದ್ದುವು. ಅನಂತರದ ಶತಮಾನಗಳಲ್ಲಿ ಇಸ್ಲಾಮ್ ಧರ್ಮವು ಮತ್ತು ಅದರೊಂದಿಗೆ ಬೆಳೆದ ನಾಗರಿಕತೆಯು ಕಲೆ ಮತ್ತು ವಿಜ್ಞಾನದಲ್ಲಿ ಸಮೃದ್ಧಿಯನ್ನು ಗಳಿಸಿ ಸ್ಪೈನ್ ಮತ್ತು ಉತ್ತರ ಆಫ್ರಿಕಾದಿಂದ ಮಧ್ಯಪೂರ್ವ ದೇಶಗಳ ಮೂಲಕ ಭಾರತದ ತನಕ ಮತ್ತು ಪೂರ್ವ ಯುರೋಪಿನ ಬಹುದೊಡ್ಡ ಒಂದು ಭಾಗಕ್ಕೆ ಹಬ್ಬಿತು."

**(Blackwood, Alan : A to Z of Famous People, London, U.K., 1982, p. 165)**

*~*~*●*~*~*

## ಮೈಕೆಲ್ ಎಚ್. ಹಾರ್ಟ್

"ವಿಶ್ವದ ಅತ್ಯಂತ ಪ್ರಭಾವಶಾಲಿ ವ್ಯಕ್ತಿಗಳಲ್ಲಿ ನಾನು ಮುಹಮ್ಮದರಿಗೆ ಪ್ರಥಮ ಸ್ಥಾನ ನೀಡಿ ಆಯ್ಕೆ ಮಾಡಿದುದು ಕೆಲವು ವಾಚಕರನ್ನು ಆಶ್ಚರ್ಯ ಚಕಿತರನ್ನಾಗಿ ಮಾಡಬಹುದು ಮತ್ತು ಬೇರೆ ಕೆಲವರು ಅದನ್ನು ಪ್ರಶ್ನಿಸಬಹುದು. ಆದರೆ ಧಾರ್ಮಿಕ ಮತ್ತು ಲೌಕಿಕ ಹಂತದಲ್ಲಿ ಅತ್ಯುಚ್ಚ ರೀತಿಯಲ್ಲಿ ಜಯಶಾಲಿ ಆದ ಮಹಾನುಭಾವರು ಅವರೊಬ್ಬನೇ.... ಕ್ರೈಸ್ತ ಧರ್ಮದ ಮೇಲೆ ಯೇಸು ಕ್ರಿಸ್ತರು ಮತ್ತು ಸಂತ ಪೌಲರು ಒಗ್ಗೂಡಿ ಬೀರಿದ ಪ್ರಭಾವಕ್ಕಿಂತ ಇಸ್ಲಾಮಿನ ಮೇಲೆ ಮುಹಮ್ಮದರು ಬೀರಿದ ಪ್ರಭಾವ ಹೆಚ್ಚಿನದಾಗಿತ್ತು.... ಅದ್ವಿತೀಯವಾದ ಧಾರ್ಮಿಕ ಮತ್ತು ಲೌಕಿಕ ಪ್ರಭಾವವನ್ನು ಬೀರಿದ ಮುಹಮ್ಮದರು ಮಾನವ ಚರಿತ್ರೆಯಲ್ಲಿ ಅತ್ಯಂತ ಪ್ರಭಾವಶಾಲಿ ಏಕಮಾತ್ರ ವ್ಯಕ್ತಿ ಎಂದು ಆಯ್ಕೆಮಾಡಲು ಅರ್ಹತೆಯನ್ನು ನನ್ನ ದೃಷ್ಟಿಯಲ್ಲಿ ಪಡೆದರು."

**(Hart, Michael H. : The 100 : A Ranking of the Most Influential Persons in History. Carol Publishing Group, 1978, pp. 3-10)**

*~*~*●*~*~*

## ಡಬ್ಲ್ಯೂ. ಮೋಂಟ್ಗೊಮೆರಿ ವಾಟ್ಟ್

"ಮುಹಮ್ಮದರ ಅತ್ಯಂತ ಮಹತ್ತರ ಸಾಧನೆಗಳಲ್ಲಿ ಒಂದು, ಅವರು ಮಕ್ಕದ ಗಣ್ಯರೊಂದಿಗೆ ಸ್ಥಾಪಿಸಿದ ನೈಜ ರಾಜಿಸಂಧಾನವಾಗಿದೆ. ಆ ಜನರು ಕೆಲವು ತಿಂಗಳ ಹಿಂದೆ ಅವರ ಕಠಿಣ ಶತ್ರುಗಳಾಗಿದ್ದರು... ಮಕ್ಕದ ಮತ್ತು ಮದೀನದ ಕಾಲಘಟ್ಟದಲ್ಲಿ ಮುಹಮ್ಮದರ ಸಮಕಾಲೀನರು ಅವರನ್ನು ಒಳ್ಳೆಯ ಮತ್ತು ನೀತಿವಂತ ಮನುಷ್ಯನೆಂದು ಗಣಿಸಿದ್ದರು. ಚರಿತ್ರೆಯ ದೃಷ್ಟಿಯಲ್ಲಿ ಅವರು ನೈತಿಕ ಮತ್ತು ಸಾಮಾಜಿಕ ಸುಧಾರಕರಾಗಿದ್ದರು.... ಮುಹಮ್ಮದರ ಮತ್ತು ಇಸ್ಲಾಮಿನ ಆದ್ಯಕಾಲದ ಚರಿತ್ರೆಯ ಅಧ್ಯಯನವನ್ನು ಹೆಚ್ಚು ಹೆಚ್ಚಾಗಿ ಮಾಡುವಾಗ ಅವರ ಸಾಧನೆಗಳ ವಿಶಾಲತೆಯನ್ನು ಕಂಡು ಅಚ್ಚರಿಗೊಳ್ಳುತ್ತೇವೆ. ಅವರಿಗೆ ಸಾಧನೆಗೈಯುವಂಥ ಸಂದರ್ಭಗಳು ಬೇರೆ ಕೆಲವರಿಗೆ ಮಾತ್ರವೇ ದೊರೆತಿದ್ದುವು. ಆದರೆ ಅವರು ಕಾಲಕ್ಕೆ ಅನುಸಾರವಾಗಿ ವರ್ತಿಸಿದರು. ಅವರು ದಿವ್ಯಜ್ಞಾನಿಯೂ ರಾಜಕೀಯ ಮುತ್ಸದ್ಧಿಯೂ ಆಡಳಿತಾಧಿಕಾರಿಯೂ ಆಗುವ ಭಾಗ್ಯಗಳಿಸಿದ್ದರು. ಅವುಗಳ ಹಿನ್ನೆಲೆಯಲ್ಲಿ ದೇವನ ಬಗ್ಗೆ ಭರವಸೆ ಮತ್ತು ದೇವನೇ ತನ್ನನ್ನು ಕಳುಹಿಸಿದ್ದಾನೆಂಬ ನಂಬಿಕೆ ಇಲ್ಲದಿರುತ್ತಿದ್ದರೆ ಮಾನವವ ಚರಿತ್ರೆಯಲ್ಲಿ ಒಂದು ಮುಖ್ಯ ಅಧ್ಯಾಯವು ಬರೆಯದೆ ಬಿಟ್ಟು ಹೋಗುತ್ತಿತ್ತು."

**(Watt, W. Montgomery : Muhammad : Prophet and Statesman. Oxford University Press, 1974, pp. 210-237)**

*~*~*●*~*~*

## ಜೇಮ್ಸ್ ಎ. ಮಿಚೆನರ್

"ಬಾಲ್ಯದಲ್ಲಿಯೇ ಅನಾಥರಾದ ಅವರು ಯಾವಾಗಲೂ ಬಡವರ, ನಿರ್ಗತಿಕರ, ವಿಧವೆಯರ, ಅನಾಥರ, ಗುಲಾಮರ ಮತ್ತು ತುಳಿತಕ್ಕೆ ಗುರಿಯಾದವರ ಹಿತೈಷಿಯಾಗಿದ್ದರು.... ಅವರು ಮರುಭೂಮಿಯ ಆಚಾರಗಳಲ್ಲಿ ಬಂಧಿತರಾಗಿದ್ದ ಮಹಿಳೆಯರನ್ನು ಮೇಲಕ್ಕೆ ಎತ್ತಿದರು. ಅವರು ಸಾಮಾಜಿಕ ನ್ಯಾಯವನ್ನು ಪ್ರತಿಪಾದಿಸಿದರು.... ಕುಡುಕರಾಗಿದ್ದ ಜನರಿಗೆ ಮದ್ಯವನ್ನು

ನಿಷಿದ್ಧಗೊಳಿಸಿದರು... ಗುಲಾಮರನ್ನು ವಿಮೋಚಿಸಬೇಕೆಂದು ಅವರು ಬೋಧಿಸಿದರು. ತಂದೆಯು ತನಗೆ ಬೇಡವಾಗಿರುವ ತನ್ನ ಹೆಣ್ಣು ಶಿಶುವನ್ನು ಕೊಲ್ಲಬಾರದೆಂದು ಆಜ್ಞಾಪಿಸಿದರು. ಸಮಾಜದಿಂದ ದೌರ್ಜನ್ಯಕ್ಕೆ ಗುರಿಯಾದವರಿಗೆ ವಾರೀಸು ಹಕ್ಕು ನೀಡಲಾಯಿತು. ಯುದ್ಧಕ್ಕಿಂತ ಶಾಂತಿ ಉತ್ತಮವೆಂದು ಸಾರಲಾಯಿತು. ನ್ಯಾಯದಾನಕ್ಕೆ ಆದ್ಯತೆ ನೀಡಲಾಯಿತು.... ಇಸ್ಲಾಮಿನ ಹಾಗೆ ಬೇರೆ ಯಾವ ಧರ್ಮವೂ ಇಷ್ಟು ವೇಗದಿಂದ ಹರಡಲಿಲ್ಲ... ಈ ಧರ್ಮದ ಹಬ್ಬುವಿಕೆ ಖಡ್ಗದ ಮೂಲಕ ಸಾಧ್ಯವಾಯಿತೆಂದು ಪಾಶ್ಚಿಮಾತ್ಯರಲ್ಲಿ ಬಹುತೇಕ ಜನರು ನಂಬುತ್ತಾರೆ. ಆದರೆ ಆಧುನಿಕ ವಿದ್ವಾಂಸರು ಈ ನಿಲುವನ್ನು ಅಂಗೀಕರಿಸುವುದಿಲ್ಲ. ಖುರ್‌ಆನ್ ಮನಸ್ಸಾಕ್ಷಿಯ ಸ್ವಾತಂತ್ರ್ಯದ ಕುರಿತು ಸ್ಪಷ್ಟವಾಗಿ ಹೇಳಿದೆ... ಅನೇಕ ಪಾಶ್ಚಿಮಾತ್ಯರು ತಮ್ಮ ಚರಿತ್ರೆಯ ಪುಸ್ತಕಗಳಿಂದ ಪ್ರಭಾವಿತರಾಗಿ ಮುಸ್ಲಿಮರು ಬರ್ಬರ ಅವಿಶ್ವಾಸಿಗಳೆಂದು ನಂಬುತ್ತಿರುವುದರಿಂದ ಮುಸ್ಲಿಮ್ ವಿದ್ವಾಂಸರಿಂದ ತಮ್ಮ ಬೌದ್ಧಿಕ ಜೀವಿತವು ವಿಜ್ಞಾನ, ವೈದ್ಯಕೀಯ, ಗಣಿತ, ಭೂಗೋಳ ಶಾಸ್ತ್ರ ಮತ್ತು ತತ್ವಶಾಸ್ತ್ರಗಳ ಕ್ಷೇತ್ರದಲ್ಲಿ ಹೇಗೆ ಆಳವಾಗಿ ಪ್ರಭಾವಕ್ಕೊಳಗಾಗಿದೆ ಎಂದು ಮನವರಿಕೆ ಮಾಡಿಕೊಳ್ಳಲು ಅಸಮರ್ಥರಾಗಿದ್ದಾರೆ.... ನಾನು ಇಸ್ಲಾಮ್ ಧರ್ಮದ ಬಗ್ಗೆ ಅನೇಕ ವರ್ಷಗಳಿಂದ ಅಧ್ಯಯನ ಮಾಡುತ್ತಿದ್ದೇನೆ. ಈ ಧರ್ಮ ಮತ್ತು ಕ್ರೈಸ್ತ ಧರ್ಮ ಏಕೆ ಸಹಕರಿಸಲಾರವೆಂಬುದಕ್ಕೆ ಯಾವುದೇ ಸಮರ್ಪಕ ಕಾರಣವು ನನಗೆ ಕಾಣಿಸಿಲ್ಲ."

**(Michener, James A.: "Islam the Misunderstood Religion", Readers Digest. May 1955 pp. 77-86)**

*~*~*●*~*~*

## ರೋಬರ್ಟ್ ಎಲ್. ಗುಲಿಕ್ ಜೂನಿಯರ್

"ಮುಹಮ್ಮದರ ಜೀವನ ಚರಿತ್ರೆಯ ನಂತರ ಅತ್ಯಂತ ಆಸಕ್ತಿಯನ್ನು ಕೆರಳಿಸುವ ವಿಷಯ ಇಸ್ಲಾಮ್ ವಿದ್ಯಾಭ್ಯಾಸಕ್ಕೆ ನೀಡಿದ ಕೊಡುಗೆ ಮತ್ತು ಅದು ಸಂಸ್ಕೃತಿಗೆ ವಿವಿಧ ಆಯಾಮಗಳಲ್ಲಿ ನೀಡಿದ ಕೊಡುಗೆಗೆ ಸಂಬಂಧಿಸಿದೆ: ಆರ್ಥಿಕ ಸಿದ್ಧಾಂತ ಮತ್ತು ಅದರ ಪ್ರಯೋಗ, ಸಂಗೀತ, ಸಾಹಿತ್ಯ, ವಾಸ್ತುಶಿಲ್ಪ, ಶಿಲ್ಪಕಲೆ, ಗಣಿತ, ರಸಾಯನಶಾಸ್ತ್ರ, ಶರೀರ ವಿಜ್ಞಾನ, ವೈದ್ಯಶಾಸ್ತ್ರ.... ಇತ್ಯಾದಿ.

"ಪಾಶ್ಚಿಮಾತ್ಯರು ಇಸ್ಲಾಮಿನ ಹಬ್ಬುವಿಕೆಗೆ ಬಲಪ್ರಯೋಗವೇ ಕಾರಣವೆಂದು ಹೇಳುತ್ತಾರೆ. ಜಿಹಾದ್ ಅಥವಾ 'ಪವಿತ್ರ ಯುದ್ಧ'ದ ಬಗ್ಗೆ ಅವರ ನಿಲುವು ತಿರುಚಲ್ಪಟ್ಟದ್ದಾಗಿದೆ. ಅವರು ಮುಸ್ಲಿಮ್ ಯೋಧನನ್ನು ಒಂದು ಕೈಯಲ್ಲಿ ಖುರ್‌ಆನನ್ನೂ ಇನ್ನೊಂದು ಕೈಯಲ್ಲಿ ಖಡ್ಗವನ್ನೂ ಹಿಡಿದುಕೊಂಡಿರುವುದಾಗಿ ಚಿತ್ರಿಸುತ್ತಾರೆ. ಇದು ತಪ್ಪಾಗಿ ಗುರುತಿಸಲ್ಪಟ್ಟ ನಿಲುವಾಗಿದೆ. ವಾಸ್ತವಿಕವಾಗಿ ಮುಸ್ಲಿಮರಲ್ಲ, ಕ್ರೈಸ್ತ ಧರ್ಮಾನುಯಾಯಿಗಳು ಈ ವಿಷಯದಲ್ಲಿ ಮುಖ್ಯ ಅಪರಾಧಿಗಳಾಗಿದ್ದಾರೆ. ಸ್ಪೈನ್‌ನಲ್ಲಿ ಇನ್‌ಕ್ವಿಝಿಷನ್ ಕಾಲಘಟ್ಟದಲ್ಲಿ ಇಪ್ಪತ್ತು ಲಕ್ಷ ಮುಸ್ಲಿಮರು ಒಂದು ಕ್ರೈಸ್ತ ಪಂಥವನ್ನು ಸೇರದಿದ್ದರೆ ಕೊಲ್ಲಲ್ಪಡುವರೆಂದು ಬೆದರಿಕೆ ಹಾಕಲಾಗಿತ್ತು.

"ಮುಹಮ್ಮದರು ಮಾಡಿದ ಯುದ್ಧಗಳು ಆತ್ಮರಕ್ಷಣೆಗಾಗಿತ್ತು ಎಂದು ಸ್ಪಷ್ಟವಾಗಿ ಹೇಳಬಹುದು. ಆ ಯುದ್ಧಗಳನ್ನು ಮಾಡದಿರುತ್ತಿದ್ದರೆ ಮುಸ್ಲಿಮರೆಲ್ಲರೂ ನಾಶವಾಗುತ್ತಿದ್ದರು – ಹಾಗೆ ಆಗಿದ್ದರೆ ಮುಂದಿನ ನಾಗರಿಕತೆಗೆ ಎಂತಹ ದಾರುಣ ಪರಿಣಾಮ ಉಂಟಾಗುತ್ತಿತ್ತೆಂದು ಊಹಿಸಬಹುದು... ಇಸ್ಲಾಮ್ ಬಗ್ಗೆ ಬಲಯುತವಾಗಿ ಹೀಗೆ ಸಾಬೀತುಮಾಡಬಹುದು: ಯಾವ ಸ್ಥಳಗಳಲ್ಲೆಲ್ಲಾ ಇಸ್ಲಾಮ್ ಪ್ರವೇಶಿಸಿತೋ ಅಲ್ಲಿ ಅದು ಪ್ರಗತಿಹೊಂದಿದ ಮತ್ತು ಸಂಪನ್ನ ನಾಗರಿಕತೆಯನ್ನು ಸ್ಥಾಪಿಸಿತು. ಪರ್ಶಿಯನ್ ಜನರಲ್ಲಿ ಕೆಲವರು ಇಸ್ಲಾಮ್ ಅವರ ದೇಶವನ್ನು ಧ್ವಂಸಗೊಳಿಸಿತೆಂದು ವಾದಿಸುತ್ತಾರೆ. ಆದರೆ ಚರಿತ್ರೆಯು ಈ ಜನರ ಅನ್ಯಾಕ್ರಮಣ ಶೀಲ ಸ್ವದೇಶಪ್ರೇಮ ಭರಿತ, ಪೂರ್ವಗ್ರಹಪೀಡಿತ ಹೇಳಿಕೆಯನ್ನು ಅನುಮೋದಿಸುವುದಿಲ್ಲ. ಇಸ್ಲಾಮಿನ ಬೆಳಕು ಅತ್ಯಂತ ಹೆಚ್ಚು ಹೊಳಪಿನಿಂದ ಪ್ರಕಾಶಿಸುತ್ತಾ ಇದ್ದಾಗ ಇರಾನ್ ಕಲೆ ಮತ್ತು ವಿಜ್ಞಾನದಲ್ಲಿ ಉತ್ತುಂಗ ಶಿಖರವನ್ನು ತಲಪಿತು. ಆಗ ಖಗೋಳಶಾಸ್ತ್ರ, ವಾಸ್ತುಶಿಲ್ಪ, ನೇಯ್ಗೆ, ಬಣ್ಣ ಹಚ್ಚುವಿಕೆ ಮತ್ತು ಎಲ್ಲದಕ್ಕಿಂತಲೂ ಹೆಚ್ಚಾಗಿ ಸಾಹಿತ್ಯದಲ್ಲಿ ಅದು ಅತ್ಯುನ್ನತ ಸಾಧನೆಗಳನ್ನು ಮಾಡಿತು. ಹಾಫಿಝ್, ಸಅದಿ, ಜಲಾಲುದ್ದೀನ್ ರೂಮಿ ಮೊದಲಾದ ಸಾಹಿತ್ಯ ರತ್ನಗಳು ಆದರಣೀಯ ಮಹಾಶಯರಾದ ಮುಹಮ್ಮದರ ಭವ್ಯ ಉಪದೇಶಗಳಿಂದ ಲಾಭಪಡೆದರು. ಮುಹಮ್ಮದರು ಮಾನವರಿಗೆ ಚೆನ್ನಾಗಿ ವಿದ್ಯೆಯನ್ನು ನೀಡಿದ ಮಹಾನುಭಾವರಲ್ಲಿ ಒಬ್ಬರಾಗಿರುವರು... ಮುಹಮ್ಮದರು ನಿಜವಾಗಿಯೂ ಒಬ್ಬ ಬೋಧಕರಾಗಿದ್ದರು. ಅವರು ಮಾನವರನ್ನು ಹೆಚ್ಚಿನ ಸ್ವಾತಂತ್ರ್ಯಕ್ಕೆ ಮತ್ತು ಸುಖಸಂತೋಷಕ್ಕೆ ಒಯ್ಯುವ ದಾರಿ ತೋರಿಸುವ ಮಾರ್ಗ ಸೂಚಿಯಾಗಿದ್ದರು."

**(Gulick Jr., Robert L.: Muhammad the Educator, Institute of Islamic Culture, Lahore, Pakistan, 1975, pp. 2, 47, 103-104)**

*~*~*●*~*~*

## ರೂಥ್ ಕ್ರಾನ್‌ಸ್ಟನ್

"ಬಾಲ್ಯದಲ್ಲಿಯೇ ಅನಾಥರಾದ ಮುಹಮ್ಮದರನ್ನು ಅವರ ಚಿಕ್ಕಪ್ಪ ಪೋಷಿಸಿದರು. ಅವರು ಸಾತ್ವಿಕ ಗೌರವಾರ್ಹ ಸ್ವಭಾವಗುಣಗಳನ್ನು ಯೌವ್ವನ ಕಾಲದಲ್ಲಿ ಪ್ರದರ್ಶಿಸಿದರು. ಸಜ್ಜನರೂ ಸೌಮ್ಯರೂ ತನ್ನ ಕರ್ತವ್ಯಗಳಿಗೆ ನಿಷ್ಠರೂ ಆಗಿದ್ದ ಅವರನ್ನು ಅವರ ಸಂಬಂಧಿಕರೂ ನೆರೆಹೊರೆಯವರೂ ಪ್ರೀತಿಸುತ್ತಿದ್ದರು. ಅವರಿಗೆ ಅನಂತರ ಅಲ್ ಅಮೀನ್ - ಅತ್ಯಂತ ಪ್ರಾಮಾಣಿಕ ಎಂದು ಮಕ್ಕದ ಜನರು ಪ್ರಶಸ್ತಿ ನೀಡಿದರು.

"ಮುಹಮ್ಮದರ ಉಪದೇಶಗಳು ಪರಲೋಕ ಜೀವಿತದ ಬಗ್ಗೆಯಾಗಲೀ ಬೇರೆ ಯಾವುದೇ ವಿಷಯಕ್ಕೆ ಸಂಬಂಧಿಸಿಯಾಗಲಿ ತರ್ಕರಹಿತವಾದ ಹೇರಿಕೆಯ ಸ್ವಭಾವದ್ದಾಗಿರಲಿಲ್ಲ. ಖುರ್‌ಆನ್‌ನಲ್ಲಿ ಇಂತಹ ಉಪದೇಶಗಳಿಲ್ಲದಿರುವುದು ಗಮನಾರ್ಹವಾಗಿದೆ. ಅದು ಮಾನವರ ಆತ್ಮಸಾಕ್ಷಿಯನ್ನು ಮತ್ತು ಅವರ ವಿವೇಕವನ್ನು ಸಂಬೋಧಿಸುತ್ತದೆ. ಅದು ಮಾನವರು ದೇವನೊಂದಿಗೆ ನೇರ ಸಂಪರ್ಕ ಸ್ಥಾಪಿಸಲು ಆಗ್ರಹಪಡಿಸುತ್ತದೆ. ದೇವನು ಮಾನವರೊಂದಿಗೆ ನೇರ ಸಂಪರ್ಕ ಸ್ಥಾಪಿಸುತ್ತಾನೆ; ಮಧ್ಯವರ್ತಿಗಳ ಆವಶ್ಯಕತೆ ಇರುವುದಿಲ್ಲ.

"ಮುಹಮ್ಮದರು ಎಂದೂ ಯುದ್ಧವನ್ನೂ ರಕ್ತಪಾತವನ್ನೂ ಪ್ರಚೋದಿಸಲಿಲ್ಲ. ಅವರು ಮಾಡಿದ ಎಲ್ಲಾ ಯುದ್ಧಗಳು ಶತ್ರುಗಳನ್ನು ತಡೆಗಟ್ಟಲಿಕ್ಕಾಗಿದ್ದವು. ಅವರು ಜೀವರಕ್ಷಣೆಗಾಗಿ ಹೋರಾಡಿದರು. ಅವರು ಅವರ ಕಾಲದ ಆಯುಧಗಳನ್ನು ಉಪಯೋಗಿಸಿ ಅವರ ಕಾಲದ ಸಂಪ್ರದಾಯಗಳ ಪ್ರಕಾರ ಹೋರಾಡಿದರು.

"ಧರ್ಮದ ಸ್ವಾತಂತ್ರ್ಯ ಮತ್ತು 'ಭೀತಿಯಿಂದ ಸ್ವಾತಂತ್ರ್ಯ'ವನ್ನು ಘೋಷಿಸಿದ ಅಟ್ಲಾಂಟಿಕ್ ಚಾರ್ಟರ್ ಜಾರಿಗೊಳ್ಳುವುದಕ್ಕೆ ಹದಿಮೂರು ನೂರು ವರ್ಷಗಳಿಗೆ ಮೊದಲು ಮುಹಮ್ಮದರು ತಾನು ಜಯಿಸಿದ ಯಹೂದಿ ಮತ್ತು ಕ್ರೈಸ್ತ ಗೋತ್ರಗಳೊಂದಿಗೆ ಒಡಂಬಡಿಕೆ ಮಾಡಿ ಅವರಿಗೆ ಆರಾಧನೆಯ ಸ್ವಾತಂತ್ರ್ಯ ಮತ್ತು ಸ್ಥಳೀಯ ಸ್ವಯಂ ಆಡಳಿತೆಯ ಹಕ್ಕುಗಳನ್ನು ನೀಡಿದರು. ಮುಸ್ಲಿಮರು ಸ್ವಾಧೀನ ಪಡಿಸಿದ ಅನೇಕ ದೇಶಗಳಲ್ಲಿ ಅಲ್ಲಿನ ಮುಸ್ಲಿಮೇತರ ಪ್ರಜೆಗಳೊಂದಿಗೆ ಉತ್ತಮ ಮತ್ತು ನ್ಯಾಯಬದ್ಧ ರೀತಿಯಲ್ಲಿ ವರ್ತಿಸಲಾಯಿತು ಮತ್ತು ಮತಪರಿವರ್ತನೆಗೆ ಅವರು ಪ್ರಯತ್ನಿಸಲಿಲ್ಲ.

"ಮುಹಮ್ಮದರು ದಯಾಳುವೂ ವಿನೀತರೂ ಹೆಚ್ಚು ಮಾತನಾಡದ ಚಿಂತಕರೂ ಅನ್ಯರ ಮಾತುಗಳನ್ನು ಗಮನಿಸುವವರೂ ಉತ್ತಮ ಹಾಸ್ಯಪ್ರಿಯರೂ ಆಗಿದ್ದರು. ಅವರ ಜನತೆ ಅವರನ್ನು ಅತಿಶಯವಾಗಿ ಗೌರವಿಸಿದುದರ ಬಗ್ಗೆ ಆಶ್ಚರ್ಯಪಡಬೇಕಾಗಿಲ್ಲ. ಎಲ್ಲಾ ಧಾರ್ಮಿಕ ನಾಯಕರ ಹಾಗೆ ಮುಹಮ್ಮದರಿಗೆ ಕೆಲವು ಕಷ್ಟಕರವಾದ ವಿಷಯಗಳಿದ್ದುವು - ಅವರ ಶಿಷ್ಯರ ಮಧ್ಯೆ ಗುಂಪುಗಾರಿಕೆ, ಅಸೂಯೆ, ರೋಗಗಳು, ದೂರುಗಳು, ಒಂದು ದೇಶದಲ್ಲಿ ಒಂದು ಸುವ್ಯವಸ್ಥಿತ ಸಮಾಜವನ್ನು ಮೊದಲ ಬಾರಿಗೆ ರೂಪಿಸುವಾಗ ಉಂಟಾಗುವ ಕಷ್ಟಗಳು. ಮುಹಮ್ಮದರು ಎಲ್ಲಾ ಸಂಕಷ್ಟಗಳನ್ನು ಎದುರಿಸಿ ತನ್ನ ಜನತೆಯನ್ನು ಮುಂದಕ್ಕೆ ಸಾಗಿಸಿದರು - ತನ್ನ ವ್ಯಕ್ತಿತ್ವದ ಬಲಯುತವೂ ಎಂದೂ ಬಳಲಿ ಹೋಗದ ಧೈರ್ಯ ಮತ್ತು ನಿಷ್ಠೆಯ ಮೂಲಕ."

**(Cranston, Ruth : World Faith, Harper & Brothers, New York, U.S.A. 1949, pp. 138-39, 149,157 and 163)**

*~*~* ● *~*~*

## ತಾರಾ ಚಂದ್

"ಅಲ್ ಅಮೀನ್ (ಅತ್ಯಂತ ಪ್ರಾಮಾಣಿಕ) ಎಂದು ಹೆಸರು ಗಳಿಸಿದ ಮುಹಮ್ಮದರ ಕುರಿತು ಮುಸ್ಲಿಮೇತರರು ಚೆನ್ನಾಗಿ ತಿಳಿದುಕೊಳ್ಳುವುದು ಆವಶ್ಯಕವಾಗಿದೆ. ಅವರು ಬಡವರ, ತುಳಿತಕ್ಕೆ ಗುರಿಯಾದವರ ಮತ್ತು ಅನಾಥರ ಸ್ನೇಹಿತರಾಗಿದ್ದರು. ಅವರು ಸುಖಭೋಗಗಳನ್ನು ತ್ಯಜಿಸಿ, ತನ್ನ ಸ್ವಂತ ಕೈಗಳಿಂದ ತನ್ನ ಬಟ್ಟೆಗಳಿಗೆ ತೇಪೆ ಹಚ್ಚಿದರು, ಪಾದರಕ್ಷೆಗಳನ್ನು ದುರಸ್ತಿಗೊಳಿಸಿದರು ಮತ್ತು ಮಸ್‌ಜಿದ್ ನಿರ್ಮಾಣದಲ್ಲಿ ಶ್ರಮವಹಿಸಿದರು. ಅವರು ಖರ್ಜೂರ ತಿಂದು ಮತ್ತು ನೀರು ಕುಡಿದು ಜೀವಿಸಿದರು. ಅವರು ಪ್ರಯಾಣಮಾಡುತ್ತಿದ್ದಾಗ ಅದನ್ನು ತನ್ನ ಸೇವಕನೊಂದಿಗೆ ಹಂಚಿ ತಿಂದರು. ಅವರು ಶತ್ರುಗಳನ್ನು ಕ್ಷಮಿಸಿದರು. ಅವರು ಗುಲಾಮರಿಗೆ ದಯೆದೋರಿದರು. ಅವರು ಧೈರ್ಯಶಾಲಿಯೂ ಯಾರಿಗೂ ಬಗ್ಗದವರೂ ಆಗಿದ್ದರು. ಹೀಗಿದ್ದರೂ ಅವರು ಸೌಜನ್ಯಶೀಲರೂ ಪ್ರೀತಿದೋರುವವರೂ ಆಗಿದ್ದರು. ಅವರು ಇಸ್ಲಾಮನ್ನು ಖಡ್ಗದಿಂದ ಗಳಿಸಿದ ಜಯಗಳ ಮೂಲಕ ಹಬ್ಬಿಸಲಿಲ್ಲ ಎಂದು ನಾವು ಮನವರಿಕೆ ಮಾಡಬೇಕು. ಅವರು ತನ್ನ ವ್ಯಕ್ತಿತ್ವದ ಇಂದ್ರಜಾಲ ಮತ್ತು ಆಶ್ಚರ್ಯಕರವಾದ ವಾದಸರಣಿಯಿಂದ ಅದನ್ನು ಸಾಧಿಸಿದರು.

"ಇಸ್ಲಾಮ್ ಧರ್ಮವು ವಿನಯ ಮತ್ತು ಆತ್ಮಾಭಿಮಾನವನ್ನು ಆಶ್ಚರ್ಯಕರವಾದ ರೀತಿಯಲ್ಲಿ ಒಗ್ಗೂಡಿಸಿದೆ ಎಂಬುದನ್ನು ಸಹ ಅರಿತುಕೊಳ್ಳುವುದು ಆವಶ್ಯಕವಾಗಿದೆ. ಅದು ದೇವನ ಮಹೋನ್ನತ ಸ್ಥಾನವನ್ನು ಕೊಂಡಾಡಿ ಅವನೆದುರಿಗೆ ಮನುಷ್ಯನು ತಾನು ಏನೂ ಅಲ್ಲವೆಂದು ಪರಿಗಣಿಸಬೇಕೆಂದೂ ಆದರೆ ಮನುಷ್ಯರ ಮಧ್ಯೆ ಯಾವುದೇ ವ್ಯತ್ಯಾಸವಿಲ್ಲದೆ ಸಂಪೂರ್ಣ ಸಮಾನತೆ

ಇದೆಯೆಂದೂ ಪ್ರತಿಯೊಬ್ಬನು ಅವನ ಹುಟ್ಟು, ಸ್ಥಾನಮಾನ ಮತ್ತು ಐಶ್ವರ್ಯವನ್ನು ಗಣಿಸದೆ ಇನ್ನೊಬ್ಬನಿಗೆ ಸಮಾನನೆಂದೂ ಅದು ಘೋಷಿಸಿತು. ಇಸ್ಲಾಮ್ ನ್ಯಾಯ, ಬುದ್ಧಿಶಕ್ತಿ, ಧೈರ್ಯ ಮತ್ತು ಮಧ್ಯಮಾರ್ಗವನ್ನು ಅವಲಂಬಿಸಲು ಆಗ್ರಹಪಡಿಸುತ್ತದೆ. ಅದರ ತತ್ವಗಳನ್ನು ಸರಿಯಾಗಿ ವ್ಯಾಖ್ಯಾನಿಸುವುದಾದರೆ, ಅದು ಎಲ್ಲಾ ಧರ್ಮಗಳ ಪ್ರವಾದಿಗಳನ್ನು ಗೌರವಿಸುತ್ತದೆ ಮತ್ತು ದೇವಾರಾಧನೆಯನ್ನು ಉಪದೇಶಿಸುವ ಎಲ್ಲಾ ಧರ್ಮಗಳ ಬಗ್ಗೆ ಅದು ಸಹಿಷ್ಟು ಮನೋಭಾವನೆಯನ್ನು ಹೊಂದಿದೆ."

**(Chand, Tara : Mohammad and Teachings of Qur'an. Shaikh Muhammad Ashraf, Lahore, Pakistan, 1945, pp. VIII -IX)**

*~*~*●*~*~*

## ಎಂ. ಎನ್. ರೋಯ್

"ಪ್ರತಿಯೊಬ್ಬ ಪ್ರವಾದಿ ತನ್ನ ವಾದವನ್ನು ಪವಾಡಗಳನ್ನು ಮಾಡುವ ಮೂಲಕ ಪುಷ್ಟೀಕರಿಸುತ್ತಾರೆ. ಈ ದೃಷ್ಟಿಯಿಂದ ನೋಡುವುದಾದರೆ, ಮುಹಮ್ಮದರಿಗಿಂತ ಮುಂಚಿನ ಅಥವಾ ಅವರ ನಂತರದ ಪ್ರವಾದಿಗಳಗಿಂತ ಅವರು ಅತ್ಯಂತ ಶ್ರೇಷ್ಠರೆಂದು ಗಣಿಸಲ್ಪಡುವರು. ಇಸ್ಲಾಮ್ ಧರ್ಮವು ವ್ಯಾಪಿಸಿದುದು ಎಲ್ಲಾ ಪವಾಡಗಳಗಿಂತ ಅತ್ಯಂತ ಶ್ರೇಷ್ಠ ಪವಾಡವಾಗಿದೆ.

"ಕುಲೀನ, ಸಹಿಷ್ಣು ಜನಾಂಗಗಳ ಮೇಲೆ ಮತಾಂಧರ ವಿಜಯವೆಂದು ಇಸ್ಲಾಮಿನ ಹಬ್ಬುವಿಕೆಯನ್ನು ವಿಶ್ಲೇಷಿಸುವಂತಹ ಕೀಳು ಸಿದ್ಧಾಂತವನ್ನು ವಿದ್ಯಾವಂತ ಲೋಕವು ಇಂದು ತಿರಸ್ಕರಿಸಿದೆ. ಇಸ್ಲಾಮಿನ ಅದ್ಭುತ ವಿಜಯವು ಅದರ ಕ್ರಾಂತಿಕಾರಿ ತತ್ವಗಳ ಮತ್ತು ಪುರಾತನ ಗ್ರೀಸ್, ರೋಮ್ ದೇಶಗಳ ನಾಗರಿಕತೆ ಮತ್ತು ಪರ್ಶಿಯಾ, ಚೈನ ಮತ್ತು ಹಿಂದೂಸ್ತಾನದ ನಾಗರಿಕತೆಯ ಅವನತಿಯ ಕಾರಣದಿಂದ ಉಂಟಾದ ನಿರಾಶೆಯ ಪರಿಸ್ಥಿತಿಯಿಂದ ಜನಸಾಮಾನ್ಯರನ್ನು ಮುನ್ನಡೆಸಲು ಅದಕ್ಕಿದ್ದ ಸಾಮರ್ಥ್ಯದ ಕಾರಣದಿಂದಾಗಿದೆ.

"ಇಸ್ಲಾಮಿನ ಮೂಲತತ್ವ – ದೇವನೊಬ್ಬನೇ ಎಂಬ ತತ್ವ – ಅನ್ಯರ ಬಗ್ಗೆ ಸಹಿಷ್ಣು ಭಾವವನ್ನು ಪ್ರಚೋದಿಸುತ್ತದೆ. ಎಲ್ಲಾ ಕುಂದುಕೊರತೆಗಳು ಮತ್ತು ವೈಕಲ್ಯಗಳನ್ನು ಒಳಗೊಂಡ ಪ್ರಪಂಚ, ಎಲ್ಲಾ ತಪ್ಪು ಮತ್ತು ನಿರರ್ಥಕ ಕೆಲಸಗಳನ್ನು ಮಾಡುವ ಮಾನವರು ಒಬ್ಬನೇ ಒಬ್ಬ ದೇವನ ಸೃಷ್ಟಿ ಎಂದು ನಂಬುವಾಗ ಈ ಉನ್ನತ ತತ್ವದಲ್ಲಿ ನಂಬಿಕೆ ಇರಿಸುವವನು ವಿಕಲತೆಗಳನ್ನು ಕಂಡು ವ್ಯಥೆಪಡಬಹುದು. ಅವನಿಗೆ ನಿರರ್ಥಕವೆಂದೂ ವಿಕೃತವೆಂದೂ ಕಾಣುವುದನ್ನು ನೋಡಿ ನಗಬಹುದು. ಆದರೆ ಅವನ ವಿಶ್ವಾಸವು ಅವುಗಳ ಬಗ್ಗೆ ಅವು ಅನ್ಯ ಕೆಟ್ಟ ದೇವನ ಕೆಲಸವೆಂದು ಯೋಚಿಸಲು ಸಾಧ್ಯವಾಗದು. ಸತ್ಯವಿಶ್ವಾಸಿಯು ತನ್ನ ಹಾಗೆ ಆರಾಧನೆ ಮಾಡದ ಅನ್ಯಮತೀಯರನ್ನು ದಾರಿತಪ್ಪಿದವರೆಂದು ಹೇಳಬಹುದಾದರೂ ಅವರೆಲ್ಲರೂ ಒಬ್ಬನೇ ಒಬ್ಬ ಪಿತನ ಮಕ್ಕಳೆಂದೂ ಅವರನ್ನು ನೇರಮಾರ್ಗಕ್ಕೆ ತರಬೇಕೆಂದೂ ಅವರು ತಮ್ಮ ಮೋಕ್ಷಕ್ಕೆ ಸಿದ್ಧರಾಗುವ ತನಕ ತಾಳ್ಮೆಯಿಂದ ಕಾಣಬೇಕೆಂದೂ ಯೋಚಿಸುವನು."

**(Roy M. N. : The Historical Role of Islam, Renaissance Publishers Private Ltd., Calcutta, India, 1958, pp. 4-5, 6, 34)**

*~*~*●*~*~*

## ಫಿಲಿಪ್ ಕೆ. ಹಿಟ್ಟಿ

"ಯಾವುದೇ ಒಬ್ಬ ಮನುಷ್ಯನ ಮುಂದೆ ಇಷ್ಟರವರೆಗೆ ಎಂದೂ ತಲೆಬಾಗದ ಅರೇಬಿಯಾ ಈಗ ಮುಹಮ್ಮದರಿಂದ ಆಳಲ್ಪಡಲು ಮತ್ತು ಅವರ ಹೊಸ ಯೋಜನೆಯಲ್ಲಿ ಸೇರಲು ಸಿದ್ಧವಾಯಿತು. ಅದರ ಅಸಂಸ್ಕೃತ ಧರ್ಮವು ಭವ್ಯವಾದೊಂದು ಧರ್ಮಕ್ಕೆ ಮತ್ತು ಶ್ರೇಷ್ಠ ನೈತಿಕತೆಗೆ ಶರಣಾಯಿತು... ಮುಹಮ್ಮದರು ಅತ್ಯುನ್ನತ ಸ್ಥಾನವನ್ನು ಗಳಿಸಿದಾಗ ಕೂಡ ಹಿಂದಿನ ಕಾಲದಲ್ಲಿ ಜೀವಿಸಿದ ಹಾಗೆ ಆಡಂಬರ ರಹಿತ ಜೀವಿತವನ್ನು ಮಣ್ಣಿನಿಂದ ನಿರ್ಮಿಸಿದ ಮನೆಯಲ್ಲಿ, ಇಂದು ಸಹ ಅರೇಬಿಯಾ, ಸಿರಿಯಾಗಳಲ್ಲಿ ಕಾಣಬಹುದಾದಂತಹ ಹಳೆಯ ಮಾದರಿಯ ಕೆಲವೇ ಕೋಣೆಗಳಿರುವ ಮತ್ತು ಮುಂದುಗಡೆ ಒಂದು ಚಾವಡಿ ಇದ್ದು ಅದರ ಮೂಲಕ ಮಾತ್ರ ಪ್ರವೇಶಿಸಬಹುದಾದ ಆವೆಮಣ್ಣಿನ ಗೋಡೆಗಳಿಂದ ನಿರ್ಮಿತ ಮನೆಯಲ್ಲಿ ಜೀವಿಸಿದರು. ಅವರು ಸ್ವತಃ ತನ್ನ ಹರಿದ ಬಟ್ಟೆಗಳನ್ನು ಹೊಲಿಯುತ್ತಿದ್ದರು. ಅವರನ್ನು ಜನರು ಯಾವಾಗಲೂ ಭೇಟಿಯಾಗಬಹುದಿತ್ತು... ಅರಬಿಗಳ ಗೋತ್ರ ನಿಷ್ಠೆಯು ಧರ್ಮನಿಷ್ಠೆಗೆ ತಕ್ಷಣ ಬದಲಾಯಿಸಲ್ಪಟ್ಟಿತು. ಅರಬಿಗಳು ಇಸ್ಲಾಮಿಕ ಭ್ರಾತೃದಲ್ಲಿ ಒಗ್ಗೂಡಿದರು. ಹೊಸ ಮುಸ್ಲಿಮ್ ಸಮುದಾಯದಲ್ಲಿ ಪುರೋಹಿತರಿಲ್ಲ, ಉಚ್ಛ–ನೀಚರಿಲ್ಲ ಮತ್ತು ಕೇಂದ್ರೀಯ ಪುರೋಹಿತ ವರ್ಗವಿಲ್ಲ... ಮುಹಮ್ಮದರು ತನ್ನ ಜೀವಿತದ ಕಾಲದೊಳಗೆ ಹಿಂದೆಂದೂ ಐಕ್ಯದಿಂದಿರದ ಜನರ ಒಂದು ಐಕ್ಯ ಸಮುದಾಯವನ್ನು ಸೃಷ್ಟಿಸಿದರು. ಅವರಿದ್ದ ಪ್ರದೇಶವು ಕೇವಲ ಭೌಗೋಳಿಕವಾಗಿ ಒಂದು ಹೆಸರನ್ನು ಮಾತ್ರ ಪಡೆದಿತ್ತು. ಮುಹಮ್ಮದ್ ಒಂದು ಧರ್ಮವನ್ನು ಸ್ಥಾಪಿಸಿದರು.

ಅದು ವಿಶಾಲ ಪ್ರದೇಶಗಳಲ್ಲಿ ಕ್ರೈಸ್ತ ಧರ್ಮವನ್ನೂ ಯಹೂದಿ ಧರ್ಮವನ್ನೂ ಹಿಂದಕ್ಕೆ ತಳ್ಳಿತು ಮತ್ತು ಇಂದು ಸಹ ಮಾನವ ಕುಲದ ಉತ್ತಮವಾದೊಂದು ಭಾಗವನ್ನು ತನ್ನಲ್ಲಿ ಸೇರ್ಪಡಿಸಿಕೊಂಡಿದೆ. ಮುಹಮ್ಮದರು ಒಂದು ಸಾಮ್ರಾಜ್ಯಕ್ಕೆ ಅಸ್ತಿಭಾರ ಹಾಕಿದರು. ಅದು ಸ್ವಲ್ಪ ಸಮಯದೊಳಗೆ ಅಂದಿನ ಕಾಲದ ನಾಗರಿಕ ಲೋಕದ ಅನೇಕ ಉತ್ತಮ ಪ್ರದೇಶಗಳನ್ನು ತನ್ನಲ್ಲಿ ಸೇರಿಸಿಕೊಂಡಿತು.

"ಮುಹಮ್ಮದ್ ವಿದ್ಯಾಭ್ಯಾಸರಹಿತರಾಗಿದ್ದರೂ ಅವರು ಒಂದು ಗ್ರಂಥಕ್ಕೆ ಕಾರಣೀಭೂತರಾಗಿದ್ದಾರೆ. ಅದನ್ನು ಮಾನವಕುಲದ ಎಂಟನೇ ಒಂದು ಅಂಶದಷ್ಟು ಜನರು ಎಲ್ಲಾ ವಿಜ್ಞಾನ, ವಿವೇಕ ಮತ್ತು ಧರ್ಮಶಾಸ್ತ್ರದ ಮೂರ್ತರೂಪವೆಂದು ಗಣಿಸುತ್ತಾರೆ."

**(Hitti, Philip K. : Muhammad the Prophet of Allah, History of the Arabs, Chapter VIII, Macmillan & Co., London, 1960, pp. 119-22)**

*~*~* ● *~*~*

## ಜೋರ್ಜ್ ಬರ್ನಾರ್ಡ್ ಶಾ

"ಯಾವುದಾದರೂ ಧರ್ಮಕ್ಕೆ ಇಂಗ್ಲೆಂಡನ್ನು ಅಲ್ಲ, ಯುರೋಪನ್ನು ಒಂದು ನೂರು ವರ್ಷಗಳೊಳಗೆ ಆಳಲು ಸಂದರ್ಭ ಸಿಗುವುದಾದರೆ ಅದು ಇಸ್ಲಾಮ್ ಧರ್ಮಕ್ಕೆ ಆಗಿದೆ.

"ನಾನು ಮುಹಮ್ಮದರ ಧರ್ಮವನ್ನು ಬಹಳ ಉನ್ನತ ಮಟ್ಟದಲ್ಲಿ ಪರಿಗಣಿಸಿರುವೆನು – ಅದರ ಆಶ್ಚರ್ಯಕರ ಚೈತನ್ಯದ ಕಾರಣದಿಂದ. ಜೀವಿತದ ಬದಲಾವಣೆ ಹೊಂದುತ್ತಿರುವ ಕಾಲಘಟ್ಟಗಳಿಗೆ ಅನುಸಾರವಾಗಿ ತನ್ನನ್ನು ಪರಿವರ್ತಿಸಿಕೊಳ್ಳುವ ಸಾಮರ್ಥ್ಯ ಹೊಂದಿರುವ ಧರ್ಮ ಇದೊಂದೇ ಆಗಿದೆ ಎಂದು ನನಗೆ ತೋರುತ್ತದೆ. ಆ ಕಾರಣದಿಂದ ಅದು ಪ್ರತಿಯೊಂದು ಕಾಲಘಟ್ಟಕ್ಕೆ ಅನುಸರಣೆಗೆ ಯೋಗ್ಯವಾಗುವುದು. ನಾನು ಮುಹಮ್ಮದರ ಬಗ್ಗೆ ಅಧ್ಯಯನ ಮಾಡಿದ್ದೇನೆ. ಅವರು ಅದ್ಭುತ ಮನುಷ್ಯರಾಗಿದ್ದರು. ನನ್ನ ಅಭಿಪ್ರಾಯದಲ್ಲಿ ಅವರನ್ನು ಕ್ರಿಸ್ತ ವಿರೋಧಿ ಎಂದು ಕರೆಯುವುದಕ್ಕಿಂತ ಅವರನ್ನು ಮಾನವ ಕುಲದ ರಕ್ಷಕನೆಂದು ಕರೆಯಬೇಕು.

"ಅವರಂತಹ ಒಬ್ಬ ವ್ಯಕ್ತಿ ಆಧುನಿಕ ಲೋಕದ ಏಕಾಧಿಪತಿಯಾಗುವುದಾದರೆ ಆ ವ್ಯಕ್ತಿ ಲೋಕದ ಸಮಸ್ಯೆಗಳನ್ನು ಬಗೆಹರಿಸಿ ಅದಕ್ಕೆ ಆವಶ್ಯಕವಾದ ಶಾಂತಿ ಮತ್ತು ಸುಖವನ್ನು ನೀಡಬಲ್ಲರೆಂದು ನಾನು ನಂಬುತ್ತೇನೆ. ನಾನು ಭವಿಷ್ಯ ನುಡಿಯುತ್ತೇನೆ: ಮುಹಮ್ಮದರ ಧರ್ಮವು ಇಂದು ಯುರೋಪಿನಲ್ಲಿ ಅಂಗೀಕರಿಸಲ್ಪಡಲು ಪ್ರಾರಂಭವಾದ ಹಾಗೆ ಅದು ನಾಳೆಯ ಯುರೋಪಿಗೂ ಅಂಗೀಕಾರಕ್ಕೆ ಅರ್ಹವಾಗುವುದು."

**(Shaw, George Bernard : The Genuine Islam, Vol. 1, No.8, 1936** ಇಂಟರ್‌ನೆಟ್‌ನಿಂದ ಉಲ್ಲೇಖಿತ**)**

*~*~* ● *~*~*

## ಜವಾಹರಲಾಲ್ ನೆಹರೂ

"ಅರಬ್ ಜನಾಂಗ ಅನ್ಯದೇಶಗಳಲ್ಲಿ ನಡೆಯುತ್ತಿರುವ ಘಟನೆಗಳ ಬಗ್ಗೆ ಯಾವುದೇ ಕಾಳಜಿ ಇಲ್ಲದೆ, ನಿದ್ರಾವಸ್ಥೆಯಲ್ಲಿ ಅನೇಕ ಯುಗಗಳ ಕಾಲ ಜೀವಿಸುತ್ತಿತ್ತು. ಇಂತಹ ಅರಬ್ ಜನಾಂಗ ಹಠಾತ್ತಾಗಿ ಎಚ್ಚರಗೊಂಡು ಪ್ರಚಲಿತ ಶಕ್ತಿಯನ್ನು ಪ್ರದರ್ಶಿಸಿ ಲೋಕವನ್ನು ಬೆಚ್ಚಿಬೀಳುವಂತೆ ಮಾಡಿ ಅದನ್ನು ಗಾಬರಿಗೊಳಪಡಿಸಿದುದು ಅತ್ಯಾಶ್ಚರ್ಯಕರವಾಗಿದೆ. ಅರಬಿಗಳ ಕಥೆ ಮತ್ತು ಅವರು ಹೇಗೆ ವೇಗವಾಗಿ ಏಷ್ಯಾ, ಯುರೋಪು ಮತ್ತು ಆಫ್ರಿಕದಲ್ಲಿ ವ್ಯಾಪಿಸಿದರು ಎಂಬುದು ಹಾಗೂ ಶ್ರೇಷ್ಠ ಸಂಸ್ಕೃತಿ ಮತ್ತು ನಾಗರಿಕತೆಯನ್ನು ಅವರು ಬೆಳೆಸಿದುದು ಚರಿತ್ರೆಯ ಅದ್ಭುತಗಳಲ್ಲಿ ಒಂದಾಗಿದೆ. ಇಸ್ಲಾಮ್ ಎಂಬ ಹೊಸ ಶಕ್ತಿ ಅಥವಾ ಹೊಸ ತತ್ವಾದರ್ಶ ಅರಬಿಗಳಿಗೆ ಆತ್ಮಧೈರ್ಯ ಮತ್ತು ಶಕ್ತಿಯನ್ನು ತುಂಬಿಸಿಕೊಟ್ಟಿತು.

"ಮುಹಮ್ಮದ್ ಎಂಬ ಹೊಸ ಪ್ರವಾದಿಯು ಇಸ್ಲಾಮ್ ಧರ್ಮವನ್ನು ಸ್ಥಾಪಿಸಿದರು. ಅವರು 570ರಲ್ಲಿ ಮಕ್ಕದಲ್ಲಿ ಜನಿಸಿದರು..... ಅವರು ಶಾಂತಮಯ ಜೀವಿತ ನಡೆಸುತ್ತಿದ್ದರು. ಅವರು ಅವರ ಸ್ನೇಹಿತರಿಂದ ಮೆಚ್ಚಿಗೆಗೂ ನಂಬಿಕೆಗೂ ಪಾತ್ರರಾಗಿದ್ದರು. ಅವರನ್ನು 'ಅಲ್‌ಅಮೀನ್' (ಅತ್ಯಂತ ಪ್ರಾಮಾಣಿಕ – ನಂಬಿಕೆಗೆ ಅರ್ಹ) ಎಂದು ಕರೆಯಲಾಗುತ್ತಿತ್ತು.... ಅವರು ಉಪದೇಶಿಸಿದ ಧರ್ಮವು ಅದರ ಸರಳತೆ, ಸ್ಪಷ್ಟತೆ ಹಾಗೂ ಅದರಲ್ಲಿ ಪ್ರಜಾಪ್ರಭುತ್ವ ಮತ್ತು ಸಮಾನತೆಯ ಸತ್ವಗಳ ಕಾರಣ ಜನಸಾಮಾನ್ಯರಿಗೆ ಪ್ರಿಯವಾಯಿತು. ಅರಬ್ ದೇಶದ ನೆರೆಹೊರೆಯ ದೇಶಗಳ ಜನಸಾಮಾನ್ಯರಿಗೂ ಅದು ಪ್ರಿಯಕರವಾಯಿತು. ಆ ಜನರು ನಿರಂಕುಶ ದೊರೆಗಳಿಂದಲೂ ಗರ್ವಿಷ್ಟರಾದ ಪುರೋಹಿತರಿಂದಲೂ ದೌರ್ಜನ್ಯಗಳಿಗೆ ದೀರ್ಘ ಕಾಲ ಗುರಿಯಾಗಿದ್ದರು. ಆ ಜನರು ಹಳೆಯ ಕಟ್ಟು ಕಟ್ಟಳೆಗಳ ಬಗ್ಗೆ ಬೇಸತ್ತಿದ್ದರು. ಅವರು ಹೊಸ ಬದಲಾವಣೆಗೆ ಸಿದ್ಧರಾಗಿದ್ದರು. ಇಸ್ಲಾಮ್ ಈ

ಬದಲಾವಣೆಯನ್ನು ಅವರಿಗೆ ನೀಡಿತು. ಅದನ್ನು ಅವರು ಸ್ವಾಗತಿಸಿದರು. ಅದು ಅವರನ್ನು ಅನೇಕ ರೀತಿಗಳಲ್ಲಿ ಉತ್ತಮ ಸ್ಥಿತಿಗೆ ಏರಿಸಿತು ಮತ್ತು ಹಳೆಯ ಕಾಲದ ದೌರ್ಜನ್ಯಗಳನ್ನು ಕೊನೆಗೊಳಿಸಿತು."

**(Nehru, Jawaharlal : Glimpses of World History. The John Day Company, 1942, pp. 142-145)**

*~*~* ● *~*~*

## ಮೋಹನದಾಸ್ ಕರಮ್‌ಚಂದ್ ಗಾಂಧೀ

"ಪಶ್ಚಿಮವು ಅಂಧಕಾರದಲ್ಲಿ ಮುಳುಗಿದ್ದಾಗ ಪೂರ್ವ ದಿಗಂತದಿಂದ ಒಂದು ಪ್ರಜ್ವಲಿಸುವ ನಕ್ಷತ್ರ ಉದಿಸಿತು. ಅದು ನೋವಿನಿಂದ ನರಳುತ್ತಿರುವ ಲೋಕಕ್ಕೆ ಸುಖವನ್ನು ನೀಡಿತು. ಇಸ್ಲಾಮ್ ಒಂದು ಮಿಥ್ಯ ಧರ್ಮವಲ್ಲ. ಹಿಂದುಗಳು ಅದರ ಬಗ್ಗೆ ಭಕ್ತಿಯುಕ್ತವಾಗಿ ಅಧ್ಯಯನ ಮಾಡಬೇಕು. ನಾನು ಅದನ್ನು ಪ್ರೀತಿಸುವ ಹಾಗೆ ಅವರು ಸಹ ಅದನ್ನು ಪ್ರೀತಿಸುವರು."

**(Gandhi, Mohandas Karamchand : Young India, The Viking Press, New York, USA 1927, p. 60)**

*~*~* ● *~*~*

## ಎಚ್. ಜಿ. ವೆಲ್ಸ್

"ಇಸ್ಲಾಮ್ ಜಯಶಾಲಿಯಾದುದು ಏಕೆಂದರೆ ಅದು ಆ ಕಾಲದಲ್ಲಿ ಲೋಕದ ಮುಂದಿರಿಸಿದ ಅತ್ಯುತ್ತಮ ಸಾಮಾಜಿಕ ಮತ್ತು ರಾಜಕೀಯ ವ್ಯವಸ್ಥೆಯಾಗಿತ್ತು. ಅದು ಜಯಶಾಲಿಯಾದುದು ಏಕೆಂದರೆ ಅದು ಎಲ್ಲಾ ಕಡೆಗಳಲ್ಲೂ ರಾಜಕೀಯದಲ್ಲಿ ನಿರಾಸಕ್ತರಾದ ಜನರನ್ನು ಕೊಳ್ಳೆಗೆ, ದೌರ್ಜನ್ಯಕ್ಕೆ ಮತ್ತು ಚಿದರಿಕೆಗೆ ಗುರಿಯಾದವರನ್ನಾಗಿ ಕಂಡಿತು. ಜನರು ವಿದ್ಯಾಹೀನರೂ ಸಂಘಟಿತರಾಗದವರೂ ಆಗಿದ್ದರು. ಸ್ವಾರ್ಥಿ ಮತ್ತು ಕೆಟ್ಟ ಸರಕಾರಗಳಿಗೆ ಜನರ ಬಗ್ಗೆ ಯಾವ ಕಾಳಜಿಯೂ ಇರಲಿಲ್ಲ.

"ಇಸ್ಲಾಮ್ ವಿಶಾಲವೂ ಹೊಸದಾದುದೂ ಶುದ್ಧವೂ ಆದ ರಾಜಕೀಯ ತತ್ವಗಳನ್ನೊಳಗೊಂಡು ಅದು ಲೋಕದ ಜನಸಾಮಾನ್ಯರಿಗೆ ಬೇರೆ ಯಾವುದಕ್ಕಿಂತಲೂ ಉತ್ತಮ ಸವಲತ್ತುಗಳನ್ನು ನೀಡಿತು."

**(Wells, H. G. : The Outline of World History. Garden City Books, 1956, p. 493)**

*~*~* ● *~*~*

## ವಿಲಿಯಮ್ ಮ್ಯೂರ್

"ಮೊದಲಿನ ಎರಡು ಖಲೀಫರಾದ ಅಬೂಬಕರ್ ಮತ್ತು ಉಮರ್‌ರವರ ಸರಳತೆ ಮತ್ತು ಶ್ರದ್ಧೆಯು ಮುಹಮ್ಮದರ ಪ್ರಾಮಾಣಿಕತೆಯ ಕುರಿತು ಅವರಿಗಿದ್ದ ನಂಬಿಕೆಯ ಬಗ್ಗೆ ಶಕ್ತಿಯುತವಾದ ಸಾಕ್ಷ್ಯವಾಗಿದೆ. ಈ ಜನರ ನಂಬಿಕೆಗಳು ಮುಹಮ್ಮದರ ಸ್ವಭಾವ ಗುಣಗಳ ಬಗ್ಗೆ ನಮ್ಮ ಅಭಿಮತವನ್ನು ರೂಪಿಸಲು ನಿರಾಕರಿಸಲಾಗದಂತಹ ಮೌಲ್ಯವನ್ನು ಹೊಂದಿವೆ. ಅವರಿಗೆ ತಮ್ಮ ನಂಬಿಕೆಗಳ ಆಧಾರವನ್ನು ಪರಿಶೀಲಿಸಲು ಸಾಕಷ್ಟು ಸಂದರ್ಭಗಳು ಒದಗಿದ್ದುವು. ಅವರು ಮುಹಮ್ಮದರಿಗೆ ಸಮೀಪವಾಗಿ ದೀರ್ಘಕಾಲ ಇದ್ದರು. ನಾನು ಮುಹಮ್ಮದರ ಸ್ವಭಾವ ಗುಣದ ಬಗ್ಗೆ ತೆಗೆದುಕೊಂಡ ನಿಲುವನ್ನು ಅವರ ವರ್ತನೆಯು ಅನುಮೋದಿಸುತ್ತದೆ... ಮುಹಮ್ಮದರ ಸ್ವಭಾವ ಗುಣದ ಒಂದು ಗಮನಾರ್ಹ ಅಂಶವು ಅವರು ತನ್ನ ಅತ್ಯಂತ ಸಾಮಾನ್ಯ ಅನುಯಾಯಿಯ ಜೊತೆಗೆ ಕೂಡ ಸಭ್ಯತೆ ಮತ್ತು ಶ್ರದ್ಧೆಯಿಂದ ವರ್ತಿಸುತ್ತಿದ್ದುದಾಗಿದೆ. ಸರಳತೆ, ದಯೆ, ಸಹನೆ, ನಿಸ್ವಾರ್ಥತೆ ಮತ್ತು ಔದಾರ್ಯ ಅವರ ನಡೆವಳಿಕೆಯಲ್ಲಿ ಕಾಣಿಸುದ್ದವು. ಅದು ಅವರ ಸುತ್ತು ಮುತ್ತಲು ಇದ್ದವರ ಪ್ರೀತಿಯನ್ನು ಅವರಿಗೆ ಗಳಿಸಿಕೊಟ್ಟಿತು.... ಅವರಿಗೆ ನಿರಂಕುಶ ಅಧಿಕಾರವಿದ್ದರೂ ಮುಹಮ್ಮದ್ ನ್ಯಾಯಬದ್ಧರೂ ಸೌಮ್ಯರೂ ಆಗಿದ್ದರು. ಅವರು ತನ್ನ ಶತ್ರುಗಳು ತನ್ನ ವಾದಗಳನ್ನು ಸಂತೋಷದಿಂದ ಅಂಗೀಕರಿಸಿದಾಗ ಅವರೊಂದಿಗೆ ಸಹಾನುಭೂತಿಯಿಂದ ವರ್ತಿಸಲು ಹಿಂಜರಿಯಲಿಲ್ಲ. ಮುಹಮ್ಮದರ ವಾದಗಳ ವಿರುದ್ಧ ಮಕ್ಕದ ಜನರು ದೀರ್ಘಕಾಲ ನಡೆಸಿದ ಪಟ್ಟು ಬಿಡದ ಹೋರಾಟ ಅವರನ್ನು ಸೋಲಿಸಿದ ಜಯಶಾಲಿಯನ್ನು ತನ್ನ ಕೋಪದ ಬೆಂಕಿ ಮತ್ತು ರಕ್ತದ ಮೂಲಕ ಅಳಿಸಲಾಗದ ಗುರುತುಗಳಲ್ಲಿ ತೋರಿಸಬಹುದಿತ್ತು. ಆದರೆ ಮುಹಮ್ಮದ್ ಕೆಲವು ಅಪರಾಧಿಗಳನ್ನು ಹೊರತುಪಡಿಸಿ ಎಲ್ಲರಿಗೂ ಕ್ಷಮಾದಾನ ನೀಡಿದರು. ಹಳೆಯ ನೆನಪುಗಳನ್ನು ಅದರ ಎಲ್ಲಾ ಅಪಹಾಸ್ಯ ಮತ್ತು ಹಿಂಸಾಚಾರಗಳೊಂದಿಗೆ ಅವರು ವಿಸ್ಮೃತಿಗೆ ಭವ್ಯವಾಗಿ ತಳ್ಳಿದರು. ಅವರು ತನ್ನ ಅತ್ಯಂತ ಕಠಿಣ ಶತ್ರುವಿನೊಂದಿಗೆ ಕರುಣೆ ಮತ್ತು ಪ್ರೀತಿಯಿಂದ ವರ್ತಿಸಿದರು."

**(Muir, William : The Life of Muhammad. John & Grant, 1923, pp. 509-13)**

*~*~* ● *~*~*

## ಎಸ್. ಪಿ. ಸ್ಕಾಟ್

"ಮುಹಮ್ಮದರ ಉದ್ದೇಶ ಶುದ್ಧಿ, ಅವರ ಆತ್ಮವಿಶ್ವಾಸ, ಅವರ ಶ್ರದ್ಧಾಪೂರ್ವ ಭಕ್ತಿ ಇವುಗಳ ಬಗ್ಗೆ ಅತ್ಯಂತ ವಿಶ್ವಾಸಾರ್ಹ ಸಾಕ್ಷ್ಯಗಳು ಅವರ ಆರಂಭ ಕಾಲದ ಶಿಷ್ಯರ ಉನ್ನತಶ್ರೇಣಿ ಮತ್ತು ಸ್ವಭಾವಗುಣಗಳಿಂದಲೂ ಮುಹಮ್ಮದರ ಉಪದೇಶಗಳು ಎಷ್ಟು ಭಯಭಕ್ತಿಯಿಂದ ಅಂಗೀಕರಿಸಲ್ಪಟ್ಟವು ಎಂಬುದರಿಂದಲೂ ದೊರಕುತ್ತವೆ.

"ಅವರು ತನಗೆ ಸಂಭವಿಸಿದ ಹಾನಿಯ ಬಗ್ಗೆ ಸಿಟ್ಟು ಪ್ರಕಟಿಸಲು ನಿಧಾನವನ್ನು ಅವಲಂಬಿಸುತ್ತಿದ್ದರು. ಆದರೆ ಅವರು ತಪ್ಪುಗಾರನನ್ನು ಕ್ಷಮಿಸಲು ಕೂಡಲೇ ಸಿದ್ಧರಾಗುತ್ತಿದ್ದರು – ಇದು ಅರಬಿಗಳ ಅಭಿಪ್ರಾಯದಲ್ಲಿ ಹೇಡಿತನದ ಚಿಹ್ನೆಯಾಗಿತ್ತು.... ಅವರಿಗೆ ತಕ್ಕ ಸಮಯದಲ್ಲಿ ಶರಣಾಗತಿ ಮತ್ತು ಅವರ ಔದಾರ್ಯದ ಬಗ್ಗೆ ಅಪೇಕ್ಷೆಯು ಅವರ ತಾತ್ಕಾಲಿಕ ಕೋಪವನ್ನು ಶಮನಗೊಳಿಸದೆ ಇರಲಿಲ್ಲ. ಎಂದೂ ಸಮಾಧಾನಪಡಿಸಲಾಗದ ಶತ್ರುಗಳಾಗಿ ಪ್ರಾರಂಭದಲ್ಲಿ ವರ್ತಿಸಿದವರು ಅವರ ನಿಷ್ಠಾವಂತರಾದ ಶಿಷ್ಯರಾಗಿ ಪರಿಣಮಿಸಿದರು. ಅವರ ಔದಾರ್ಯ ಮತ್ತು ಮನುಷ್ಯ ಹೃದಯದ ಬಗ್ಗೆ ಅವರಿಗಿದ್ದ ಆಳವಾದ ಜ್ಞಾನವು ಅವರನ್ನು ಜನನಾಯಕನನ್ನಾಗಿ ಮಾಡಿತು. ಮಕ್ಕವನ್ನು ಜಯಿಸಿದ ನಂತರ ಅವರು ಖುರೈಶ್ ಗೋತ್ರದವರಿಗೆ ತೋರಿಸಿದ ಔದಾರ್ಯವು ಅದಕ್ಕೆ ಸಾಕ್ಷಿಯಾಗಿದೆ.

"ಮುಹಮ್ಮದರ ಘನತೆಯು ಅವರು ಜನರ ನೈತಿಕ ಮತ್ತು ಲೌಕಿಕ ಆವಶ್ಯಕತೆಗಳನ್ನು ಮನವರಿಕೆ ಮಾಡಿಕೊಂಡು ಅವರಿಗೆ ಹಿಂದೆಂದೂ ಸಿಗದ ಉಜ್ವಲ ಜೀವನ ಮಾರ್ಗವನ್ನು ತೆರೆದುಕೊಟ್ಟರು. ಅವರು ಜನರ ಅಭಿವೃದ್ಧಿಗಾಗಿ ಸಾಕಷ್ಟು ಪರಿಶ್ರಮ ಮಾಡಿದರು. ಅರಬ್ ಜನರೊಂದಿಗೆ ಮತ್ತು ಭಾಷೆಯೊಂದಿಗೆ ಸಂಬಂಧ ಹೊಂದದ ಅನ್ಯ ಜನರ ಮೇಲೆಯೂ ಅದರ ಪ್ರಭಾವ ಉಂಟಾಯಿತು. ಅವರು ಅನೇಕ ಕ್ರೂರ ಮತ್ತು ಹೀನ ಆಚಾರಗಳನ್ನು ನಿಷಿದ್ಧಗೊಳಿಸಿದರು. ಅವರ ಉಪದೇಶಗಳನ್ನು ಅನುಷ್ಠಾನಕ್ಕೆ ತಂದ ಎಲ್ಲಾ ಜನರ ಸ್ವಭಾವ ಗುಣಗಳನ್ನು ಅದು ಉನ್ನತಿಗೆ ಮತ್ತು ಗೌರವಾರ್ಹ ಸ್ಥಾನಕ್ಕೇರಿಸಿತು. ಯಾರು ಬಹುದೇವಾರಾಧಕರೂ ವಿಗ್ರಹಾರಾಧಕರೂ ಆಗಿದ್ದರೋ ಅವರನ್ನು ಮುಹಮ್ಮದರು ಏಕದೇವಾರಾಧಕರಾಗಿ ಪರಿವರ್ತಿಸಿದರು."

**(Scott, S. P. : History of the Moorish Empire in Europe, J. B. Lippincott Company, Philadelphia & London, 1904, Vol 1)**

*~*~* ● *~*~*

## ತೋಮಸ್ ಡಬ್ಲ್ಯೂ ಅರ್‌ನೋಲ್ಡ್

"ಯುರೋಪಿಯನ್ ಲೇಖಕರು ಪದೇ ಪದೇ ಪ್ರತಿಪಾದಿಸುತ್ತಾರೇನೆಂದರೆ, ಮದೀನಕ್ಕೆ ವಲಸೆ ಹೋದ ದಿನಾಂಕದ ಮೊದಲುಗೊಂಡು ಅವರ ಜೀವಿತದ ಪರಿಸ್ಥಿತಿಯಲ್ಲಿ ಅಲ್ಲಿ ಉಂಟಾದ ಬದಲಾವಣೆಯ ಕಾರಣದಿಂದ ಪ್ರವಾದಿ ಸಂಪೂರ್ಣವಾಗಿ ಬೇರೆ ಸ್ವಭಾವ ಗುಣಗಳನ್ನು ಹೊಂದಿದವರಾಗಿ ಕಾಣಿಸಿದರು. ಅವರು ಉಪದೇಶಕರೂ ಮುನ್ನೆಚ್ಚರಿಕೆ ನೀಡುವವರೂ ಮನುಷ್ಯರಿಗೆ ದೇವನ ಸಂದೇಶವಾಹಕರೂ ಆಗಿ ತನಗೆ ಅವತೀರ್ಣಗೊಂಡ ಧರ್ಮದ ಸತ್ಯಾಂಶಗಳ ಕುರಿತು ಬೋಧಿಸುವವರಾಗಿ ಮುಂದುವರಿಯದೆ, ಅವರು ನಿರ್ಲಕ್ಷ್ಯನಾದ ಮತಾಂಧನಾದರು. ತನ್ನನ್ನು ಮತ್ತು ತನ್ನ ಅಭಿಪ್ರಾಯಗಳನ್ನು ಹೇರಲು ತನಗೆ ಸಾಧ್ಯವಿರುವ ಎಲ್ಲಾ ರೀತಿಯ ಬಲಪ್ರಯೋಗಗಳನ್ನು ಮತ್ತು ರಾಜತಂತ್ರಗಳನ್ನು ಕೈಗೊಂಡರು.

"ಆದರೆ ಮುಹಮ್ಮದರು ಮದೀನದಲ್ಲಿ ತನ್ನ ಉಪದೇಶಕನೆಂಬ ಕರ್ತವ್ಯವನ್ನು ಕೈಬಿಟ್ಟರು ಎಂದು ಹೇಳುವುದು ಸುಳ್ಳಾಗಿದೆ. ಅವರ ಬಳಿ ದೊಡ್ಡ ಸೈನ್ಯವು ಇದ್ದಾಗ ಅವರು ಅವಿಶ್ವಾಸಿಗಳಿಗೆ ಧರ್ಮಸ್ವೀಕಾರಕ್ಕೆ ಕರೆ ನೀಡುವುದನ್ನು ಬಿಟ್ಟರು ಎಂದು ಹೇಳುವುದು ವಾಸ್ತವಕ್ಕೆ ವಿರುದ್ಧವಾಗಿದೆ.

"ಇಸ್ಲಾಮ್ ಅದರ ಪ್ರಾರಂಭದ ಕಾಲದಿಂದ ಧರ್ಮಪ್ರಚಾರ ಮೂಲಕ ಜನರ ಹೃದಯಗಳನ್ನು ಗೆಲ್ಲಲು ಪ್ರಯತ್ನಿಸುತ್ತಾ ಅವರನ್ನು ವಿಶ್ವಾಸಿಗಳ ಭ್ರಾತೃತ್ವ ಗುಂಪಿಗೆ ಸೇರಿಸಲು ಬಯಸುತ್ತದೆ. ಅದು ಅದರ ಪ್ರಾರಂಭದ ಸ್ಥಿತಿಯಲ್ಲಿದ್ದಂತೆ ಇಂದು ಸಹ ತನ್ನ ಚಟುವಟಿಕೆಯನ್ನು ಅದೇ ರೀತಿ ಮುಂದುವರಿಸುತ್ತಾ ಇದೆ."

**(Arnold, Thomas W. : The spread of Islam in the World, Goodword Books, New Delhi, 2003, pp. 34 and 44)**

*~*~* ● *~*~*

## ಜೆ. ಸೇಲ್ ಮತ್ತು ಈ. ಎಮ್. ವೆರ್ರಿ

"ಖುರ್‌ಆನಿನ ಈ ಉದ್ಧೃತ ಭಾಗವು (ಅಧ್ಯಾಯ 10 ವಚನ 32-37) ಬಹಳ ಬಲವತ್ತಾದ ತರ್ಕವನ್ನು ವಿಗ್ರಹಾರಾಧಕರ

ವಿರುದ್ಧ ಮಂಡಿಸಿದೆ. ಅವರು ದೇವನನ್ನು ಅವರಿಗೆ ದೊರೆತ ಎಲ್ಲಾ ಅನುಗ್ರಹಗಳ ಉದ್ಭವ ಸ್ಥಾನವೆಂದು ಗಣಿಸಿ ಕಷ್ಟದಲ್ಲಿರುವಾಗ ಅವನ ಕಡೆಗೆ ಧಾವಿಸುತ್ತಿರುವಾಗ, ಮಿಥ್ಯ ದೈವಗಳನ್ನು ಆರಾಧಿಸುತ್ತಿರುವುದು ಅವರ ತಿಳಿಗೇಡಿತನವೆಂದು ಸ್ಪಷ್ಟಗೊಳಿಸಲಾಗಿದೆ. ಧರ್ಮ ಪ್ರಚಾರಕ ಧರ್ಮವಾದ ಇಸ್ಲಾಮ್ ಜಯಗಳಿಸಲು ಈ ಉಪದೇಶಗಳು ಕಾರಣವಾಗಿವೆ. ವಿಗ್ರಹಾರಾಧಕರ ಬಹುದೇವಾರಾಧನೆಯ ಎದುರಿಗೆ ಇಸ್ಲಾಮಿನ ಏಕದೇವ ವಿಶ್ವಾಸವು ಎದ್ದು ಕಾಣುತ್ತದೆ."

**(George Sale & Wherry, Elwood Moris : A Comprehensive Study on the Quran, Arms Press, New York, USA 1975, Vol 11, pp. 329 - 30)**

*~*~* ● *~*~*

## ಜಾನ್ ವಿಲ್ಯಯಮ್ ಡ್ರೇಪರ್

"ಜಸ್ಟೀನಿಯನ್ ಚಕ್ರವರ್ತಿ ನಿಧನ ಹೊಂದಿದ ನಾಲ್ಕು ವರ್ಷಗಳ ನಂತರ, ಕ್ರಿ.ಶ. 569ರಲ್ಲಿ ಮಕ್ಕದಲ್ಲಿ ಒಬ್ಬ ಮನುಷ್ಯ ಜನಿಸಿದರು. ಅವರು ಮಾನವ ಕುಲದ ಮೇಲೆ ಅತ್ಯಧಿಕ ಪ್ರಭಾವ ಬೀರಿದರು. ಅವರ ಹೆಸರು ಮುಹಮ್ಮದ್. ಅವರನ್ನು ಯುರೋಪಿಯನ್ ಲೇಖಕರು 'ವೇಷಧಾರಿ ವಂಚಕ' ಎಂದು ಕರೆದರು. ಅವರು ತನ್ನ ಜನಾಂಗವನ್ನು ಅನಾಗರಿಕ ಮೂಢ ಆರಾಧನೆ, ಉಲ್ಕಾಪಾತದಿಂದ ಲಭಿಸಿದ ಕಲ್ಲಿನ ಆರಾಧನೆ, ಅತ್ಯಂತ ನೀಚರೀತಿಯಲ್ಲಿ ವಿಗ್ರಹಗಳ ಆರಾಧನೆಗಳಿಂದ ಮೇಲೆಕ್ಕೆತ್ತಿದರು. ಅವರು ಏಕ ದೇವಾರಾಧನೆಯನ್ನು ಬೋಧಿಸಿದರು. ಅದು ಏರಿಯನ್ ಪಂಥದವರ ಮತ್ತು ಕ್ಯಾಥೋಲಿಕ್ ಪಂಥದವರ ನಿರರ್ಥಕ ವಾಗ್ವಾದಗಳನ್ನು ಬೇಗನೆ ಗಾಳಿಗೆ ಚೆಲ್ಲಿತು.... ಮುಹಮ್ಮದ್ ಎಂತಹ ಪ್ರತಿಭೆಯನ್ನು ಹೊಂದಿದ್ದರೆಂದರೆ ಅವರು ಕೈಗೊಂಡ ಕ್ರಮಗಳು ಸಾಮ್ರಾಜ್ಯಗಳ ಭವಿಷ್ಯವನ್ನು ನಿರ್ಧರಿಸಿತು. ಅವರು ಉಪದೇಶಿಯಾದ ಸೈನಿಕರಾಗಿದ್ದರು. ಅವರು ಭಾಷಣದ ವೇದಿಕೆಯಲ್ಲಿ ನಿರರ್ಗಳವಾಗಿ ಮಾತನಾಡುತ್ತಿದ್ದರು. ಅವರು ರಣರಂಗದಲ್ಲಿ ಶೂರರಾಗಿದ್ದರು. ಅವರ ಧರ್ಮಶಾಸ್ತ್ರ ಸರಳವಾಗಿತ್ತು: 'ಒಬ್ಬನೇ ಒಬ್ಬ ದೇವನಿದ್ದಾನೆ'. ಹೆಣ್ಣಿಗರಾದ ಸಿರಿಯನ್ ಜನರು ಯೇಸುಕಿಸ್ತರ ವ್ಯಕ್ತಿತ್ವಕ್ಕೆ ಸಂಬಂಧಿಸಿದ ರಹಸ್ಯಗಳ ಚರ್ಚೆಯಲ್ಲಿ ಮುಳುಗಿದ್ದರು. ಅತನಾಸಿಯನ್ ಮತ್ತು ಏರಿಯನ್ ಪಂಥಗಳು ಅವರ ಎದುರಿಗೆ ನಾಮಾವಶೇಷವಾಗಲಿದ್ದುವು.

"ಮುಹಮ್ಮದ್ ಏಕದೇವ ವಿಶ್ವಾಸವೆಂಬ ಶಾಶ್ವತ ಸತ್ಯದ ಬಗ್ಗೆ ನಿರರ್ಥಕ ವಾಗ್ವಾದಗಳಲ್ಲಿ ತಲ್ಲೀನರಾಗಲಿಲ್ಲ. ಅವರು ತನ್ನ ಜನಾಂಗದ ಸಾಮಾಜಿಕ ಸ್ಥಿತಿಯನ್ನು ವೈಯಕ್ತಿಕ ಸ್ವಚ್ಛತೆ, ಮದ್ಯನಿರೋಧ, ಉಪವಾಸ ಮತ್ತು ಪ್ರಾರ್ಥನೆಗೆ ಸಂಬಂಧಿಸಿದ ಆಜ್ಞೆಗಳನ್ನು ಜಾರಿಮಾಡಿ ಸುಧಾರಣೆ ಮಾಡಲು ಪ್ರಯತ್ನಿಸಿದರು. ಅವರು ದಾನ ಧರ್ಮಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡಿದರು. ಔದಾರ್ಯವು ಅಪರಿಚಿತವಾದ ಲೋಕಕ್ಕೆ ಅವರು ಹೀಗೆ ಆಶ್ವಾಸನೆ ನೀಡಿದರು: ಯಾವ ಧರ್ಮಕ್ಕೆ ಸೇರಿದವರಾದರೂ ಸಾತ್ವಿಕರಾಗಿದ್ದರೆ ಮೋಕ್ಷಗಳಿಸುವರು. ದೇವನು ಒಬ್ಬನೇ ಎಂಬ ಘೋಷಣೆಗೆ 'ಮುಹಮ್ಮದ್ ಅವನ ಪ್ರವಾದಿ' ಎಂದು ಅವರು ಸೇರಿಸಿದರು.

"ಇಂತಹ ಧೈರ್ಯಶಾಲಿ ಘೋಷಣೆಗೆ ಅನುಸಾರವಾಗಿ ಲೋಕದಲ್ಲಿ ಪರಿವರ್ತನೆಗಳು ಉಂಟಾದುವೋ ಎಂದು ತಿಳಿಯಲು ಬಯಸುವವರು ನಮ್ಮ ಕಾಲದ ಜಾಗತಿಕ ಭೂಪಟವನ್ನು ಪರಿಶೀಲಿಸುವುದು ಒಳ್ಳೆಯದು. ಹಾಗೆ ಪರಿಶೀಲಿಸುವವನು ವಾಸ್ತವಿಕಾಂಶಗಳನ್ನು ಕಾಣುವನು. ಅನೇಕ ಸಾಮ್ರಾಜ್ಯಗಳ ಧಾರ್ಮಿಕ ನಾಯಕನಾಗಿ ಅಂಗೀಕರಿಸಲ್ಪಡುವ ವಿಶ್ವದ ಮೂರನೆಯ ಒಂದು ಭಾಗದ ಜನರ ದೈನಂದಿನ ಜೀವಿತಕ್ಕೆ ಮಾರ್ಗದರ್ಶನ ನೀಡುವ ಆ ಮಹಾನುಭಾವರು ದೇವನ ಸಂದೇಶವಾಹಕ ಎಂಬ ಬಿರುದಿಗೆ ಅರ್ಹರಾಗಿ ಕಾಣಿಸುತ್ತಾರೆ..... ಅರಬ್ ದೇಶದ ಧರ್ಮದ ಅಭಿವೃದ್ಧಿಗೆ ಕಾರಣ ಖಡ್ಗ ಮಾತ್ರವೆಂದು ಹೇಳುವುದು ಸಂಪೂರ್ಣವಾಗಿ ತಪ್ಪುಗ್ರಹಿಕೆಯಾಗಿದೆ. ಖಡ್ಗವು ಒಂದು ದೇಶದ ಅಂಗೀಕರಿಸಲಾದ ಧರ್ಮವನ್ನು ಬದಲಾಯಿಸಬಲ್ಲದು. ಆದರೆ ಖಡ್ಗವು ಎಂದೂ ಮಾನವರ ಮನಸ್ಸಾಕ್ಷಿಯನ್ನು ಬದಲಾಯಿಸದು. ವಾದವು ಗಾಢವಾಗಿದ್ದರೂ ಏಶಿಯಾ ಮತ್ತು ಆಫ್ರಿಕಾದ ಜೀವಿತ ಶೈಲಿಯನ್ನು ಬದಲಾಯಿಸಿ ಇಸ್ಲಾಮ್ ಧರ್ಮವನ್ನೂ ಅರಬಿ ಭಾಷೆಯನ್ನೂ ವಿವಿಧ ಜನಾಂಗಗಳು ಅಂಗೀಕರಿಸಿದುದಕ್ಕೆ ಇನ್ನಷ್ಟು ಗಾಢವಾದ ಕಾರಣಗಳು ಇದ್ದುವು."

**(Draper, John : History of the Intellectual Development of Europe, Vol 1, Chaper XI, Harper & Brothers, 1875, pp. 329 - 32)**

*~*~* ● *~*~*

## ತೋಮಸ್ ಕಾರ್‌ಲೈಲ್

"ಒಬ್ಬ ಸುಳ್ಳುಗಾರ ಒಂದು ಧರ್ಮವನ್ನು ಸ್ಥಾಪಿಸಿದನೇ?.... ಅದನ್ನು ಸ್ಥಾಪಿಸಿದವನು ಸುಳ್ಳುಗಾರನಾಗಿದ್ದರೆ ಅದು ಹನ್ನೆರಡು ಶತಮಾನಗಳಷ್ಟು ಕಾಲ ಬಾಕಿಯಾಗಿ ಉಳಿಯುತ್ತಿರಲಿಲ್ಲ. ನೂರ ಎಂಬತ್ತು ಮಿಲಿಯ ಜನರು ಅದಕ್ಕೆ ಸೇರುತ್ತಿರಲಿಲ್ಲ; ಅದು

ಎಂದೋ ನಾಶವಾಗುತ್ತಿತ್ತು.... ಮುಹಮ್ಮದರನ್ನು ನಾವು ಹುಚ್ಚನೆಂದಾಗಲಿ, ವೇಷಧಾರಿ ಎಂದಾಗಲಿ, ಮನಸ್ಸಾಕ್ಷಿ ಇಲ್ಲದವನು ಎಂದಾಗಲಿ, ಮಹತ್ವಾಕಾಂಕ್ಷಿ ಸಂಚುಗಾರ ಎಂದಾಗಲಿ ಹೇಳಲು ಸಾಧ್ಯವಾಗದು...... ಲೋಕವನ್ನು ಬೆಳಗಿಸಲು ಲೋಕದ ಸೃಷ್ಟಿಕರ್ತನು ಹಾಗೆ ಆಜ್ಞಾಪಿಸಿದ್ದನು...

"ಮಾನವರ ಹೃದಯಗಳನ್ನು ಚೆನ್ನಾಗಿ ಅರಿತ ಮರುಭೂಮಿಯ ಈ ಪುತ್ರ ತನ್ನ ಪ್ರಕಾಶಿಸುವ ಕಪ್ಪು ಕಣ್ಣುಗಳಿಂದ ಮತ್ತು ಸಾಮಾಜಿಕ ಕಳಕಳಿಯುಳ್ಳ ಆತ್ಮದಿಂದ ತುಂಬಿದವರಾಗಿದ್ದು ಅವರಿಗೆ ಮಹತ್ವಾಕಾಂಕ್ಷೆಗಿಂತ ಬೇರೆಯೇ ಆದ ಯೋಚನೆಗಳಿದ್ದುವು.... ಮುಹಮ್ಮದರು ತನ್ನ ಧರ್ಮವನ್ನು ಖಡ್ಗದ ಮೂಲಕ ಪ್ರಚಾರಗೊಳಿಸಿದ ಬಗ್ಗೆ ಬಹಳ ಹೇಳಲಾಗಿದೆ.... ಪ್ರತಿಯೊಂದು ಹೊಸ ಅಭಿಪ್ರಾಯ ಅದರ ಪ್ರಾರಂಭದಲ್ಲಿ ಅದು ಒಬ್ಬನದು ಆಗಿರುತ್ತದೆ. ಲೋಕದಲ್ಲಿ ಒಬ್ಬನೇ ಒಬ್ಬ ಮನುಷ್ಯ ಅದನ್ನು ನಂಬುತ್ತಾನೆ. ಆಗ ಒಬ್ಬನು ಇತರ ಎಲ್ಲರಿಗೆ ವಿರುದ್ಧವಾದ ಅಭಿಪ್ರಾಯ ಹೊಂದಿರುತ್ತಾನೆ. ಅಂತಹ ವ್ಯಕ್ತಿ ಖಡ್ಗವೆತ್ತಿಕೊಂಡು ತನ್ನ ಅಭಿಪ್ರಾಯವನ್ನು ಪ್ರಚಾರ ಮಾಡಲು ಪ್ರಯತ್ನಿಸುವುದಾದರೆ ಅವನಿಗೆ ಯಾವುದೇ ಪ್ರಯೋಜನ ಸಿಗಲಾರದು..... ಮುಹಮ್ಮದರ ವಿರುದ್ಧ ಏನೆಲ್ಲಾ ಆಕ್ಷೇಪಮಾಡುತ್ತಾರಾದರೂ ಅವರು ಇಂದ್ರಿಯ ಲೋಲುಪರಾಗಿರಲಿಲ್ಲ. ನಾವು ಅವರನ್ನು ಒಬ್ಬ ಸಾಮಾನ್ಯ ಭೋಗ ಲಾಲಸಿ, ಕೀಳು ಸುಖಾನುಭವಗಳನ್ನು ಬಯಸುವ ವ್ಯಕ್ತಿ ಎಂದು ಗಣಿಸುವುದಾದರೆ ನಾವು ಬಹಳ ದೊಡ್ಡ ತಪ್ಪು ಮಾಡುತ್ತೇವೆ. ಅವರು ಯಾವುದೇ ಸುಖಾನುಭೂತಿಗಳನ್ನು ಆಶಿಸುತ್ತಿರಲಿಲ್ಲ. ತಾನೇ ಸಿದ್ಧಪಡಿಸಿದ ಉಡುಗೆ ತೊಡುಗೆಗಳನ್ನು ಧರಿಸಿದ ಈ ಮಹಾನುಭಾವನಿಗೆ ವಿಧೇಯರಾದ ಹಾಗೆ ಕಿರೀಟಧಾರಿಯಾದ ಯಾವುದೇ ರಾಜನಿಗೆ ಯಾರೂ ವಿಧೇಯರಾಗಲಿಲ್ಲ.

"ಇಪ್ಪತ್ತಮೂರು ವರ್ಷಗಳ ಕಠಿಣ ಪರೀಕ್ಷೆಯ ಕಾಲದಲ್ಲಿ ನಾನು ಅವರನ್ನು ಆ ಸಂಕಷ್ಟಗಳನ್ನು ಎದುರಿಸಿದ ನಿಜವಾದ ವೀರನಾಗಿ ಕಾಣುತ್ತೇನೆ.... ಅರಬ್ ಜನಾಂಗಕ್ಕೆ ಅಂಧಕಾರದಿಂದ ಬೆಳಕಿಗೆ ಜನ್ಮ ತಾಳಿದ ಹಾಗೆ ಆಗಿತ್ತು. ಅರಬ್ ದೇಶ ಅವರ ಮೂಲಕ ಪುನರುಜ್ಜೀವನ ಪಡೆಯಿತು. ಭೂಮಿಯು ಸೃಷ್ಟಿಸಲ್ಪಟ್ಟ ಕಾಲದಿಂದ ಮೊದಲುಗೊಂಡು ಯಾರಿಂದಲೂ ಗಮನಿಸಲ್ಪಡದೆ ಮರುಭೂಮಿಗಳಲ್ಲಿ ಅಲೆದಾಡುತ್ತಿದ್ದ ಕುರಿಗಾಹಿ ಜನತೆ ಅರಬ್ ದೇಶದ್ದಾಗಿತ್ತು. ಒಬ್ಬ ವೀರ ಪ್ರವಾದಿಯನ್ನು ಅವರು ನಂಬುವಂತಹ ಮಾತಿನೊಂದಿಗೆ ಕಳುಹಿಸಲಾಯಿತು. ನೀವು ನೋಡಿರಿ, ಯಾರೂ ಗಮನಿಸದ ಜನರು ಲೋಕದ ಎಲ್ಲರಿಂದಲೂ ಗಮನಿಸಲ್ಪಡುವವರಾದರು. ಚಿಕ್ಕದಾಗಿದ್ದುದು ಪ್ರಪಂಚದಷ್ಟು ಬೆಳೆಯಿತು. ಕೇವಲ ಒಂದು ನೂರು ವರ್ಷಗಳ ಒಳಗೆ ಹೀಗಾಯಿತು...

"ಮಹಾಪುರುಷರ ಆಗಮನ ಆಕಾಶದಿಂದ ಬಂದೆರಗುವ ಮಿಂಚಿನ ಹಾಗಿರುತ್ತದೆ. ಲೋಕದ ಜನರು ಅವರಿಗಾಗಿ ಇಂಧನದ ಹಾಗೆ ಕಾಯುತ್ತಾ ಇರುತ್ತಾರೆ. ಆಗ ಅವರು ಸಹ ಉರಿಯಲು ಪ್ರಾರಂಭಿಸುತ್ತಾರೆ."

**(Carlyle, Thomas: The Hero as a Prophet (second chapter) in Heroes and Hero Worship. Oxford University Press, 1965)**

*~*~*●*~*~*

## ಎಡ್ವರ್ಡ್ ಗಿಬ್ಬನ್

"ಅರಬ್ ದೇಶದ ಪ್ರವಾದಿಯ ಅಸಾಧಾರಣ ಪ್ರತಿಭೆ, ಅವರ ಜನಾಂಗದ ನಡೆವಳಿಕೆಗಳು, ಅವರ ಧರ್ಮದ ಚೈತನ್ಯವು ಪೌರ್ವಾತ್ಯ (ರೋಮನ್) ಸಾಮ್ರಾಜ್ಯದ ಅವನತಿ ಮತ್ತು ನಾಶಕ್ಕೆ ಕಾರಣಗಳಾಗಿದ್ದುವು. ನಮ್ಮ ಕಣ್ಣುಗಳು ಆಶ್ಚರ್ಯಭರಿತವಾಗಿ ದಿಟ್ಟಿಸಿ ನೋಡುತ್ತಿವೆ – ವಿಶ್ವದ ಜನಾಂಗಗಳ ಮೇಲೆ ಹೊಸದಾದ ಮತ್ತು ಶಾಶ್ವತವಾದ ಪ್ರಭಾವ ಬೀರಿದ ಸ್ಮರಣೀಯ ಕ್ರಾಂತಿಗಳಲ್ಲಿ ಒಂದನ್ನು......

"ಮುಹಮ್ಮದರ ಜ್ಞಾಪಕ ಶಕ್ತಿ ವಿಶಾಲವೂ ಸ್ಥಿರವೂ ಆಗಿತ್ತು. ಅವರ ಬುದ್ಧಿಶಕ್ತಿ ಸುಲಭವೂ ಸೌಹಾರ್ದಮಯವೂ ಆಗಿತ್ತು. ಅವರ ಯೋಚನೆಗಳು ಉನ್ನತ ಮಟ್ಟದವುಗಳಾಗಿದ್ದುವು. ಅವರ ತೀರ್ಪು ಸ್ಪಷ್ಟವೂ ತ್ವರಿತವಾದುದೂ ನಿರ್ಣಾಯಕವೂ ಆಗಿತ್ತು. ಅವರಿಗೆ ಯೋಚಿಸಲು ಮತ್ತು ಕೃತಿಗಿಳಿಸಲು ಸಾಕಷ್ಟು ಧೈರ್ಯ ಇತ್ತು......

"ಮುಹಮ್ಮದರ ಧರ್ಮ ಶಂಕೆಗಳಿಂದಲೂ ದ್ವಂದ್ವಾರ್ಥಗಳಿಂದಲೂ ಮುಕ್ತವಾಗಿದೆ. ಖುರ್‌ಆನ್ ಗ್ರಂಥವು ದೇವನ ಏಕತ್ವದ ಬಗ್ಗೆ ಭವ್ಯವಾಗಿ ಪ್ರತಿಪಾದಿಸುತ್ತದೆ. ಮಕ್ಕದ ಪ್ರವಾದಿ ವಿಗ್ರಹಗಳ ಮತ್ತು ಮನುಷ್ಯರ, ನಕ್ಷತ್ರಗಳ ಮತ್ತು ಗ್ರಹಗಳ ಆರಾಧನೆಯನ್ನು ತರ್ಕಬದ್ಧವಾಗಿ ತಿರಸ್ಕರಿಸಿದರು. ಯಾವುದು ಉದಿಸುವುದೋ ಅದು ಅಸ್ತಮಿಸುವುದು. ಹುಟ್ಟುವುದೆಲ್ಲವೂ ಸಾಯುವುದು. ಕೆಟ್ಟು ಹೋಗಬಹುದಾದ ವಸ್ತುಗಳು ಕೆಟ್ಟುಹೋಗಿ ನಾಶವಾಗುವುವು.......

"ಮುಹಮ್ಮದರ ನುಡಿಮುತ್ತುಗಳು ಸತ್ಯದ ಪಾಠಗಳನ್ನು ನೀಡುತ್ತವೆ. ಅವರ ಕೆಲಸಗಳು ಸುಸ್ವಭಾವಗಳ ಉದಾಹರಣೆಗಳಾಗಿವೆ... ಅವರು ಮನಸ್ಸಾಕ್ಷಿಯ ಸ್ವಾತಂತ್ರ್ಯವನ್ನು ಪ್ರತಿಪಾದಿಸಿದರು. ಅವರು ಧಾರ್ಮಿಕ ಹಿಂಸೆಯನ್ನು ನಿಷಿದ್ಧಗೊಳಿಸಿದರು.... ಮಕ್ಕದ ಜನರ ಪ್ರತಿನಿಧಿಯು ಪ್ರವಾದಿಯ ಶಿಷ್ಯರು ತಮ್ಮ ಗುರುವಿನ ಮಾತುಗಳಿಗೆ ಮತ್ತು ನೋಟಗಳಿಗೆ ನೀಡುತ್ತಿದ್ದ ಶ್ರದ್ಧೆಯನ್ನು ಗಮನಿಸಿದಾಗ ಆಶ್ಚರ್ಯಚಕಿತನಾದನು. ಪ್ರವಾದಿಯ ಉಗುಳನ್ನು ಸಂಗ್ರಹಿಸಲು, ಕೆಳಗೆ ಬಿದ್ದ ಒಂದು ತಲೆಗೂದಲನ್ನು ಎತ್ತಿಕೊಳ್ಳಲು, ನಮಾಝ್‌ಗೆ ಮೊದಲು ಮಾಡುವ ಶುದ್ಧೀಕರಣ ಕ್ರಿಯೆಯಲ್ಲಿ ಚೆಲ್ಲಲ್ಪಡುವ ನೀರನ್ನು ಸಂಗ್ರಹಿಸಲು,

ಶಿಷ್ಯರು ತೋರಿಸುತ್ತಿದ್ದ ಆಸಕ್ತಿ ಅವರು ಪ್ರವಾದಿತ್ವದ ಒಂದು ಅಂಶವನ್ನು ಗಳಿಸುವರೋ ಎಂಬಂತೆ ಇತ್ತು. ಆ ಪ್ರತಿನಿಧಿ ಹೀಗೆಂದನು: 'ನಾನು ಪರ್ಶಿಯಾದ ದೊರೆ ಕಿಸ್ರಾನನ್ನೂ ರೋಮಿನ ದೊರೆ ಖೈಸರನನ್ನೂ ನೋಡಿದ್ದೇನೆ. ಆದರೆ ಯಾವುದೇ ದೊರೆಯು ತನ್ನ ಪ್ರಜೆಗಳೊಂದಿಗೆ ಮುಹಮ್ಮದರು ಅವರ ಶಿಷ್ಯರೊಂದಿಗೆ ಇದ್ದ ಹಾಗೆ ಇದ್ದುದಾಗಿ ನಾನು ಕಂಡಿಲ್ಲ.' ಭಕ್ತಿಭರಿತ ಉತ್ಸಾಹವು ದೊರೆಗಳ ದರಬಾರಿನ ತಣ್ಣಗಾದ ಮತ್ತು ಅಧಿಕೃತ ಸೇವಾ ಭಾವನೆಗಿಂತ ಹೆಚ್ಚು ಶಕ್ತಿಶಾಲಿಯಾಗಿರುತ್ತದೆ.....

"ಮಕ್ಕದ ವಿಜಯದ ನಂತರ ಅಲ್ಲಿನ ಗಣ್ಯರು ಮುಹಮ್ಮದರಿಗೆ ಶಿರಬಾಗಿದರು. ಮುಹಮ್ಮದ್ ಕೇಳಿದರು: 'ನೀವು ದೌರ್ಜನ್ಯಕ್ಕೆ ಗುರಿಮಾಡಿದವನಿಂದ ಯಾವ ರೀತಿ ದಯೆಯನ್ನು ಪ್ರತೀಕ್ಷಿಸುತ್ತೀರಿ?' ಅವರು ಹೇಳಿದರು: 'ನಾವು ನಮ್ಮ ಸಂಬಂಧಿಕನ ಔದಾರ್ಯದ ಬಗ್ಗೆ ಪ್ರತೀಕ್ಷೆ ಹೊಂದಿದ್ದೇವೆ.' ಮುಹಮ್ಮದ್ ಹೇಳಿದರು: 'ನಿಮ್ಮ ಪ್ರತೀಕ್ಷೆ ವ್ಯರ್ಥವಾಗಲಾರದು. ನೀವು ಹೋಗಿರಿ. ನೀವು ಸುರಕ್ಷಿತರಾಗಿರುವಿರಿ. ನೀವು ಸ್ವತಂತ್ರರಾಗಿರುವಿರಿ'.........

"ಮುಹಮ್ಮದರ ಪತ್ನಿಯರ ಮತ್ತು ಅವರ ಶಿಷ್ಯರ ವರದಿಗಳಿಗೆ ನಾವು ಸ್ವಲ್ಪವಾದರೂ ಅಂಗೀಕಾರ ನೀಡುವುದಾದರೆ, ಮುಹಮ್ಮದರ ಕುರಿತು ಹೀಗೆ ಹೇಳಬಹುದು: ಅವರ ಕುಟುಂಬದ ಹೃದಯಗಳಲ್ಲಿ ಅವರು ತನ್ನ ಜೀವಿತದ ಕಡೆಗಾಲದ ತನಕ ಪ್ರವಾದಿಯ ಗೌರವವನ್ನೂ ಉತ್ಸಾಹಿಯಾದೊಬ್ಬನ ವಿಶ್ವಾಸವನ್ನೂ ಕಾಪಾಡಿದ್ದರು... ಮುಹಮ್ಮದರ ಉತ್ತಮ ಗುಣ ಸ್ವಭಾವಗಳು ದೊರೆತನದ ಆಡಂಬರವನ್ನು ತಿರಸ್ಕರಿಸಿತು. ದೇವನ ಪ್ರವಾದಿ ಮನೆಗೆಲಸ ಮಾಡುತ್ತಿದ್ದರು. ಅವರು ಒಲೆ ಹೊತ್ತಿಸುತ್ತಿದ್ದರು. ನೆಲವನ್ನು ಗುಡಿಸುತ್ತಿದ್ದರು. ಆಡುಗಳ ಹಾಲನ್ನು ಹಿಂಡುತ್ತಿದ್ದರು. ಅವರು ತನ್ನ ಪಾದರಕ್ಷೆಗಳನ್ನೂ ಉಣ್ಣೆಬಟ್ಟೆಗಳನ್ನೂ ತನ್ನ ಕೈಗಳಿಂದಲೇ ದುರಸ್ತಿ ಮಾಡುತ್ತಿದ್ದರು.

"ವಿರಕ್ತನ ದೇಹದಂಡನೆಯನ್ನೂ ವಿರಕ್ತಿಯನ್ನೂ ತಿರಸ್ಕರಿಸಿದ ಅವರು ಆಡಂಬರರಹಿತರಾಗಿ ಒಬ್ಬ ಅರಬಿಯ ಮತ್ತು ಸೈನಿಕನ ಮಿತಾಹಾರವನ್ನು ಸೇವಿಸುತ್ತಿದ್ದರು. ವಿಶೇಷ ಸಂದರ್ಭಗಳಲ್ಲಿ ಅವರು ತನ್ನ ಶಿಷ್ಯರಿಗೆ ಧಾರಳವಾಗಿ ಔತಣ ನೀಡುತ್ತಿದ್ದರು. ಆದರೆ ಅವರ ಮನೆಯ ಕಡೆಗೆ ನೋಡುವುದಾದರೆ, ಒಲೆ ಹೊತ್ತಿಸದೆ ಅನೇಕ ವಾರಗಳು ದಾಟಿಹೋಗುತ್ತಿದ್ದುವು...

"ಇಸ್ಲಾಮ್ ಧರ್ಮದ ಪ್ರಚಾರದ ಬಗ್ಗೆಯಲ್ಲ, ಅದು ಸ್ಥಿರವಾಗಿ ಸ್ಥಾಪಿತವಾದುದರ ಬಗ್ಗೆ ನಾವು ಆಶ್ಚರ್ಯಪಡಬೇಕಾಗಿದೆ. ಮಕ್ಕ ಮತ್ತು ಮದೀನದಲ್ಲಿ ಮುಹಮ್ಮದರು ಅಚ್ಚೊತ್ತಿದ್ದ ಶುದ್ಧ ಮತ್ತು ಪರಿಪೂರ್ಣವಾದ ಮುದ್ರೆ ಹನ್ನೆರಡು ಶತಮಾನಗಳ ಕ್ರಾಂತಿಗಳ ನಂತರವೂ ಹಿಂದೂಸ್ತಾನದ, ಆಫ್ರಿಕದ ಮತ್ತು ಟರ್ಕಿಸ್ತಾನದ ಮತಾಂತರಗೊಂಡ ಖುರ್‌ಆನಿನ ಅಭಿಮಾನಿಗಳಿಂದ ಸಂರಕ್ಷಿಸಲ್ಪಟ್ಟಿದೆ. ಕ್ರೈಸ್ತ ಸುವಾರ್ತೆಗಾರರಾದ ಸಂತ ಪೀಟರ್ ಅಥವಾ ಸಂತ ಪೌಲ್ ವ್ಯಾಟಿಕನ್‌ಗೆ ಭೇಟಿ ನೀಡಲು ಸಾಧ್ಯವಿರುವುದಾದರೆ ಅಲ್ಲಿ ಭವ್ಯ ದೇವಾಲಯದಲ್ಲಿ ನಿಗೂಢ ಆರಾಧನಾ ವಿಧಿಗಳಿಂದ ಆರಾಧಿಸಲ್ಪಡುವ ಆರಾಧ್ಯ ಮೂರ್ತಿ ಯಾರೆಂದು ಪ್ರಶ್ನಿಸಬಹುದಾಗಿದೆ.... ಆದರೆ ಸೈಂಟ್ ಸೋಫಿಯದಲ್ಲಿರುವ ಟರ್ಕಿಶ್ ಮಸ್‌ಜಿದಿನ ಗುಮ್ಮಟವು ಗಾತ್ರದಲ್ಲಿಯೂ ವೈಭವದಲ್ಲಿಯೂ ಹಿರಿದಾಗಿದ್ದರೂ ಅದು ಮದೀನದಲ್ಲಿ ಮುಹಮ್ಮದರ ಕೈಗಳಿಂದ ನಿರ್ಮಿಸಲ್ಪಟ್ಟ ಕಿರಿದಾದ ಮಸ್‌ಜಿದನ್ನು ಪ್ರತಿನಿಧಿಸುತ್ತದೆ. ಮುಸ್ಲಿಮರು ತಮ್ಮ ಆರಾಧನೆಯ ಬಿಂಬವಾಗಿ ಯಾವುದಾದರೂ ಮೂರ್ತ ವಸ್ತುವನ್ನು ಸ್ಥಾಪಿಸುವ ಪ್ರೇರಣೆಯನ್ನು ತಿರಸ್ಕರಿಸಿದ್ದಾರೆ. 'ನಾನು ಏಕದೇವನನ್ನು ನಂಬುತ್ತೇನೆ. ಮುಹಮ್ಮದ್ ಅವನ ಸಂದೇಶವಾಹಕ' ಎಂಬುದು ಸರಳವೂ ಬದಲಾಯಿಸಲ್ಪಡದ್ದೂ ಆಗಿರುವ ಮುಸ್ಲಿಮರ ವಿಶ್ವಾಸವಾಗಿದೆ.... ಅಟ್ಲಾಂಟಿಕ್ ಸಾಗರದಿಂದ ಗಂಗಾನದಿ ತನಕ ಖುರ್‌ಆನನ್ನು ಮೂಲಭೂತ ನಿಯಮವೆಂದು ಅಂಗೀಕರಿಸಲಾಗುತ್ತಿದೆ. ಅದು ಧರ್ಮಶಾಸ್ತ್ರಕ್ಕೆ ಸಂಬಂಧಿಸಿ ಮಾತ್ರವಲ್ಲ. ಸಿವಿಲ್ ಮತ್ತು ಕ್ರಿಮಿನಲ್ ವಿಷಯಗಳಿಗೆ ಸಂಬಂಧಿಸಿದ ನಿಯಮಗಳನ್ನು ಒಳಗೊಂಡಿದೆ. ಅದರಲ್ಲಿರುವ ನಿಯಮಗಳು ಜನರ ಕೆಲಸಗಳನ್ನು ಮತ್ತು ಸ್ವತ್ತನ್ನು ನಿಯಂತ್ರಿಸುತ್ತವೆ. ಅವು ದೇವನ ಎಂದೂ ತಪ್ಪುಮಾಡದ ಮತ್ತು ಬದಲಾಯಿಸಲ್ಪಡದ ಇಚ್ಛೆಗೆ ಅನುಸಾರವಾಗಿವೆ ಎಂದು ನಂಬಲಾಗುತ್ತಿದೆ... "ಮುಹಮ್ಮದ್ ಪ್ರಾಮಾಣಿಕವಾಗಿ ಹೀಗೆ ನಂಬಿದ್ದರು: ತನ್ನ ಧರ್ಮದ ಮೂಲಾಧಾರವು ತನಗಿಂತ ಮೊದಲು ಆಗಮಿಸಿದ ಪ್ರವಾದಿಗಳಿಗೆ ಅವತೀರ್ಣವಾದ ಸತ್ಯವಾದ ದೇವವಾಣಿಗಳೆಂದು. ಆ ಪ್ರವಾದಿಗಳ ಉನ್ನತ ಸ್ವಭಾವ ಗುಣಗಳನ್ನೂ ಅವರು ತೋರಿಸಿದ ಪವಾಡಗಳನ್ನೂ ಅಂಗೀಕರಿಸಲಾಗಿತ್ತು..... ಅವರು ತನ್ನ ಅನುಯಾಯಿಗಳಲ್ಲಿ ದಾನ ಧರ್ಮಗಳನ್ನು ನೀಡುವ ಗುಣವನ್ನೂ ಸ್ನೇಹ ಸಂಬಂಧವನ್ನೂ ಪ್ರೋತ್ಸಾಹಿಸಿದ್ದರು. ಅವರು ಸಾಮಾಜಿಕ ಸದ್ಗುಣಗಳನ್ನು ಉಪದೇಶಿಸಿದ್ದರು. ಅವರು ಸೇಡಿನ ದಾಹವನ್ನು ಮತ್ತು ವಿಧವೆಯರಿಗೂ ಅನಾಥರಿಗೂ ಹಿಂಸೆ ನೀಡುವುದನ್ನು ತಾನು ಜಾರಿಗೊಳಿಸಿದ ನಿಯಮಗಳ ಮತ್ತು ಉಪದೇಶಗಳ ಮೂಲಕ ತಡೆಗಟ್ಟಿದ್ದರು."

**(Gibbon, Edward : The History of the Decline and Fall of the Roman Empire, Chapter L J.M. Dent & Sons Ltd., 1931, pp. 207-92)**

*~*~* ● *~*~*

## ಡಬ್ಲ್ಯೂ. ಡಬ್ಲ್ಯೂ. ಹಂಟರ್

"ಇಸ್ಲಾಮ್ ದೇವನ ಬಗ್ಗೆ ಉನ್ನತ ಕಲ್ಪನೆಯನ್ನು ಮತ್ತು ಮಾನವರು ಸಹೋದರರು ಎಂಬ ಭವ್ಯ ತತ್ವವನ್ನು ಪ್ರತಿಪಾದಿಸಿತು."

**(The Times, London, 25-2-1888)**

*~*~* ● *~*~*

## ಮುರ್ರೇ ಟಿ. ಟೈಟಸ್

"ರಾಜಕುಮಾರನೂ ಕಸಗುಡಿಸುವವನೂ ಒಂದೇ ಸಾಲಿನಲ್ಲಿ ನಿಂತು ಮಸ್‌ಜಿದ್‌ನಲ್ಲಿ ಆರಾಧಿಸಲು ಇಸ್ಲಾಮ್ ಧರ್ಮವು ಅನುಮತಿಸುತ್ತದೆ."

**(Titus, Murray T. : Indian Islam, Munshiram Manoharlal, Publishers Private Ltd., New Delhi, India 1958, p. 51)**

*~*~* ● *~*~*

## ಲೋರ ವೇಕ್ಯ ವಾಗ್ಲಿಯೇರಿ

"ನಾವು ಮುಹಮ್ಮದರ ಭವಿಷ್ಯವಾಣಿಗಳ ಕಡೆಗೆ ನೋಡುವುದಾದರೆ ಅಥವಾ ಪ್ರಥಮ ಮುಸ್ಲಿಮ್ ಜಯಗಳ ಬಗ್ಗೆ ನೋಡುವುದಾದರೆ, ಇಸ್ಲಾಮ್ ಖಡ್ಗಬಲದಿಂದ ಹೇರಲಾಯಿತೆಂದು ಆರೋಪಿಸುವುದು ಮತ್ತು ಇಸ್ಲಾಮಿನ ವಿಸ್ತೃತ ಮತ್ತು ವೇಗವಾದ ಹಬ್ಬುವಿಕೆಗೆ ಇದೇ ಕಾರಣವೆಂದು ಹೇಳುವುದು ಸುಳ್ಳಾಗಿದೆ ಎಂದು ಸ್ಪಷ್ಟವಾಗುತ್ತದೆ. ಖುರ್‌ಆನ್ ಹೀಗೆ ಹೇಳುತ್ತದೆ: 'ಧರ್ಮದ ವಿಷಯದಲ್ಲಿ ಯಾವ ಬಲಾತ್ಕಾರವೂ ಇಲ್ಲ.' ಕ್ರೂರ ನಡೆವಳಿಕೆಯ ಆರೋಪದ ಬಗ್ಗೆ ಉತ್ತರ ನೀಡುವುದು ಸುಲಭವಾಗಿದೆ. ಮುಹಮ್ಮದರು ಒಂದು ದೇಶದ ಮುಖ್ಯ ಆಡಳಿತೆಗಾರನಾಗಿ ತನ್ನ ದೇಶದ ಜನರ ಜೀವರಕ್ಷಣೆಯ ಮತ್ತು ಸ್ವಾತಂತ್ರ್ಯ ರಕ್ಷಣೆಯ ಹೊಣೆಗಾರಿಕೆಯನ್ನು ಹೊಂದಿದ್ದರು. ಅವರು ನ್ಯಾಯದಾನ ಮಾಡುವಾಗ ಅಪರಾಧಿಗಳಾದ ವ್ಯಕ್ತಿಗಳನ್ನು ಕಠಿಣವಾಗಿ ಶಿಕ್ಷಿಸಿದರು.. ಆದರೆ ಮುಹಮ್ಮದರು ದೇವನ ಧರ್ಮದ ಉಪದೇಶಕನೆಂಬ ನೆಲೆಯಲ್ಲಿ ತನ್ನ ವೈಯಕ್ತಿಕ ಶತ್ರುಗಳೊಂದಿಗೆ ಕೂಡ ಮೃದುವಾಗಿ ಮತ್ತು ದಯೆಯಿಂದ ವರ್ತಿಸುತ್ತಿದ್ದರು. ಮಾನವರ ಮನಸ್ಸು ಕಲ್ಪಿಸಬಹುದಾದ ಎರಡು ಶ್ರೇಷ್ಠ ಗುಣಗಳಾದ ನ್ಯಾಯಪಾಲನೆ ಮತ್ತು ದಯೆದೋರುವಿಕೆ ಅವರಲ್ಲಿ ಅಡಕವಾಗಿದ್ದವು... ಇಸ್ಲಾಮಿನ ಶತ್ರುಗಳು ಮುಹಮ್ಮದರನ್ನು ಇಂದ್ರಿಯಾಸಕ್ತನಾದ ನೀತಿಗೆಟ್ಟ ಮನುಷ್ಯನೆಂದು ಚಿತ್ರಿಸುತ್ತಾ ಅದಕ್ಕೆ ಸಾಕ್ಷ್ಯವನ್ನು ಅವರ ಮದುವೆಗಳಲ್ಲಿ ಕಂಡು ಹಿಡಿಯಲು ಪ್ರಯತ್ನಿಸಿ ಅವರು ತನ್ನ ಪ್ರವಾದಿತ್ವ ವಾದಕ್ಕೆ ಸರಿಹೊಂದದ ಬಲಹೀನ ಸ್ವಭಾವ ಗುಣಗಳನ್ನು ಹೊಂದಿದ್ದರೆಂದು ವಾದಿಸುತ್ತಾರೆ. ಇಂತಹ ಜನರು ವಾಸ್ತವಿಕವಾದ ಒಂದು ವಿಷಯವನ್ನು ಪರಿಗಣಿಸಲು ನಿರಾಕರಿಸುತ್ತಾರೆ. ಮುಹಮ್ಮದರು ಜೀವಿಸಿದ ಅರಬ್ ದೇಶದ ಸಮಾಜದಲ್ಲಿ ಮದುವೆ ಎಂಬುದು ಹೆಸರಿಗೆ ಮಾತ್ರ ಇತ್ತು. ಅಲ್ಲಿ ಬಹುಭಾರ್ಯತ್ವವು ವಿಶೇಷವಾಗಿ ಜಾರಿಯಲ್ಲಿತ್ತು. ವಿವಾಹ ವಿಚ್ಛೇದನೆಯು ಬಹಳ ಸುಲಭವಾಗಿತ್ತು. ಇಂತಹ ಸಮಾಜದಲ್ಲಿ ಅವರ ಲೈಂಗಿಕ ಆಸಕ್ತಿ ನೈಸರ್ಗಿಕವಾಗಿ ಬಲಿಷ್ಠವಾಗಿದ್ದ ಅವರ ಯೌವ್ವನದ ಕಾಲದಲ್ಲಿ ಅವರು ಖದೀಜ ಎಂಬ ಅವರಿಗಿಂತ ಹೆಚ್ಚು ಪ್ರಾಯದ ವಿಧವೆಯನ್ನು ಮದುವೆಯಾಗಿ ಅನಂತರ ಆಕೆ ಜೀವಿಸಿದ್ದ ಇಪ್ಪತ್ತೈದು ವರ್ಷಗಳ ಕಾಲದಲ್ಲಿ ಪ್ರಾಮಾಣಿಕನೂ ಪ್ರೀತಿಸುವವನೂ ಆಗಿರುವ ಪತಿಯಾಗಿ ಜೀವಿಸಿದರು. ಆ ಮಹಿಳೆ ಮೃತಳಾದ ನಂತರ ಅವರು ಐವತ್ತು ವರ್ಷದ ಪ್ರಾಯದಲ್ಲಿ ಒಂದಕ್ಕಿಂತ ಹೆಚ್ಚು ಮದುವೆಗಳನ್ನು ಮಾಡಿದರು. ಅವರು ಮಾಡಿದ ಪ್ರತಿಯೊಂದು ಮದುವೆಗೆ ಸಾಮಾಜಿಕ ಅಥವಾ ರಾಜಕೀಯ ಕಾರಣಗಳಿದ್ದುವು. ಅವರು ಮದುವೆಯಾಗುವ ಮೂಲಕ ಭಕ್ತೆಯರಾದ ಮಹಿಳೆಯರಿಗೆ ಗೌರವ ನೀಡಲು ಉದ್ದೇಶಿಸಿದರು. ಅವರು ಬೇರೆ ಗೋತ್ರಗಳೊಂದಿಗೆ ವಿವಾಹ ಸಂಬಂಧ ಸ್ಥಾಪಿಸಿ ಆ ಗೋತ್ರಗಳಲ್ಲಿ ಇಸ್ಲಾಮಿನ ಪ್ರಚಾರದ ಮಾರ್ಗವನ್ನು ತೆರೆಯಲು ಬಯಸಿದರು. ಆಯಿಶಾರವರನ್ನು ಹೊರತುಪಡಿಸಿ ಅವರು ಮದುವೆಯಾದ ಇತರ ಮಹಿಳೆಯರು ಕನ್ಯೆಯರೋ ಯುವತಿಯರೋ ಸುಂದರಿಯರೋ ಆಗಿರಲಿಲ್ಲ. ಇದು ವಿಷಯ ಲೋಲುಪತೆಯೋ?

**(Vaglieri, Laura Veccia : An Interpretation of Islam, Volume III, Chapter 30, The American Fazl Mosque, 1958, pp. 24-68)**

**(AHMADIYYA GAZETTE CANADA - February 2009 ಸಂಚಿಕೆಯಿಂದ)**

ಭಾಷಾಂತರ : ಎಂ. ಉಬೈದುಲ್ಲಾ

# ಇಸ್ಲಾಮಿನ ಪ್ರಾಥಮಿಕ ಪಾಠಗಳು

## ನಮಾಝ್

**ನಮಾಝ್‌ಗೆ ನಿಯ್ಯತ್ ಮಾಡುವಾಗ ಈ ದುಆ ಓದಬೇಕು:**

إِنِّيْ وَجَّهْتُ وَجْهِيَ لِلَّذِيْ فَطَرَ السَّمٰوٰتِ وَالْاَرْضَ
حَنِيْفًا وَّمَا اَنَا مِنَ الْمُشْرِكِيْنَ ۝

ಇನ್ನೀ ವಜ್ಜಹ್‌ತು ವಜ್‌ಹಿಯ ಲಿಲ್ಲಧೀ
ಫತರಸ್ಸಮಾವಾತಿ ವಲ್ ಅರ್ಝ
ಹನೀಫನ್ ವಮಾ ಅನಾ ಮಿನಲ್ ಮುಶ್ರಿಕೀನ್

**ಅರ್ಥ:** ಆಕಾಶಗಳನ್ನೂ ಭೂಮಿಯನ್ನೂ ಸೃಷ್ಟಿಸಿದವನಿಗೆ ನೇರವಾಗಿ ನಿಶ್ಚಯವಾಗಿಯೂ ನಾನು ಮುಖ ತಿರುಗಿಸಿರುತ್ತೇನೆ. ನಾನು ಬಹುದೇವಾರಾಧಕರಲ್ಲಿ ಸೇರಿಲ್ಲ.

## ನಮಾಝ್ ಮಾಡುವ ಕ್ರಮ

ನಮಾಝ್ ಮಾಡುವಾಗ ಕಅ್‌ಬವನ್ನು ಅಭಿಮುಖೀಕರಿಸಿ ನಿಂತುಕೊಳ್ಳಬೇಕು. ಅನಂತರ ಅಲ್ಲಾಹು ಅಕ್‌ಬರ್ ಎಂದು ಹೇಳುತ್ತಾ ಎರಡೂ ಕೈಗಳನ್ನು ಕಿವಿಗಳಿಗೆ ಸಮವಾಗಿ ಎತ್ತಿ ಕೆಳಗೆ ಚಾಚಿ ಎದೆಯ ಮೇಲೆ ಎಡಗೈ ಮೇಲೆ ಬಲಗೈ ಇರುವಂತೆ ಕೈಗಳನ್ನು ಜೋಡಿಸಿ ಇಡಬೇಕು. ಅನಂತರ ಈ ಕೆಳಗಿನ ಸನಾ (ಸ್ತುತಿ) ಅಥವಾ ದುಆ ಹೇಳಬೇಕು.

**ಸನಾ:**

سُبْحٰنَكَ اللّٰهُمَّ وَبِحَمْدِكَ وَتَبَارَكَ اسْمُكَ وَتَعَالٰى جَدُّكَ وَ
لَآ اِلٰهَ غَيْرُكَ ۝

ಸುಬ್‌ಹಾನಕಲ್ಲಾಹುಮ್ಮ ವಬಿಹಮ್ದಿಕ ವತಬಾರಕಸ್ಮುಕ
ವತಆಲ ಜದ್ದುಕ ವಲಾಇಲಾಹ ಗೈರುಕ

**ಅರ್ಥ:** ಓ ಅಲ್ಲಾಹ್, ನಿನ್ನನ್ನು ಸ್ತುತಿಸುವುದರೊಂದಿಗೆ ನಿನ್ನ ಪರಿಶುದ್ಧಿಯನ್ನು ನಾನು ಕೊಂಡಾಡುತ್ತೇನೆ. ನಿನ್ನ ನಾಮವು ಅನುಗ್ರಹೀತವಾಗಿದೆ. ನಿನ್ನ ಮಹಿಮೆ ಅತ್ಯುನ್ನತವಾದುದು. ನಿನ್ನ ಹೊರತು ಆರಾಧನೆಗೆ ಅರ್ಹರು ಬೇರೆ ಯಾರೂ ಇಲ್ಲ.

**ದುಆ:**

اَللّٰهُمَّ بَاعِدْ بَيْنِيْ وَبَيْنَ خَطَايَايَ كَمَا بَاعَدْتَ
بَيْنَ الْمَشْرِقِ وَالْمَغْرِبِ اَللّٰهُمَّ نَقِّنِيْ مِنْ خَطَايَايَ
كَمَا يُنَقَّى الثَّوْبُ الْاَبْيَضُ مِنَ الدَّنَسِ. اَللّٰهُمَّ
اغْسِلْنِيْ مِنْ خَطَايَايَ بِالْمَآءِ وَالثَّلْجِ وَالْبَرَدِ.

ಅಲ್ಲಾಹುಮ್ಮ ಬಾಇದ್ ಬೈನೀ ವ ಬೈನ ಖತಾಯಾಯ ಕಮಾ ಬಾಅತ್ತ
ಬೈನಲ್ ಮಶ್‌ರಿಕಿ ವಲ್ ಮಗ್‌ರಿಬೀ.
ಅಲ್ಲಾಹುಮ್ಮ ನಖ್ಖಿನೀ ಮಿನ್ ಖತಾಯಾಯ ಕಮಾ
ಯುನಖ್ಖ ಸೌಬುಲ್ ಅಬ್‌ಯಝು ಮಿನದ್ದನಸಿ. ಅಲ್ಲಾಹುಮ್ಮಗ್‌ಸಿಲ್‌ನೀ
ಮಿನ್ ಖತಾಯಾಯ ಬಿಲ್‌ಮಾಇ ವಸ್ಸಲ್‌ಜಿ ವಲ್‌ಬರ್‌ದ್.

**ಅರ್ಥ:** ಓ ಅಲ್ಲಾಹ್, ಪೂರ್ವವನ್ನೂ ಪಶ್ಚಿಮವನ್ನೂ ನೀನು ಅಗಲಿಸಿದ ಹಾಗೆ ನೀನು ನನ್ನಿಂದ ಪಾಪವನ್ನು ದೂರೀಕರಿಸು. ಬಿಳಿ ಬಟ್ಟೆಯನ್ನು ಕೊಳೆಯಿಂದ ಶುದ್ಧೀಕರಿಸುವ ಹಾಗೆ ನೀನು ನನ್ನನ್ನು ಪಾಪದಿಂದ ವಿಮೋಚಿತನನ್ನಾಗಿ ಮಾಡು. ಓ ಅಲ್ಲಾಹ್, ನನ್ನ ಪಾಪವನ್ನು ನೀರಿನಿಂದಲೂ ಮಂಜುಗಡ್ಡೆಯಿಂದಲೂ ಆಲಿಕಲ್ಲುಗಳಿಂದಲೂ ತೊಳೆದುಬಿಡು.

ಅನಂತರ ಹೀಗೆ ಹೇಳಬೇಕು:

اَعُوْذُ بِاللّٰهِ مِنَ الشَّيْطٰنِ الرَّجِيْمِ ۝

ಅಊಧು ಬಿಲ್ಲಾಹಿ ಮಿನಶ್ಶೈತಾನಿರ್ರಜೀಮ್

**ಅರ್ಥ:** ಅಲ್ಲಾಹನಿಂದ ಶಪಿಸಲ್ಪಟ್ಟ ಶೈತಾನನ ಉಪದ್ರಗಳಿಂದ ಸಂರಕ್ಷಣೆಯನ್ನು ನಾನು ಅಲ್ಲಾಹನೊಂದಿಗೆ ಯಾಚಿಸುತ್ತೇನೆ.

ನಂತರ ಸೂರತುಲ್ ಫಾತಿಹ ಓದಬೇಕು:

بِسْمِ اللّٰهِ الرَّحْمٰنِ الرَّحِيْمِ ۝
اَلْحَمْدُ لِلّٰهِ رَبِّ الْعٰلَمِيْنَ ۝ الرَّحْمٰنِ الرَّحِيْمِ ۝ مٰلِكِ يَوْمِ
الدِّيْنِ ۝ اِيَّاكَ نَعْبُدُ وَاِيَّاكَ نَسْتَعِيْنُ ۝ اِهْدِنَا الصِّرَاطَ

ಬಿಸ್ಮಿಲ್ಲಾಹಿರ್ರಹ್ಮಾನಿರ್ರಹೀಮ್.
ಅಲ್‌ಹಮ್ದುಲಿಲ್ಲಾಹಿ ರಬ್ಬಿಲ್ ಆಲಮೀನ್.
ಅರ್ರಹ್ಮಾನಿರ್ರಹೀಮ್. ಮಾಲಿಕಿ ಯೌಮಿದ್ದೀನ್.
ಇಯ್ಯಾಕ ನಅ್‌ಬುದು ವ ಇಯ್ಯಾಕ ನಸ್ತಈನ್.

اَلْمُسْتَقِيْمَ ۝ صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۝ اٰمِيْنَ

ಇಹ್‌ದಿನ ಸಿರಾತಲ್ ಮುಸ್ತಖೀಮ್.
ಸಿರಾತಲ್ಲಧೀನ ಅನ್‌ಅಮ್ತ ಅಲೈಹಿಮ್
ಗೈರಿಲ್ ಮಗ್‌ಲೂಬಿ ಅಲೈಹಿಮ್
ವಲಲ್ಲಾಲ್ಲೀನ್ – ಆಮೀನ್.

**ಅರ್ಥ:** ಪರಮ ಕಾರುಣ್ಯಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ ನಾನು ತೊಡಗುತ್ತೇನೆ. ಎಲ್ಲಾ ಸ್ತುತಿ ಸರ್ವಲೋಕಗಳ ಪಾಲಕ ಪೋಷಕನಾದ ಅಲ್ಲಾಹನಿಗೆ. (ಅವನು) ಪರಮ ಕಾರುಣ್ಯಮಯನೂ ಕರುಣಾನಿಧಿಯೂ ಪ್ರತಿಫಲ ನೀಡುವ ದಿನದ ಒಡೆಯನೂ ಆಗಿರುವನು. ನಿನ್ನನ್ನು ಮಾತ್ರ ನಾವು ಆರಾಧಿಸುತ್ತೇವೆ. ನಿನ್ನಿಂದ ಮಾತ್ರ ನಾವು ಸಹಾಯ ಯಾಚಿಸುತ್ತೇವೆ. ನೀನು ನಮ್ಮನ್ನು ನೇರವಾದ ಮಾರ್ಗದಲ್ಲಿ ನಡೆಸು – ನೀನು ಅನುಗ್ರಹಿಸಿದವರ ಮಾರ್ಗದಲ್ಲಿ; ನಿನ್ನ ಕ್ರೋಧಕ್ಕೆ ಪಾತ್ರರಾದವರ ಮತ್ತು ದಾರಿ ತಪ್ಪಿದವರ ಮಾರ್ಗದಲ್ಲಿ ಅಲ್ಲ.

ಸೂರತುಲ್ ಫಾತಿಹ ಓದಿದ ನಂತರ "ಆಮೀನ್" (ಈ ಪ್ರಾರ್ಥನೆ ಸ್ವೀಕರಿಸು) ಎಂದು ಹೇಳಬೇಕು. ಅನಂತರ ಪವಿತ್ರ ಖುರ್‌ಆನಿನ ಯಾವುದಾದರೂ ಸೂರತ್ (ಅಧ್ಯಾಯ) ಅಥವಾ ಕೆಲವು ವಚನಗಳನ್ನು ಓದಬೇಕು. ಅನಂತರ **ಅಲ್ಲಾಹು ಅಕ್ಬರ್** ಎಂದು ಹೇಳಿ ರುಕೂಅ್ ಮಾಡಬೇಕು. ಎರಡು ಅಂಗೈಗಳನ್ನು ಮೊಣಕಾಲು ಗಂಟಿನ ಮೇಲೆ ಇರಿಸುವಂತೆ ಬಗ್ಗಿ ಬೆರಳುಗಳನ್ನು ಮೊಣಕಾಲು ಗಂಟಿನ ಮೇಲೆ ಬಿಡಿಸಿ ಇಟ್ಟು ಬಗ್ಗಿ ನಿಲ್ಲುವುದನ್ನು ರುಕೂಅ್ ಎಂದೆನ್ನುತ್ತಾರೆ. ರುಕೂಅ್ ಮಾಡುವಾಗ,

سُبْحَانَ رَبِّيَ الْعَظِيْمِ .

ಸುಬ್‌ಹಾನ ರಬ್ಬಿಯಲ್ ಅಝೀಮ್

**ಅರ್ಥ:** (ಮಹಾಮಹಿಮನಾದ ನನ್ನ ಪ್ರಭುವಿನ ಪರಿಶುದ್ಧಿಯನ್ನು ನಾನು ಕೊಂಡಾಡುತ್ತೇನೆ) ಎಂದು ಹೇಳಬೇಕು. ಇದು ಕನಿಷ್ಠ ಮೂರು ಬಾರಿ ಹೇಳಬೇಕು. 5 ಅಥವಾ 7 ಸಲ ಸಹ ಹೇಳಬಹುದು. ಎಣಿಕೆ ವಿಷಮ ಸಂಖ್ಯೆಯಲ್ಲಿರಬೇಕು. ರುಕೂಅ್‌ನಿಂದ ನೆಟ್ಟಗೆ ನಿಲ್ಲುವಾಗ ಹೀಗೆ ಹೇಳಬೇಕು:

سَمِعَ اللّٰهُ لِمَنْ حَمِدَهٗ

ಸಮಿಅಲ್ಲಾಹು ಲಿಮನ್ ಹಮಿದ

**ಅರ್ಥ:** ಅಲ್ಲಾಹನನ್ನು ಸ್ತುತಿಸಿದವನ ಸ್ತುತಿಯನ್ನು ಅಲ್ಲಾಹನು ಆಲಿಸಿದನು.

ಹೀಗೆ ರುಕೂಅ್‌ನಿಂದ ಎದ್ದು ನೆಟ್ಟಗೆ ನಿಲ್ಲುವುದಕ್ಕೆ ಇಅ್‌ತಿದಾಲ್ ಎಂದು ಹೆಸರು. ನೆಟ್ಟಗೆ ನಿಂತು ಹೀಗೆ ಹೇಳಬೇಕು:

رَبَّنَا وَلَكَ الْحَمْدُ حَمْدًا كَثِيْرًا طَيِّبًا مُّبَارَكًا فِيْهِ

ರಬ್ಬನಾ ವಲಕಲ್ ಹಮ್ದು ಹಮ್ದನ್ ಕಸೀರನ್, ತಯ್ಯಿಬನ್, ಮುಬಾರಕನ್ ಫೀಹಿ

**ಅರ್ಥ:** ನಮ್ಮ ಪ್ರಭೂ, ಅತ್ಯಧಿಕವೂ ಪರಿಶುದ್ಧವೂ ಅನುಗ್ರಹದಾಯಕವೂ ಆದ ಎಲ್ಲ ಸ್ತುತಿಗಳು ನಿನಗೆ ಮಾತ್ರ ಅರ್ಹವಾಗಿವೆ.

ಅನಂತರ **ಅಲ್ಲಾಹು ಅಕ್‌ಬರ್** ಎಂದು ಹೇಳುತ್ತಾ ಸುಜೂದ್ (ಸಾಷ್ಟಾಂಗ ಪ್ರಣಾಮ) ಮಾಡಬೇಕು. ಸುಜೂದ್ ಮಾಡುವಾಗ ಮೊದಲು ಮೊಣಕಾಲು ಗಂಟುಗಳು, ಅನಂತರ ಎರಡು ಅಂಗೈಗಳೂ ಹಣೆಯೂ ಮೂಗೂ ನೆಲಕ್ಕೆ ತಾಗಬೇಕು. ಎರಡು ಪಾದಗಳನ್ನು ನೆಲದಲ್ಲಿ ಅವುಗಳ ಬೆರಳುಗಳು ಖಿಬ್ಲದ ಕಡೆಗೆ ಚಾಚುವಂತೆ ಇಡಬೇಕು. ತಲೆ ಎರಡು ಕೈಗಳ ಮಧ್ಯೆ ಇರಬೇಕು. ಎರಡು ಕೈಗಳು ತಲೆಯ ಎರಡು ಬದಿಗಳಲ್ಲಿ ಇರಬೇಕು. ಕೈಗಳನ್ನು ನೆಲದಲ್ಲಿ ಚಾಚಬಾರದು. ಸುಜೂದಿನಲ್ಲಿ ಹೀಗೆ ಹೇಳಬೇಕು.

سُبْحَانَ رَبِّيَ الْاَعْلٰى

ಸುಬ್‌ಹಾನ ರಬ್ಬಿಯಲ್ ಅಅ್‌ಲಾ

**ಅರ್ಥ:** ಅತ್ಯುನ್ನತನಾದ ನನ್ನ ಪ್ರಭುವಿನ ಪರಿಶುದ್ಧಿಯನ್ನು ನಾನು ಕೊಂಡಾಡುತ್ತೇನೆ.

ಹೀಗೆ ಮೂರು ಸಾರಿ ಅಥವಾ 5, 7 ಸಾರಿ ಹೇಳಬಹುದು. ವಿಷಮ ಸಂಖ್ಯೆಯಲ್ಲಿ ಹೇಳಬೇಕು. ಅನಂತರ ಯಾವುದಾದರೂ ದುಆ ಅರಬಿ ಭಾಷೆಯಲ್ಲಾಗಲೀ ಸ್ವಂತ ಭಾಷೆಯಲ್ಲಾಗಲೀ ಹೇಳಬಹುದು. ರುಕೂಅ್‌ನಲ್ಲೂ ಸುಜೂದಿನಲ್ಲೂ ಖುರ್‌ಆನಿನ ವಚನಗಳನ್ನು ಓದಬಾರದು. ಒಂದು ಸುಜೂದ್ ಮಾಡಿದ ನಂತರ **ಅಲ್ಲಾಹು ಅಕ್‌ಬರ್** ಎಂದು ಹೇಳುತ್ತಾ ತಲೆ ಎತ್ತಿ ಎರಡು ಕೈಗಳನ್ನು ಮೊಣಕಾಲು ಗಂಟಿನ ಮೇಲಿಟ್ಟು ಕುಳಿತುಕೊಳ್ಳಬೇಕು. ಅನಂತರ ಹೀಗೆ ಹೇಳಬೇಕು:

اَللّٰهُمَّ اغْفِرْلِيْ وَارْحَمْنِيْ وَاهْدِنِيْ وَ
عَافِنِيْ وَارْفَعْنِيْ وَاجْبُرْنِيْ وَارْزُقْنِيْ .

ಅಲ್ಲಾಹುಮ್ಮಗ್‌ಫಿರ್‌ಲೀ ವರ್‌ಹಮ್‌ನೀ ವಹ್‌ದಿನೀ ವ ಆಫಿನೀ
ವರ್‌ಫಅ್‌ನೀ ವಜ್‌ಬುರ್‌ನೀ ವರ್‌ಝುಖ್‌ನೀ

**ಅರ್ಥ:** ಓ ಅಲ್ಲಾಹ್, ನೀನು ನನ್ನನ್ನು ಕ್ಷಮಿಸು, ನೀನು ನನ್ನ ಮೇಲೆ ಕರುಣೆದೋರು, ನೀನು ನನ್ನನ್ನು ನೇರವಾದ ಮಾರ್ಗದಲ್ಲಿ ನಡೆಸು, ನೀನು ನನಗೆ ಆರೋಗ್ಯ ದಯಪಾಲಿಸು, ನೀನು ನನ್ನನ್ನು ಮೇಲಕ್ಕೆತ್ತು, ನೀನು ನನ್ನ ಬಲಹೀನತೆಗಳನ್ನು ಹೋಗಲಾಡಿಸು, ನೀನು ನನಗೆ ಆಹಾರ ನೀಡು.

ಅನಂತರ **ಅಲ್ಲಾಹು ಅಕ್‌ಬರ್** ಎಂದು ಹೇಳಿ ಪುನಃ ಸುಜೂದ್ ಮಾಡಬೇಕು. ಎರಡನೆಯ ಸುಜೂದ್‌ನಲ್ಲಿ ಮೊದಲನೆಯ ಸುಜೂದಿನಲ್ಲಿ ಹೇಳಿದ ಹಾಗೆ

سُبْحَانَ رَبِّيَ الْاَعْلٰى — **ಸುಬ್‌ಹಾನ ರಬ್ಬಿಯಲ್ ಅಅ್‌ಲಾ**

ಎಂದು 5 ಸಾರಿ ಅಥವಾ ವಿಷಮ ಸಂಖ್ಯೆಯಲ್ಲಿ ಹೆಚ್ಚು ಸಾರಿ ಹೇಳಬೇಕು. ಅನಂತರ **ಅಲ್ಲಾಹು ಅಕ್‌ಬರ್** ಎಂದು ಹೇಳಿ ಎದ್ದು ನಿಲ್ಲಬೇಕು. ಅನಂತರ ಸನಾ ಮತ್ತು ಅವೂದು ಬಿಟ್ಟು ಬೇರೆ ಎಲ್ಲವನ್ನೂ ಒಂದನೇ ರಕ್‌ಅತಿನ ಪ್ರಕಾರ ಓದಿ ರುಕೂಅ್, ಇಅ್‌ತಿದಾಲ್ ಮತ್ತು ಸುಜೂದ್ ಮಾಡಬೇಕು. ಎರಡನೆಯ ಸುಜೂದ್ ಮಾಡಿದ ನಂತರ ಕುಳಿತುಕೊಂಡು ಎರಡು ಕೈಗಳನ್ನು ಮೊಣಕಾಲು ಗಂಟಿನ ಮೇಲಿರಿಸಬೇಕು. ಕೈಬೆರಳುಗಳನ್ನು ಬಿಡಿಸಿ ಖಿಬ್ಲದ ಕಡೆಗೆ ಇರುವಂತೆ ಇಡಬೇಕು. ಬಲಗಾಲಿನ ಬೆರಳುಗಳು ಖಿಬ್ಲದ ಕಡೆಗೆ ಇರುವಂತೆ ಕಾಲೂರಿ ಎಡಗಾಲನ್ನು ಚಾಚಿ ಅದರ ಮೇಲೆ ಕುಳಿತುಕೊಳ್ಳಬೇಕು. ಅನಂತರ **ಅತ್ತಹಿಯ್ಯಾತ್** ಎಂಬ ಈ ದುಆ ಓದಬೇಕು:

اَلتَّحِيَّاتُ لِلّٰهِ وَالصَّلَوٰتُ وَالطَّيِّبٰتُ اَلسَّلَامُ عَلَيْكَ اَيُّهَا النَّبِيُّ وَرَحْمَةُ اللّٰهِ وَبَرَكَاتُهٗ اَلسَّلَامُ عَلَيْنَا وَعَلٰى عِبَادِ اللّٰهِ الصّٰلِحِيْنَ ، اَشْهَدُ اَنْ لَّا اِلٰهَ اِلَّا اللّٰهُ وَاَشْهَدُ اَنَّ مُحَمَّدًا عَبْدُهٗ وَرَسُوْلُهٗ ،

**ಅತ್ತಹಿಯ್ಯಾತು ಲಿಲ್ಲಾಹಿ ವಸ್ಸಲವಾತು ವತ್ತಯ್ಯಿಬಾತು ಅಸ್ಸಲಾಮು ಅಲೈಕ ಅಯ್ಯುಹನ್ನಬಿಯ್ಯು ವ ರಹ್ಮತುಲ್ಲಾಹಿ ವ ಬರಕಾತುಹು ಅಸ್ಸಲಾಮು ಅಲೈನಾ ವ ಅಲಾ ಇಬಾದಿಲ್ಲಾಹಿ ಸ್ಸಾಲಿಹೀನ್. ಅಶ್‌ಹದು ಅಲ್ಲಾ ಇಲಾಹ ಇಲ್ಲಲ್ಲಾಹು ವ ಅಶ್‌ಹದು ಅನ್ನ ಮುಹಮ್ಮದನ್ ಅಬ್ದುಹು ವ ರಸೂಲುಹು**

**ಅರ್ಥ:** ಎಲ್ಲಾ ಕಾಣಿಕೆಗಳೂ ಎಲ್ಲಾ ಪ್ರಾರ್ಥನೆಗಳೂ ಎಲ್ಲಾ ಪರಿಶುದ್ಧ ಕಾರ್ಯಗಳೂ ಅಲ್ಲಾಹನಿಗೆ. ಓ ಪ್ರವಾದಿಯವರೇ, ರಕ್ಷಣೆಯೂ ಸಮಾಧಾನವೂ ಅಲ್ಲಾಹನ ಕಾರುಣ್ಯವೂ ಅನುಗ್ರಹಗಳೂ ನಿಮಗೆ ಲಭಿಸಲಿ. ರಕ್ಷಣೆಯೂ ಸಮಾಧಾನವೂ ನಮಗೆ ಮತ್ತು ಅಲ್ಲಾಹನ ಸಜ್ಜನರಾದ ದಾಸರಿಗೆ ಲಭಿಸಲಿ. ಅಲ್ಲಾಹನ ಹೊರತು ಆರಾಧನೆಗೆ ಬೇರೆ ಯಾರೂ ಅರ್ಹರಲ್ಲ ಎಂದು ನಾನು ಸಾಕ್ಷ್ಯ ಹೇಳುತ್ತೇನೆ. ಮುಹಮ್ಮದ್ ಅಲ್ಲಾಹನ ದಾಸರೂ ದೂತರೂ ಆಗಿರುವರೆಂದೂ ನಾನು ಸಾಕ್ಷ್ಯ ಹೇಳುತ್ತೇನೆ.

ಅತ್ತಹಿಯ್ಯಾತ್ ಓದುವಾಗ ಅಶ್‌ಹದು ಅಲ್ಲಾ ಇಲಾಹ ಇಲ್ಲಲ್ಲಾಹ್ ಎಂಬಲ್ಲಿಗೆ ತಲಪಿದಾಗ ಬಲಗೈಯ ತೋರು ಬೆರಳನ್ನು ಎತ್ತಬೇಕು.

ಅತ್ತಹಿಯ್ಯಾತ್ ಓದಿದ ನಂತರ ದರೂದ್ ಶರೀಫ್ ಎಂಬ ಈ ಕೆಳಗಿನ ದುಆ ಹೇಳಬೇಕು:

اَللّٰهُمَّ صَلِّ عَلٰى مُحَمَّدٍ وَّعَلٰى اٰلِ مُحَمَّدٍ كَمَا صَلَّيْتَ عَلٰى اِبْرَاهِيْمَ وَعَلٰى اٰلِ اِبْرَاهِيْمَ اِنَّكَ حَمِيْدٌ مَّجِيْدٌ ـ اَللّٰهُمَّ بَارِكْ عَلٰى مُحَمَّدٍ وَّعَلٰى اٰلِ مُحَمَّدٍ كَمَا بَارَكْتَ عَلٰى اِبْرَاهِيْمَ وَعَلٰى اٰلِ اِبْرَاهِيْمَ اِنَّكَ حَمِيْدٌ مَّجِيْدٌ ،

**ಅಲ್ಲಾಹುಮ್ಮ ಸಲ್ಲಿ ಅಲಾ ಮುಹಮ್ಮದಿನ್ ವ ಅಲಾ ಆಲಿ ಮುಹಮ್ಮದಿನ್ ಕಮಾ ಸಲ್ಲೈತ ಅಲಾ ಇಬ್ರಾಹೀಮ ವ ಅಲಾ ಆಲಿ ಇಬ್ರಾಹೀಮ ಇನ್ನಕ ಹಮೀದುನ್ ಮಜೀದ್. ಅಲ್ಲಾಹುಮ್ಮ ಬಾರಿಕ್ ಅಲಾ ಮುಹಮ್ಮದಿನ್ ವಅಲಾ ಆಲಿ ಮುಹಮ್ಮದಿನ್ ಕಮಾ ಬಾರಕ್ತ ಅಲಾ ಇಬ್ರಾಹೀಮ ವ ಅಲಾ ಆಲಿ ಇಬ್ರಾಹೀಮ ಇನ್ನಕ ಹಮೀದುನ್ ಮಜೀದ್.**

**ಅರ್ಥ:** ಓ ಅಲ್ಲಾಹ್, ನೀನು ಹಝ್ರತ್ ಮುಹಮ್ಮದ್ ಪೈಗಂಬರರಿಗೂ ಅವರ ಕುಟುಂಬಕ್ಕೆ ಸೇರಿದವರಿಗೂ ಶುಭಾಶೀರ್ವಾದಗಳನ್ನು ನೀಡು – ಹಝ್ರತ್ ಇಬ್ರಾಹೀಮರಿಗೂ ಅವರ ಕುಟುಂಬದವರಿಗೂ ನೀನು ಶುಭಾಶೀರ್ವಾದಗಳನ್ನು ನೀಡಿದ ಹಾಗೆ. ನಿಶ್ಚಯವಾಗಿಯೂ ನೀನು ಸ್ತುತಿಸಲ್ಪಡುವವನೂ ಮಹತ್ವಶಾಲಿಯೂ ಆಗಿರುವೆ. ಓ ಅಲ್ಲಾಹ್, ನೀನು ಹಝ್ರತ್ ಮುಹಮ್ಮದ್ ಪೈಗಂಬರರಿಗೂ ಅವರ ಕುಟುಂಬದವರಿಗೂ ಅನುಗ್ರಹವನ್ನು ದಯಪಾಲಿಸು – ಹಝ್ರತ್ ಇಬ್ರಾಹೀಮರಿಗೂ ಅವರ ಕುಟುಂಬದವರಿಗೂ ನೀನು ಅನುಗ್ರಹ ನೀಡಿದ ಹಾಗೆ. ನಿಶ್ಚಯವಾಗಿಯೂ ನೀನು ಸ್ತುತಿಸಲ್ಪಡುವವನೂ ಮಹತ್ವಶಾಲಿಯೂ ಆಗಿರುವೆ.

ಅನಂತರ ಖುರ್‌ಆನಿನ ಅಥವಾ ಹದೀಸಿನ ದುಆಗಳನ್ನು ಹೇಳಬಹುದು. ಅಥವಾ ಬೇರೆ ಯಾವುದಾದರೂ ದುಆ ಹೇಳಬಹುದು.

## ಕೆಲವು ದುಆಗಳು

1. رَبَّنَآ اٰتِنَا فِى الدُّنْيَا حَسَنَةً وَّفِى الْاٰخِرَةِ حَسَنَةً وَّقِنَا عَذَابَ النَّارِ ۔

**ರಬ್ಬನಾ ಆತಿನಾ ಫಿದ್ದುನ್‌ಯಾ ಹಸ್‌ನತನ್ ವಫಿಲ್ ಆಖಿರತಿ ಹಸ್‌ನತನ್ ವಖಿನಾ ಅಧಾಬನ್ನಾರ್**

ಅರ್ಥ: ನಮ್ಮ ಪ್ರಭೂ, ನಮಗೆ ಇಹಲೋಕದಲ್ಲಿ ಒಳಿತನ್ನು ನೀಡು; ಪರಲೋಕದಲ್ಲಿಯೂ ಒಳಿತನ್ನು ನೀಡು. ನಮ್ಮನ್ನು ನೀನು ನರಕದ ಶಿಕ್ಷೆಯಿಂದ ರಕ್ಷಿಸು.

2. رَبِّ اجْعَلْنِىْ مُقِيْمَ الصَّلٰوةِ وَمِنْ ذُرِّيَّتِىْ ۖ رَبَّنَا وَتَقَبَّلْ دُعَآءِ ـ رَبَّنَا

**ರಬ್ಬಿಜ್‌ಅಲ್‌ನೀ ಮುಖೀಮಸ್ಸಲಾತಿ ವಮಿನ್ ದುರ್‍ರಿಯತೀ ರಬ್ಬನಾ ವ ತಖಬ್ಬಲ್ ದುಆಅ್. ರಬ್ಬನಗ್‌ಫಿರ್‌ಲೀ ವಲಿವಾಲಿದಯ್ಯ ವ**

اغْفِرْ لِيْ وَلِوَالِدَيَّ وَلِلْمُؤْمِنِيْنَ يَوْمَ يَقُوْمُ الْحِسَابُ ۝

ಲಿಲ್‌ಮೂಮಿನೀನ ಯೌಮ ಯಖೂಮುಲ್ ಹಿಸಾಬ್

**ಅರ್ಥ:** ಓ ನನ್ನ ಪ್ರಭೂ, ನನ್ನನ್ನೂ ನನ್ನ ಸಂತಾನಗಳನ್ನೂ ನಮಾಝುನ್ನು ನೆಲೆನಿಲ್ಲಿಸುವವರನ್ನಾಗಿ ಮಾಡು. ಓ ನಮ್ಮ ಪ್ರಭೂ, ನೀನು ನನ್ನ ಪ್ರಾರ್ಥನೆ ಸ್ವೀಕರಿಸು. ಓ ನಮ್ಮ ಪ್ರಭೂ, ನನಗೂ ನನ್ನ ತಂದೆ ತಾಯಂದಿರಿಗೂ ಸತ್ಯವಿಶ್ವಾಸಿಗಳಿಗೂ ವಿಚಾರಣೆಯ ದಿವಸ ನೀನು ಕ್ಷಮಾಪಣೆ ನೀಡು.

3. اَللّٰهُمَّ اِنِّيْ اَعُوْذُ بِكَ مِنَ الْهَمِّ وَالْحَزَنِ وَ اَعُوْذُ بِكَ مِنَ الْعَجْزِ وَالْكَسَلِ وَاَعُوْذُ بِكَ مِنَ الْجُبْنِ وَالْبُخْلِ وَ اَعُوْذُ بِكَ مِنْ غَلَبَةِ الدَّيْنِ وَ قَهْرِ الرِّجَالِ اَللّٰهُمَّ اكْفِنِيْ بِحَلَالِكَ عَنْ حَرَامِكَ وَ اَغْنِنِيْ بِفَضْلِكَ عَمَّنْ سِوَاكَ

ಅಲ್ಲಾಹುಮ್ಮ ಇನ್ನೀ ಅಊಧುಬಿಕ ಮಿನಲ್ ಹಮ್ಮಿ ವಲ್ ಹುಝ್‌ನಿ ವ ಅಊಧುಬಿಕ ಮಿನಲ್ ಅಜ್‌ಝಿ ವಲ್ ಕಸ್ಲಿ ವ ಅಊಧುಬಿಕ ಮಿನಲ್ ಜುಬ್‌ನಿ ವಲ್ ಬುಖ್‌ಲಿ ವ ಅಊಧುಬಿಕ ಮಿನ್ ಗಲಬಿತಿದ್ದೈನಿ ವಖಹ್ರಿರ್ರಿಜಾಲಿ. ಅಲ್ಲಾಹುಮ್ಮಅಕ್‌ಫಿನೀ ಬಿ ಹಲಾಲಿಕ ಅನ್ ಹರಾಮಿಕ ವ ಅಗ್‌ನಿನೀ ಬಿ ಫಝ್ಲಿಕ ಅಮ್ಮನ್ ಸಿವಾಕ್

**ಅರ್ಥ:** ಓ ಅಲ್ಲಾಹ್, ಕಷ್ಟ ಮತ್ತು ದುಃಖದಿಂದ ಸಂರಕ್ಷಣೆಯನ್ನು ನಿನ್ನಿಂದ ಯಾಚಿಸುತ್ತೇನೆ. ಬಲಹೀನತೆ ಮತ್ತು ಸೋಮಾರಿತನದಿಂದ ರಕ್ಷಿಸಲ್ಪಡಲು ನಿನ್ನ ಸಹಾಯ ನಾನು ಯಾಚಿಸುತ್ತೇನೆ. ಹೇಡಿತನ ಮತ್ತು ಜಿಪುಣತನದಿಂದ ರಕ್ಷಿಸಲ್ಪಡಲು ನಿನ್ನ ಸಹಾಯ ಯಾಚಿಸುತ್ತೇನೆ. ಸಾಲದ ಆಧಿಕ್ಯದಿಂದ ಮತ್ತು ಜನರ ಧಿಕ್ಕಾರದಿಂದ ರಕ್ಷಿಸಲ್ಪಡಲು ನಾನು ನಿನ್ನಿಂದ ಸಹಾಯ ಯಾಚಿಸುತ್ತೇನೆ. ಓ ಅಲ್ಲಾಹ್, ನೀನು ನ್ಯಾಯಬದ್ಧವಾದುದನ್ನು ನನಗೆ ನೀಡಿ ನಿಷಿದ್ಧವಾದುದರಿಂದ ನನ್ನನ್ನು ರಕ್ಷಿಸು. ನಿನ್ನ ಹೊರತು ಅನ್ಯರ ಆಶ್ರಯ ಆಶಿಸುವುದರಿಂದ ನನ್ನನ್ನು ರಕ್ಷಿಸು.

4. اَللّٰهُمَّ اِنِّيْ اَعُوْذُ بِكَ مِنْ عَذَابِ الْقَبْرِ وَاَعُوْذُ بِكَ مِنْ فِتْنَةِ الْمَحْيَا وَالْمَمَاتِ ۝ اَللّٰهُمَّ اِنِّيْ اَعُوْذُ بِكَ مِنَ الْمَأْثَمِ وَالْمَغْرَمِ

ಅಲ್ಲಾಹುಮ್ಮ ಇನ್ನೀ ಅಊಧುಬಿಕ ಮಿನ್ ಅಧಾಬಿಲ್ ಖಬ್‌ರಿ ವ ಅಊಧುಬಿಕ ಮಿನ್ ಫಿತ್‌ನತಿಲ್ ಮಹ್‌ಯಾ ವಲ್‌ಮಮಾತಿ ಅಲ್ಲಾಹುಮ್ಮ ಇನ್ನೀ ಅಊಧುಬಿಕ ಮಿನಲ್ ಮಅ್‌ಸಮಿ ವಲ್ ಮಗ್‌ರಮಿ

**ಅರ್ಥ:** ಓ ಅಲ್ಲಾಹ್, ಖಬ್‌ರಿನ (ಗೋರಿಯ) ಶಿಕ್ಷೆಯಿಂದ ರಕ್ಷಿಸಲ್ಪಡಲು ನಿನ್ನನ್ನು ನಾನು ಯಾಚಿಸುತ್ತೇನೆ. ಜೀವಿತ ಮತ್ತು ಮರಣದ ಪರೀಕ್ಷೆಗಳಿಂದ ರಕ್ಷಿಸಲ್ಪಡಲು ನಿನ್ನ ಆಶ್ರಯವನ್ನು ನಾನು ಯಾಚಿಸುತ್ತೇನೆ. ಓ ಅಲ್ಲಾಹ್, ಪಾಪ ಮತ್ತು ಸಾಲದಿಂದ ವಿಮುಕ್ತನಾಗಲು ನಾನು ನಿನ್ನ ಆಶ್ರಯವನ್ನು ಯಾಚಿಸುತ್ತೇನೆ.

5. اَللّٰهُمَّ اِنِّيْ ظَلَمْتُ نَفْسِيْ ظُلْمًا كَثِيْرًا وَ لَا يَغْفِرُ الذُّنُوْبَ اِلَّا اَنْتَ فَاغْفِرْ لِيْ مَغْفِرَةً مِّنْ عِنْدِكَ وَارْحَمْنِيْ اِنَّكَ اَنْتَ الْغَفُوْرُ الرَّحِيْمُ

ಅಲ್ಲಾಹುಮ್ಮ ಇನ್ನೀ ಝುಲಮ್ತು ನಫ್ಸೀ ಝುಲ್‌ಮನ್ ಕಸೀರನ್ ವಲಾ ಯಗ್‌ಫಿರುದ್ದುನೂಬ ಇಲ್ಲಾ ಅನ್‌ತ ಫಗ್‌ಫಿರ್‌ಲೀ ಮಗ್‌ಫಿರತನ್ ಮಿನ್ ಇನ್‌ದಿಕ ವರ್‌ಹಮ್‌ನೀ ಇನ್ನಕ ಅನ್‌ತಲ್ ಗಫೂರುರ್ರಹೀಮ್

**ಅರ್ಥ:** ಓ ಅಲ್ಲಾಹ್, ನಾನು ನನ್ನ ಜೀವದ ಮೇಲೆ ಬಹಳ ದೌರ್ಜನ್ಯವೆಸಗಿದೆ. ಪಾಪಗಳಿಗೆ ನಿನ್ನ ಹೊರತು ಬೇರೆ ಯಾರೂ ಕ್ಷಮಾಪಣೆ ನೀಡಲಾರರು. ನೀನು ನಿನ್ನ ಸನ್ನಿಧಾನದಿಂದ ನನ್ನನ್ನು ಸಂಪೂರ್ಣವಾಗಿ ಕ್ಷಮಿಸು ಮತ್ತು ನನ್ನ ಮೇಲೆ ಕರುಣೆದೋರು. ನಿಶ್ಚಯವಾಗಿಯೂ ನೀನು ಬಹಳ ಕ್ಷಮಾಪಣೆ ನೀಡುವವನೂ ಕರುಣಾನಿಧಿಯೂ ಆಗಿರುವೆ.

ಈ ದುಆಗಳಲ್ಲಿ ಒಂದನ್ನು ಅಥವಾ ಎಲ್ಲವನ್ನೂ ಹೇಳಿದ ನಂತರ ಮೊದಲು ಬಲಭಾಗಕ್ಕೆ ಮುಖ ತಿರುಗಿಸಿ **ಅಸ್ಸಲಾಮು ಅಲೈಕುಮ್ ವ ರಹ್ಮತುಲ್ಲಾಹ್** (ನಿಮ್ಮ ಮೇಲೆ ಶಾಂತಿ ಸಮಾಧಾನಗಳು ಮತ್ತು ಅಲ್ಲಾಹನ ಅನುಗ್ರಹಗಳು ಉಂಟಾಗಲಿ) ಎಂದು ಹೇಳಬೇಕು. ನಂತರ ಎಡಭಾಗಕ್ಕೆ ಮುಖ ತಿರುಗಿಸಿ ಅದೇ ರೀತಿ ಹೇಳಬೇಕು.

ನಮಾಝ್ ಎರಡು ರಕ್‌ಅತಿನದ್ದು ಆಗಿದ್ದರೆ ಎರಡನೆಯ ರಕ್‌ಅತಿನಲ್ಲಿ ಅತ್ತಹಿಯ್ಯಾತ್, ದರೂದ್ ಶರೀಫ್, ದುಆ ನಂತರ ಸಲಾಮ್ ಹೇಳಬೇಕು. ನಮಾಝ್ 3 ಅಥವಾ 4 ರಕ್‌ಅತಿನದ್ದಾಗಿದ್ದರೆ ಎರಡನೆಯ ರಕ್‌ಅತಿನಲ್ಲಿ ಅತ್ತಹಿಯ್ಯಾತ್ ಮಾತ್ರ ಓದಿ ಎದ್ದು ನಿಂತು ಮೂರನೆಯ ಮತ್ತು ನಾಲ್ಕನೆಯ ರಕ್‌ಅತ್ ಪೂರ್ಣಗೊಳಿಸಬೇಕು. 3ನೇ ಮತ್ತು 4ನೇ ರಕ್‌ಅತಿನಲ್ಲಿ ಸೂರತುಲ್ ಫಾತಿಹ ಮಾತ್ರ ಓದಿದರೆ ಸಾಕು. ಆದರೆ ವಿತ್‌ರ್ ನಮಾಝಿನಲ್ಲಿಯೂ ಸುನ್ನತ್ ನಮಾಝ್‌ಗಳಲ್ಲಿಯೂ ಮೂರನೆಯ ಮತ್ತು ನಾಲ್ಕನೆಯ ರಕ್‌ಅತ್‌ಗಳಲ್ಲಿ ಸೂರತುಲ್ ಫಾತಿಹದ ನಂತರ ಒಂದು ಸೂರತ್ ಅಥವಾ ಕೆಲವು ಆಯತ್‌ಗಳನ್ನು ಓದಬೇಕು.

## ಫರ್ಝ್ ನಮಾಝ್ ಮಾಡಿದ ಅನಂತರದ ದುಆ

ಫರ್ಝ್ ನಮಾಝ್ ಮಾಡಿದ ನಂತರ 33 ಸಲ **ಸುಬ್‌ಹಾನಲ್ಲಾಹ್**, 33 ಸಲ **ಅಲ್‌ಹಮ್ದುಲಿಲ್ಲಾಹ್** ಮತ್ತು 34 ಸಲ **ಅಲ್ಲಾಹು ಅಕ್‌ಬರ್** ಎಂದು ಹೇಳಬೇಕು. ಆ ಮೇಲೆ ಹೀಗೆ ಹೇಳಬೇಕು:

لَا إِلٰهَ إِلَّا اللّٰهُ وَحْدَهُ لَا شَرِيْكَ لَهُ لَهُ الْمُلْكُ
وَلَهُ الْحَمْدُ وَهُوَ عَلٰى كُلِّ شَيْءٍ قَدِيْرٌ۔

ಲಾ ಇಲಾಹ ಇಲ್ಲಲ್ಲಾಹು ವಹ್‌ದಹೂ ಲಾ ಶರೀಕ ಲಹೂ ಲಹುಲ್‌ಮುಲ್‌ಕು ವಲಹುಲ್ ಹಮ್ದು ವ ಹುವ ಅಲಾ ಕುಲ್ಲಿ ಶೈಯಿನ್ ಖದೀರ್

**ಅರ್ಥ:** ಅಲ್ಲಾಹನ ಹೊರತು ಅನ್ಯ ದೇವನಿಲ್ಲ. ಅವನು ಏಕನೂ ಸರಿಸಾಟಿ ಇಲ್ಲದವನೂ ಆಗಿರುವನು. ಎಲ್ಲಾ ಅಧಿಕಾರ ಮತ್ತು ಸ್ತುತಿ ಅವನಿಗೆ ಸೇರಿವೆ. ಅವನು ತಾನು ಉದ್ದೇಶಿಸಿದ ಎಲ್ಲಾ ಸಂಗತಿಗಳನ್ನು ಈಡೇರಿಸಲು ಸಮರ್ಥನಾಗಿದ್ದಾನೆ.

ಅನಂತರ ಈ ಕೆಳಗಿನ ದುಆಗಳಲ್ಲಿ ಒಂದನ್ನು ಅಥವಾ ಎಲ್ಲವನ್ನೂ ಮಾಡಬಹುದು:

1. اَللّٰهُمَّ اَنْتَ السَّلَامُ وَمِنْكَ السَّلَامُ وَاِلَيْكَ يَرْجِعُ السَّلَامُ تَبَارَكْتَ رَبَّنَا وَتَعَالَيْتَ يَا ذَا الْجَلَالِ وَالْاِكْرَامِ

ಅಲ್ಲಾಹಮ್ಮ ಅನ್‌ತಸ್ಸಲಾಮ್ ವಮಿನ್‌ಕಸ್ಸಲಾಮ್ ವ ಇಲೈಕ ಯರ್‌ಜಿವುಸ್ಸಲಾಮ್ ತಬಾರಕ್ತ ರಬ್ಬನಾ ವ ತಆಲೈತ ಯಾ ಧಲ್‌ಜಲಾಲ್ ವಲ್ ಇಕ್ರಾಮ್

**ಅರ್ಥ:** ಓ ಅಲ್ಲಾಹ್, ನೀನು ರಕ್ಷಕನಾಗಿರುವೆ. ಎಲ್ಲಾ ಸಂರಕ್ಷಣೆ ನಿನ್ನಿಂದಲೇ ನೀಡಲ್ಪಡುವುದು ಮತ್ತು ರಕ್ಷಣೆ ನಿನ್ನ ಕಡೆಗೆಯೇ ಮರಳುವುದು. ಮಹಾಮಹಿಮೆಯ ಮತ್ತು ಸರ್ವ ವಿಧದ ಗೌರವಗಳ ಒಡೆಯನಾದ ನಮ್ಮ ಪ್ರಭೂ, ನೀನು ಗಣಿಸಲಾಗದ ಅನುಗ್ರಹಗಳ ಒಡೆಯನೂ ಅತ್ಯುನ್ನತನೂ ಆಗಿರುವೆ.

2. اَللّٰهُمَّ اَعِنِّيْ عَلٰى ذِكْرِكَ وَشُكْرِكَ وَحُسْنِ عِبَادَتِكَ

ಅಲ್ಲಾಹುಮ್ಮ ಅಇನ್ನೀ ಅಲಾಧಿಕ್ರಿಕ ವ ಶುಕ್ರಿಕ ಹುಸ್‌ನಿ ಇಬಾದತಿಕ

**ಅರ್ಥ:** ಓ ಅಲ್ಲಾಹ್, ನಿನ್ನನ್ನು ಸ್ಮರಿಸಲು, ನಿನಗೆ ಕೃತಜ್ಞತೆ ಅರ್ಪಿಸಲು ಮತ್ತು ನಿನ್ನನ್ನು ಚೆನ್ನಾಗಿ ಆರಾಧಿಸಲು ನನಗೆ ನೀನು ಸಹಾಯ ನೀಡು.

3. اَللّٰهُمَّ لَا مَانِعَ لِمَا اَعْطَيْتَ وَلَا مُعْطِيَ لِمَا
مَنَعْتَ وَلَا يَنْفَعُ ذَا الْجَدِّ مِنْكَ الْجَدُّ۔

ಅಲ್ಲಾಹುಮ್ಮ ಲಾ ಮಾನಿಅ ಲಿಮಾ ಅಅ್‌ತೈತ ವಲಾ ಮುಅ್‌ತೀ ಲಿಮಾ ಮನ್‌ಅ್‌ತ ವಲಾ ಯನ್‌ಫಉ ಧಲ್‌ಜದ್ದಿ ಮಿನ್‌ಕಲ್‌ಜದ್ದು

**ಅರ್ಥ:** ಓ ಅಲ್ಲಾಹ್, ನೀನು ನೀಡಿರುವುದನ್ನು ತಡೆಯುವವನು ಯಾರೂ ಇಲ್ಲ. ನೀನು ತಡೆದಿಟ್ಟುದನ್ನು ಕೊಡುವವನೂ ಯಾರೂ ಇಲ್ಲ. ದೊಡ್ಡಸ್ತಿಕೆಯುಳ್ಳವನಿಗೆ ಅವನ ದೊಡ್ಡಸ್ತಿಕೆ ನಿನ್ನ ಮುಂದೆ ಪ್ರಯೋಜನಕ್ಕೆ ಬರಲಾರದು.

4. **ಆಯತುಲ್ ಕುರ್‌ಸೀ:**

اَللّٰهُ لَآ اِلٰهَ اِلَّا هُوَ، اَلْحَيُّ الْقَيُّوْمُ، لَا
تَاْخُذُهٗ سِنَةٌ وَّلَا نَوْمٌ، لَهٗ مَا فِي السَّمٰوٰتِ
وَمَا فِي الْاَرْضِ، مَنْ ذَا الَّذِيْ يَشْفَعُ عِنْدَهٗٓ
اِلَّا بِاِذْنِهٖ، يَعْلَمُ مَا بَيْنَ اَيْدِيْهِمْ وَمَا
خَلْفَهُمْ، وَلَا يُحِيْطُوْنَ بِشَيْءٍ مِّنْ عِلْمِهٖٓ
اِلَّا بِمَا شَآءَ، وَسِعَ كُرْسِيُّهُ السَّمٰوٰتِ
وَالْاَرْضَ، وَلَا يَئُوْدُهٗ حِفْظُهُمَا، وَهُوَ الْعَلِيُّ
الْعَظِيْمُ۝

ಅಲ್ಲಾಹು ಲಾ ಇಲಾಹ ಇಲ್ಲಾ ಹೂವಲ್ ಹಯ್ಯುಲ್ ಖಯ್ಯೂಮ್ ಲಾ ತಅ್‌ಖುಧುಹೂ ಸಿನತುನ್ ವಲಾ ನೌಮ್. ಲಹೂ ಮಾ ಫಿಸ್ಸಮಾವಾತಿ ವ ಮಾಫಿಲ್ ಅರ್ಝಿ ಮನ್ ಧಲ್ಲಧೀ ಯಶ್‌ಫಉ ಇನ್‌ದಹೂ ಇಲ್ಲಾ ಬಿಇಧ್‌ನಿಹೀ ಯಅ್‌ಲಮು ಮಾ ಬೈನ ಐದೀಹಿಮ್ ವಮಾ ಖಲ್‌ಫಹುಮ್ ವಲಾ ಯುಹೀತೂನ ಬಿಶೈಇನ್ ಮಿನ್ ಇಲ್ಮಿಹೀ ಇಲ್ಲಾ ಬಿಮಾಶಾಅ ವಸಿಅ ಕುರ್‌ಸಿಯ್ಯುಹುಸ್ಸಮಾವಾತಿ ವಲ್ ಅರ್‌ಝು ವಲಾ ಯಊದುಹೂ ಹಿಫ್‌ಝುಹುಮಾ ವ ಹುವಲ್ ಅಲಿಯ್ಯುಲ್ ಅಝೀಮ್

**ಅರ್ಥ:** ಅಲ್ಲಾಹನ ಹೊರತು ಅನ್ಯ ದೇವನಿಲ್ಲ. ಅವನೇ ಸದಾ ಜೀವಂತನಾಗಿರುವವನೂ ಸದಾ ನೆಲೆನಿಲ್ಲುವವನೂ ಆಗಿರುವನು. ಅವನಿಗೆ ತೂಕಡಿಕೆಯಾಗಲೀ ನಿದ್ರೆಯಾಗಲೀ ಬರುವುದಿಲ್ಲ. ಆಕಾಶಗಳಲ್ಲಿಯೂ ಭೂಮಿಯಲ್ಲಿಯೂ ಇರುವುದೆಲ್ಲವೂ ಅವನಿಗೆ ಸೇರಿವೆ. ಅವನ ಸನ್ನಿಧಿಯಲ್ಲಿ ಅವನ ಅನುಮತಿ ಇಲ್ಲದೆ ಶಿಫಾರಸು ಮಾಡುವವರು ಯಾರಿದ್ದಾರೆ? ಹಿಂದೆ ನಡೆದುದು ಮತ್ತು ಮುಂದೆ ನಡೆಯಲಿರುವುದನ್ನು ಅವನು ಅರಿತಿದ್ದಾನೆ. ಅವನು ಇಚ್ಛಿಸದೆ ಯಾರೂ ಅವನ ಜ್ಞಾನದ ಒಂದು ಅಂಶವನ್ನೂ ಗಳಿಸಲಾರನು. ಅವನ ಅಧಿಕಾರ ಆಕಾಶಗಳನ್ನೂ ಭೂಮಿಯನ್ನೂ ವ್ಯಾಪಿಸಿದೆ. ಅವುಗಳ ಸಂರಕ್ಷಣೆ ಅವನನ್ನು ದಣಿಯುವಂತೆ ಮಾಡುವುದಿಲ್ಲ. ಅವನು ಉನ್ನತನೂ ಮಹಿಮೆಯುಳ್ಳವನೂ ಆಗಿರುವನು.

# ಪ್ರತಿ ಕ್ರಿಯೆ

## ಇಸ್ಲಾಮ್‌ನಲ್ಲಿ ಪರ್ದಾ ಸಂಪ್ರದಾಯ

"ಕನ್ನಡ ಪ್ರಭ"ದ ಫೆಬ್ರವರಿ 28ರ ಸಾಪ್ತಾಹಿಕ ಪ್ರಭದಲ್ಲಿ "ಪರ್ದಾ ಹೈ ಪರ್ದಾ" ಎಂಬ ಲೇಖನ (ಇಂಗ್ಲಿಷ್ ಮೂಲ: ತಸ್ಲಿಮಾ ನಸ್ರೀನ್. ಕನ್ನಡಕ್ಕೆ: ಸಿಂಧು) ಪ್ರಕಟವಾದುದರ ವಿರುದ್ಧವಾಗಿ ಕರ್ನಾಟಕದ ಕೆಲವೆಡೆ ಮತ್ತು ಶಿವಮೊಗ್ಗದಲ್ಲಿ ಬಹಳ ತೀವ್ರವಾಗಿ ನಡೆದ ಪ್ರತಿಭಟನೆಯ ಪರಿಣಾಮವಾಗಿ ಅನೇಕ ಆಸ್ತಿಪಾಸ್ತಿ ನಾಶವಾದವು. ಎರಡು ಮಾನವ ಜೀವಗಳು ಆಹುತಿಯಾದವು. ಕನ್ನಡ ಪತ್ರಿಕೆಗೆ ತಾನು ಲೇಖನವನ್ನೇ ಬರೆದಿಲ್ಲವೆಂದು ಹೇಳಿಕೆ ಕೊಟ್ಟು ತಸ್ಲಿಮಾ ನಸ್ರೀನ್ ತನ್ನ 'ಬುದ್ಧಿವಂತಿಕೆ'ಯನ್ನು ಪ್ರದರ್ಶಿಸಿದ್ದಾರೆ.

ತಸ್ಲೀಮಾ ಒಂದು ಮುಸ್ಲಿಂ ಕುಟುಂಬದಲ್ಲಿ ಜನಿಸಿದ್ದಾರೆ ಹೊರತು ಆಕೆಗೆ ಇಸ್ಲಾಂ ಧರ್ಮದೊಂದಿಗೆ ಏನೂ ಸಂಬಂಧವಿಲ್ಲ. ಆಕೆ ಇಸ್ಲಾಂ ವಿರೋಧಿ ಮಾತ್ರವಲ್ಲ, ಧರ್ಮ ವಿರೋಧಿಯೂ ಹೌದು. ಇಸ್ಲಾಂ ಧರ್ಮದ ಕುರಿತು ಅರ್ಧಂಬರ್ಧ ತಿಳಿದು ಕೊಂಡ ಆಕೆ ಖುರ್‌ಆನಿನ ವಚನಗಳ ಸರಿಯಾದ ಅರ್ಥವನ್ನಾಗಲಿ ಅಧ್ಯಾಯದ ಸರಿಯಾದ ಹೆಸರನ್ನಾಗಲಿ ಬರೆಯಲಿಲ್ಲ. ಆಕೆ ಬರೆದ "ಅಲ್ ಹಿಜಾಬ್" ಎಂಬ ಆಧ್ಯಾಯವೇ ಖುರ್‌ಆನಿನಲ್ಲಿಲ್ಲ. ಪರ್ದಾ ಹೇಗೆ ಆರಂಭವಾಯಿತೆಂಬ ವಿಚಾರದಲ್ಲಿ ಯಾರೋ ಬರೆದ ಕೆಲವು ನಿರಾಧಾರ ಸುಳ್ಳುಕತೆಗಳನ್ನು ಆಕೆ ನಕಲು ಮಾಡಿದ್ದಾರೆ.

ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಆವಿರ್ಭಾವಕ್ಕೆ ಮುಂಚೆ ಎಲ್ಲೆಡೆಗಳಲ್ಲಿ ಸ್ತ್ರೀಯರ ಅವಸ್ಥೆ ತುಂಬಾ ಶೋಚನೀಯ ವಾಗಿತ್ತು. ಸ್ತ್ರೀಯರನ್ನು ಕೇವಲ ಗುಲಾಮರಂತೆ ಮತ್ತು ಚರಸೊತ್ತುಗಳಂತೆ ಕಾಣಲಾಗುತ್ತಿತ್ತು. ಸ್ತ್ರೀಗೆ ಸ್ವಾತಂತ್ರ್ಯವಿರಲಿಲ್ಲ. ಅವಳಿಗೆ ಆಸ್ತಿಯಲ್ಲಿ ಹಕ್ಕಿರಲಿಲ್ಲ. ವಿವಾಹದ ನಂತರ ಅವಳು ಗಂಡನ ಸೊತ್ತಾಗುತ್ತಿದ್ದಳು. ಅವನಿಂದ ಯಾವ ರೀತಿಯಲ್ಲೂ ಬೇರ್ಪಡಲು ಅವಳಿಗೆ ಸಾಧ್ಯವಿರಲಿಲ್ಲ. ಇಷ್ಟ ಬಂದಾಗ ಗಂಡ ಅವಳನ್ನು ತ್ಯಜಿಸಬಹುದು. ಆದರೆ ಎಂತಹ ದಾರುಣ ಪರಿಸ್ಥಿತಿಯಲ್ಲಿದ್ದರೂ ಗಂಡನಿಂದ ವಿಚ್ಛೇದನ ಪಡೆಯಲು ಸ್ತ್ರೀಗೆ ಸ್ವಾತಂತ್ರ್ಯವಿರಲಿಲ್ಲ. ಪುರುಷ ಎಷ್ಟು ಬೇಕಾದರೂ ಮದುವೆಯಾಗಬಹುದಿತ್ತು. ಹೆಣ್ಣು ಮಕ್ಕಳನ್ನು ಜೀವಂತ ಹೂಳುತ್ತಿದ್ದರು. ಧರ್ಮದಲ್ಲಿ ಮಹಿಳೆಗೆ ಯಾವ ಸ್ಥಾನವೂ ಇರಲಿಲ್ಲ. ಆಧ್ಯಾತ್ಮಿಕಾನುಗ್ರಹಗಳಲ್ಲೂ ಅವಳಿಗೆ ಪಾಲು ಸಿಗುತ್ತಿರಲಿಲ್ಲ.

ಹಝ್ರತ್ ಪೈಗಂಬರರ(ಸ) ಆವಿರ್ಭಾವದ ನಂತರ ಸ್ತ್ರೀಯರ ಮೇಲಿನ ಅನ್ಯಾಯಗಳು ನಿವಾರಿಸಲ್ಪಟ್ಟವು. ಮಾನವೀಯತೆ ಆಧಾರದಲ್ಲಿ ಸ್ತ್ರೀ-ಪುರುಷರ ಮಧ್ಯೆ ವ್ಯತ್ಯಾಸವಿಲ್ಲವೆಂದೂ ಪುರುಷನಿಗೆ ಸ್ತ್ರೀಯ ಮೇಲೆ ಹಕ್ಕುಗಳಿರುವಂತೆ ಸ್ತ್ರೀಗೆ ಪುರುಷನ ಮೇಲೆ ಸಹ ಹಕ್ಕುಗಳಿವೆ ಎಂದು ಅವರು ಘೋಷಿಸಿದರು. ಇಸ್ಲಾಂ ಸ್ತ್ರೀಗೆ ವಾರೀಸು ಹಕ್ಕನ್ನು ನೀಡಿತು. ಆಧ್ಯಾತ್ಮಿಕವಾಗಿ ಪ್ರಗತಿಹೊಂದಲು ಸ್ವಾತಂತ್ರ್ಯ ನೀಡಿತು. ಮಕ್ಕಳ ಪಾಲನೆ ಪೋಷಣೆ ವಿಚಾರದಲ್ಲಿ ಸ್ತ್ರೀಯ ಸಲಹೆ-ಸಮಾಲೋಚನೆಗಳಿಗೆ ಮಾನ್ಯತೆ ನೀಡಿತು. ಹೀಗೆ ಇಸ್ಲಾಂ ಧರ್ಮ ಮೂಲಕ ಮಹಿಳೆ ಹೀನಾಯ ಸ್ಥಿತಿಯಿಂದ ಉತ್ತಮ ಸ್ಥಿತಿ ಪಡೆಯುವಂತಾಯಿತು.

ಸ್ತ್ರೀಯರನ್ನು ಮದುವೆಯಾಗುವುದಕ್ಕೂ ವಿವಾಹ ವಿಚ್ಛೇದನ ಮಾಡುವುದಕ್ಕೂ ನಿಯಮಗಳು ರೂಪಗೊಂಡವು. ವಿಧವೆಯರ ಮರುಮದುವೆಗೂ ಪಾಲನೆ ಪೋಷಣೆಗೂ ಗುಲಾಮ ಸ್ತ್ರೀಯರ ಬಿಡುಗಡೆಗೂ ತುಂಬಾ ಒತ್ತುಕೊಡಲಾಯಿತು. ಇಸ್ಲಾಮಿಗೆ ಪೂರ್ವದಲ್ಲಿ ಯಾವ ಧರ್ಮದಲ್ಲೂ ಸ್ತ್ರೀಯರಿಗೆ ಇಲ್ಲದ ಹಕ್ಕುಗಳನ್ನು ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಮೂಲಕ ಒದಗಿಸಲ್ಪಟ್ಟು ಅವರು ಸ್ತ್ರೀಯರ ವಿಮೋಚಕ ಎಂಬ ಕೀರ್ತಿಗೆ ಪಾತ್ರರಾದರು.

ಇಸ್ಲಾಂ ಧರ್ಮದಲ್ಲಿ ಸ್ತ್ರೀ-ಪುರುಷರ ಚಾರಿತ್ರ್ಯಶುದ್ಧಿಗೆ ಬಹಳ ಒತ್ತುನೀಡಲಾಗಿದೆ. ಪಾಪಕರ ವಿಚಾರಗಳು ಹೃದಯವನ್ನು ಪ್ರವೇಶಿಸಲು ಎಡೆಕೊಡುವ ಮಾರ್ಗಗಳ ಪೈಕಿ ಒಂದು, ಕಣ್ಣಾಗಿದೆ. ಆದುದರಿಂದ ವಿಶ್ವಾಸಿಗಳಾದ ಸ್ತ್ರೀಯರು ಮಾತ್ರವಲ್ಲ, ಪುರುಷರು ಸಹ ತಮ್ಮ ನೋಟವನ್ನು ಹತೋಟಿಯಲ್ಲಿಡಬೇಕೆಂದು ಇಸ್ಲಾಂ ಕಲಿಸುತ್ತದೆ. ಪವಿತ್ರ ಖುರ್‌ಆನಿನಲ್ಲಿ ಮೊದಲು ಪುರುಷರೊಡನೆ ತಮ್ಮ ದೃಷ್ಟಿಯನ್ನು ಕೆಳಮುಖವಾಗಿಡಬೇಕೆಂದು ಆದೇಶಿಸಿ ನಂತರದ ವಚನದಲ್ಲಿ ಸ್ತ್ರೀಯರೊಡನೆ ತಮ್ಮ ದೃಷ್ಟಿಯನ್ನು ಕೆಳಮುಖವಾಗಿರಿಸಬೇಕೆಂದು ಆಜ್ಞಾಪಿಸಲಾಗಿದೆ.

ಶಾರೀರಿಕವಾಗಿ ಸ್ತ್ರೀ ಮತ್ತು ಪುರುಷ ಸಮಾನರಲ್ಲವೆಂಬುದು ಎಲ್ಲರಿಗೂ ತಿಳಿದಿರುವ ವಿಚಾರವಾಗಿದೆ. ಸ್ತ್ರೀಯರಿಗೆ ಸದಾ ಸುರಕ್ಷೆ ಮತ್ತು ಭದ್ರತೆ ಅಗತ್ಯ. ನಿಸರ್ಗ ಸಹಜವಾದ ಇಸ್ಲಾಂ ಧರ್ಮ ಮನುಷ್ಯ ಸ್ವಭಾವವನ್ನು ಗುರುತಿಸಿಕೊಂಡು ಪರ್ದಾ ಅಥವಾ ಹಿಜಾಬ್ ಮೂಲಕ ಸ್ತ್ರೀಗೆ ರಕ್ಷಣೆ ನೀಡಿದೆ. ಪರ್ದಾ ಸ್ತ್ರೀಗೆ ರಕ್ಷಾ ಕವಚವಾಗಿದೆ. ಪರ್ದಾ ಸಂಪ್ರದಾಯ ಸದಾಚಾರ ಪರವಾದ ಸುಧಾರಣೆಗಿರುವ ಕ್ರಮವಾಗಿದೆ. ಪರ್ದಾ, ಸ್ತ್ರೀಯ ಸ್ವಾತಂತ್ರ್ಯವನ್ನು ಕಸಿಯುವುದಿಲ್ಲ. ಯಾವ ಮುಸ್ಲಿಂ ವಿಶ್ವಾಸಿ ಮಹಿಳೆಯಾಗಲಿ ಅದು ತನ್ನ ಸ್ವಾತಂತ್ರ್ಯಕ್ಕೆ ಕುಂದೆಂದು ಭಾವಿಸುವುದಿಲ್ಲ. ಹಾಗೆ ಭಾವಿಸುವ ತಸ್ಲೀಮಾರಂತಹ ಬೆರಳೆಣಿಕೆಯ ಸ್ತ್ರೀಯರು ಇರಬಹುದು.

ಖುರ್‌ಆನಿನಲ್ಲಿ ಹೇಳಲಾದ ಪರ್ದಾ ವ್ಯವಸ್ಥೆಯ ಉದ್ದೇಶ ಸ್ತ್ರೀಯರನ್ನು ಕೈದಿಗಳಂತೆ ಮನೆಯೊಳಗಿರಿಸಬೇಕೆಂದಲ್ಲ. ಅದು ಇಸ್ಲಾಮಿಕ ಅಧ್ಯಾಪನೆಗಳ ಕುರಿತು ಅರಿವಿಲ್ಲದ ಅಜ್ಞರ ಅಭಿಪ್ರಾಯವಾಗಿದೆ. ಇಸ್ಲಾಂ ನಿರ್ದೇಶಿಸುವ ಪರ್ದಾ ಪದ್ಧತಿಯ ಉದ್ದೇಶ ಸ್ತ್ರೀ-ಪುರುಷರ ಸ್ವಚ್ಛಂದವಾದ ಪರಸ್ಪರ ವೀಕ್ಷಣೆ ಮತ್ತು ಸೌಂದರ್ಯ ಪ್ರದರ್ಶನವನ್ನು ತಡೆಯುವುದಾಗಿದೆ. ಈ

ಮುಸ್ಲಿಂ ಮಹಿಳೆಯರು ಮನೆಯೊಳಗೆ ನಾಲ್ಕು ಗೋಡೆಗಳ ಮಧ್ಯೆ ಅಡಗಿರಬೇಕೆಂದು ಇಸ್ಲಾಂ ಕಲಿಸುವುದಿಲ್ಲ. ಇಸ್ಲಾಂ ಧರ್ಮದ ಪ್ರಾರಂಭದಲ್ಲಿ ಮುಸ್ಲಿಂ ಸ್ತ್ರೀಯರು ಹಾಗೆ ವರ್ತಿಸಲಿಲ್ಲ. ಅವರು ಪುರುಷರೊಂದಿಗೆ ಯುದ್ಧಕಣಕ್ಕೆ ಹೋಗುತ್ತಿದ್ದರು. ಗಾಯಗೊಂಡವರಿಗೂ ರೋಗಿಗಳಿಗೂ ಶುಶ್ರೂಷೆ ಮಾಡುತ್ತಿದ್ದರು. ಸವಾರಿ ಮಾಡುತ್ತಿದ್ದರು. ಪುರುಷರಿಂದ ಕಲೆ, ವಿಜ್ಞಾನಗಳನ್ನು ಕಲಿಯುತ್ತಿದ್ದರು. ಇತರ ಪುರುಷರಿಗೆ ಅದನ್ನು ಕಲಿಸುತ್ತಿದ್ದರು.

ಆಧುನಿಕ ಕಾಲದಲ್ಲಿ ಸಹ ಪರ್ದಾ ಧರಿಸಿ ಮುಸ್ಲಿಂ ಸ್ತ್ರೀಯರು ಆಕ್ಸ್‌ಫರ್ಡ್‌ನಂತಹ ಯುನಿವರ್ಸಿಟಿಯಲ್ಲಿ ಉನ್ನತ ಪದವಿ ಪಡೆದ ಉದಾಹರಣೆಗಳಿವೆ. ಹಾಗೆಯೇ ಪರ್ದಾ ಧರಿಸಿ ವಿಶ್ವಸಂಸ್ಥೆಯ ಅಂಗಸಂಸ್ಥೆಗಳಲ್ಲಿ ಸೇವೆಸಲ್ಲಿಸುತ್ತಿರುವ ಮುಸ್ಲಿಂ ಮಹಿಳೆಯರಿದ್ದಾರೆ. ವೈದ್ಯಕೀಯ ಮತ್ತು ಶೈಕ್ಷಣಿಕ ಕ್ಷೇತ್ರಗಳಲ್ಲಿ ಪರ್ದಾ ಧರಿಸಿ ದುಡಿಯುವ ಸಾವಿರಾರು ಮುಸ್ಲಿಂ ಮಹಿಳೆಯರಿದ್ದಾರೆ.

ಮುಸ್ಲಿಂ ಸ್ತ್ರೀಯರು ಮಸೀದಿಗೆ ಹೋಗಿ ನಮಾಝ್ ಮಾಡಬಾರದೆಂದು ಇಸ್ಲಾಂ ಧರ್ಮ ಹೇಳುವುದಿಲ್ಲ. ಹಝ್ರತ್ ಪೈಗಂಬರರ(ಸ) ಕಾಲದಲ್ಲಿ ಮಹಿಳೆಯರು ಮಸೀದಿಗೆ ಹೋಗಿ ನಮಾಝ್ ಮಾಡುತ್ತಿದ್ದರು. ಮಕ್ಕದಲ್ಲಿರುವ ಪವಿತ್ರ ಮಸೀದಿ ಮಸ್‌ಜಿದುಲ್ ಹರಾಮ್, ಮದೀನದಲ್ಲಿರುವ ಪೈಗಂಬರರ ಮಸೀದಿ ಮಸ್‌ಜಿದುನ್ನಬವಿ ಮತ್ತು ಇನ್ನಿತರ ಮಸೀದಿಗಳಲ್ಲಿ ಮಹಿಳೆಯರು ನಮಾಝ್ ಮಾಡುತ್ತಾರೆ. ಭಾರತ, ಪಾಕಿಸ್ತಾನ, ಬಾಂಗ್ಲಾದೇಶ ಮತ್ತು ಲೋಕದ ಅನೇಕ ದೇಶಗಳಲ್ಲಿ ಮಹಿಳೆಯರು ಮಸೀದಿಗೆ ಹೋಗಿ ನಮಾಝ್ ಮಾಡುತ್ತಾರೆ.

ಪರ್ದಾ ಅಥವಾ ಹಿಜಾಬ್ ಸ್ತ್ರೀಯರಿಗೆ ಗೌರವ ನೀಡುತ್ತದೆ. ಅದು ಅವರಿಗೆ ಅಪಮಾನಕರವಲ್ಲ. ಮೈಮುಚ್ಚುವ ಪೋಷಾಕನ್ನು ಓರ್ವ ಕ್ರಿಸ್ತೀಯ ಸನ್ಯಾಸಿನಿ ಧರಿಸಿದರೆ ಅದು ಗೌರವದ ಸಂಕೇತವಾಗಿದ್ದರೆ, ಅಂತಹ ಉಡುಪನ್ನು ಓರ್ವ ಮುಸ್ಲಿಂ ಮಹಿಳೆ ಧರಿಸಿದರೆ ಅದು ಅನಾಗರಿಕತೆಯ ಚಿಹ್ನೆಯಾಗುವುದು ಹೇಗೆ? ಅದು ತಸ್ಲೀಮಾರಂತಹವರ ದೃಷ್ಟಿಯ ದೋಷ ಮತ್ತು ಮೆದುಳಿಗೆ ಅಂಟಿದ ರೋಗವಲ್ಲವೇ?

ತಸ್ಲೀಮಾ ನೀಡಿದ ಕರೆಗೆ ಓಗೊಟ್ಟು ಯಾವ ವಿಶ್ವಾಸಿ ಮುಸ್ಲಿಂ ಮಹಿಳೆಯಾಗಲಿ ಪರ್ದಾ ಅಥವಾ ಹಿಜಾಬನ್ನು ಕಿತ್ತೆಸೆಯಲಾರಳು; ಖಂಡಿತ. ಕಾರಣವೇನೆಂದರೆ ಅದು ಅವಳ ಮಾನ ಕಾಪಾಡುವ ಕವಚವೆಂದು ಅವಳು ತಿಳಿದುಕೊಂಡಿದ್ದಾಳೆ.

**– ಮುಹಮ್ಮದ್ ಯೂಸುಫ್**

## ಪ್ರತಿ ಸಮುದಾಯದಲ್ಲೂ ದೇವ ಸಂದೇಶವಾಹಕರು

ನವೆಂಬರ್ 8ರ ಉದಯವಾಣಿ **ವಾರ್ತಾ ಸಮುಚ್ಚಯ**ದಲ್ಲಿ ಆರೆಸ್ಸೆಸ್ ಮಾಜಿ ಅಧ್ಯಕ್ಷ ಕೆ.ಸಿ. ಸುದರ್ಶನ್ ಅವರ ಹೇಳಿಕೆಯನ್ನು* ಓದಿದೆ. ರಾಮ ಹಾಗೂ ಕೃಷ್ಣರನ್ನು ದೇವರ ಸಂದೇಶವಾಹಕರು ಎಂದು ಮುಸ್ಲಿಮರು ಒಪ್ಪಿಕೊಂಡಲ್ಲಿ ಹಿಂದೂ ಹಾಗೂ ಮುಸ್ಲಿಮರ ನಡುವಣ ಭಿನ್ನಾಭಿಪ್ರಾಯ ಬಗೆಹರಿಯುತ್ತದೆ' ಎಂದು ಅವರು ಹೇಳಿದ್ದಾರೆ.

ಮುಸ್ಲಿಮರ ಪವಿತ್ರ ಗ್ರಂಥವಾದ ಖುರ್‌ಆನ್‌ನಲ್ಲಿ ಹೀಗೆ ಹೇಳಲಾಗಿದೆ: 'ಪ್ರತಿಯೊಂದು ಸಮುದಾಯಕ್ಕೂ ಒಬ್ಬೊಬ್ಬ ಪ್ರವಾದಿ ಇದ್ದಾರೆ' (ಅಧ್ಯಾಯ 10, ವಚನ 47). "ಪ್ರತಿಯೊಂದು ಜನಾಂಗಕ್ಕೂ (ದೇವರ ಕಡೆಯಿಂದ) ಒಬ್ಬ ಮಾರ್ಗದರ್ಶಕ ನಿಯೋಜಿಸಲ್ಪಟ್ಟಿದ್ದಾನೆ. (13:7) "ನಾವು ಪ್ರತಿಯೊಂದು ಸಮುದಾಯದಲ್ಲೂ ಸಂದೇಶ ವಾಹಕನನ್ನು ನಿಯೋಜಿಸಿದ್ದೇವೆ.' (16:36)

"ಜಗದೊಡೆಯನು 1 ಲಕ್ಷ 24 ಸಾವಿರ ಸಂದೇಶವಾಹಕರನ್ನು ಕಳುಹಿಸಿದ್ದಾನೆ" ಎಂದು ಹಝ್ರತ್ ಮುಹಮ್ಮದ್ ಪೈಗಂಬರ್ ನುಡಿದ್ದಾರೆಂದು ಹದೀಸ್ ಗ್ರಂಥದಲ್ಲಿ ಉಲ್ಲೇಖಿಸಲ್ಪಟ್ಟಿದೆ.

ಈ ಮೇಲಿನ ಖುರ್‌ಆನ್ ವಚನಗಳು ಮತ್ತು ಪೈಗಂಬರ್ ನುಡಿಯ ಆಧಾರದಲ್ಲಿ ಅಹ್ಮದಿಯಾ ಮುಸ್ಲಿಂ ಸಂಘಟನೆಯ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಅವರು ಸುಮಾರು 120 ವರ್ಷಗಳ ಮೊದಲೇ, ಭಾರತದಲ್ಲಿ ಜನ್ಮತಾಳಿದ ಶ್ರೀಕೃಷ್ಣ, ಶ್ರೀರಾಮ, ಶ್ರೀ ಬುದ್ಧ, ಹಾಗೆಯೇ ಪರ್ಶಿಯಾದ ಝೊರಾಸ್ಟರ್, ಚೀನದ ಕನ್‌ಫ್ಯೂಶಿಯಸ್ ಮೊದಲಾದ ಮಹಾತ್ಮರನ್ನು ದೇವ ಸಂದೇಶವಾಹಕರೆಂದು ಸಾರಿದ್ದಾರೆ. ಅವರು ಬೋಧಿಸಿದ ಪ್ರಕಾರ ಎಲ್ಲ ಅಹ್ಮದೀ ಮುಸ್ಲಿಮರು ಇವರನ್ನೆಲ್ಲ ದೇವ ಸಂದೇಶವಾಹಕರೆಂದು ನಂಬಿ ಗೌರವಿಸುತ್ತಾರೆ.

ಸುಮಾರು ನೂರು ವರ್ಷಗಳ ಮೊದಲು 1908ರಲ್ಲಿ 'ಪೈಗಾಮೆ ಸುಲ್ಹ್' (ಮೈತ್ರಿ ಸಂದೇಶ) ಎಂಬ ಕೃತಿಯಲ್ಲಿ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಅವರು ಹಿಂದೂ ಮತ್ತು ಮುಸ್ಲಿಮರು ಮೈತ್ರಿಯಿಂದ ಬಾಳಬೇಕಾದರೆ ಪರಸ್ಪರ ಧರ್ಮಗ್ರಂಥಗಳನ್ನೂ ಮತಾಚಾರ್ಯರನ್ನೂ ಪ್ರವಾದಿಗಳನ್ನೂ ಹೃತ್ಪೂರ್ವಕವಾಗಿ ಗೌರವಿಸಬೇಕೆಂದು ಉಪದೇಶಿಸಿದ್ದಾರೆ. ಅವರ ಉಪದೇಶ ಇಂದು ಅದೆಷ್ಟು ಪ್ರಸ್ತುತ!

**ಮುಹಮ್ಮದ್ ಯೂಸುಫ್**
**ಕಾರ್ಯದರ್ಶಿ, ಅಹ್ಮದಿಯಾ ಮುಸ್ಲಿಂ ಮಿಶನ್, ಮಂಗಳೂರು**
**(ಉದಯವಾಣಿ, ಮಣಿಪಾಲ 18-12-2009)**

* ನವೆಂಬರ್ 7ರಂದು ಅಯೋಧ್ಯೆಯಲ್ಲಿ ಸಂಘ ಪರಿವಾರದ ಹಿರಿಯ ಕಾರ್ಯಕರ್ತರ ಸಭೆಯಲ್ಲಿ ಕೊಟ್ಟ ಹೇಳಿಕೆ.

* (ಈ ಪತ್ರ ಅಲ್ಪಸ್ವಲ್ಪ ವ್ಯತ್ಯಾಸದೊಂದಿಗೆ 9-12-2009ರ **"ಹೊಸ ದಿಗಂತ"** ಪತ್ರಿಕೆಯಲ್ಲಿ ಸಹ ಪ್ರಕಟವಾಗಿದೆ. – ಸಂಪಾದಕ, ಯುಗರಶ್ಮಿ)

## ಬ್ರಿಟಿಷ್ ಸರಕಾರದ ಮುಂದೆ 'ಅಲ್ಲಾಹು'ವಿನ ಸೋಲು!?

ತಾನೇ ಹೇಳಿದ ಪ್ರಕಾರ ಹೊಟ್ಟೆಪಾಡಿಗಾಗಿ ಬರೆಯುವ, ತನ್ನ ಸ್ವಾರ್ಥಕ್ಕಾಗಿ ಪಂಥದಿಂದ ಪಂಥಕ್ಕೆ ಹಾರಿ ನಾಟಕವಾಡುವ, ಮಂಗಬುದ್ಧಿಯ, ಸ್ಥಿರ ಸ್ವಭಾವವಿಲ್ಲದ ಒಬ್ಬ ಕುಖ್ಯಾತ ಗೋಸುಂಬೆ ಲೇಖಕ ಬರೆದ ಪುಸ್ತಕವೊಂದರಲ್ಲಿ ಅಹ್ಮದಿಯಾ ಮುಸ್ಲಿಂ ಜಮಾಅತಿನ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಅಲೈಹಿಸ್ಸಲಾಮರ ಬಗ್ಗೆ ಕೀಳಾಗಿ ಬರೆದ ಭಾಗವನ್ನು ಓದಿದೆ.

ಅಬ್ದುಲ್ ಜಬ್ಬಾರ್ ಕಾಟಿಪಳ್ಳ ಎಂಬ ಆ ಲೇಖಕ, ಸುಮಾರು 120 ವರ್ಷಗಳಿಂದ ಅಹ್ಮದಿಯಾ ವಿರೋಧಿಗಳು ಬರೆದ ಸುಳ್ಳಾರೋಪಗಳನ್ನೇ 'ಹೊಸ ಬಾಟ್ಲಿಯಲ್ಲಿ ಹಳೆ ಮದ್ಯ" ಎಂಬಂತೆ ಗೀಚಿದ್ದಾನೆ.

ಕೃತಿ ಚೌರ್ಯದಲ್ಲಿ ನಿಸ್ಸೀಮನಾದ ಆ ಲೇಖಕ ಹಲವು ವರ್ಷಗಳ ಮೊದಲು (ಡಿಸೆಂಬರ್ 1977ರಲ್ಲಿ) ಅಹ್ಮದಿಯಾ ಜಮಾಅತಿನ ಮುಖವಾಣಿಯಾದ "ಯುಗರಶ್ಮಿ"ಯಲ್ಲಿ ಪ್ರಕಟವಾದ "ಈದ್ ಆಚರಣೆ" ಎಂಬ ಲೇಖನವನ್ನು ಅಕ್ಷರಶಃ ಪ್ರತಿ ಮಾಡಿ ಬಜ್ಪೆಯ "ಮೆಸ್ಕೋ ವಾರ್ತೆ" ಎಂಬ ಪತ್ರಿಕೆಯ ಸಂಪಾದಕರಾದ ಮೌಲವಿ ಅಬುಲ್ ಹಸನ್ ಎಂಬವರ ಹೆಸರಿನಲ್ಲಿ "ಮುಂಗಾರು" ದಿನ ಪತ್ರಿಕೆಯಲ್ಲಿ (15-04-1991) ಅಚ್ಚು ಹಾಕಿಸಿದ್ದನು. ಕೃತಿ ಚೌರ್ಯದ ಬಗ್ಗೆ ಮುಂಗಾರು ಪತ್ರಿಕೆಗೆ ಯುಗರಶ್ಮಿ ಸಂಪಾದಕರು ಬರೆದಿದ್ದಾಗ (28-04-1991) ಆ ಲೇಖಕ ಮರುದಿನವೇ ಯುಗರಶ್ಮಿ ಸಂಪಾದಕರ ಮುಂದೆ ಹಾಜರಾಗಿ, ಈ ಪ್ರಕರಣವನ್ನು ಮುಂದಕ್ಕೆ ಕೊಂಡು ಹೋಗದೆ ಇಲ್ಲೇ ಕೊನೆಗೊಳಿಸಬೇಕೆಂದು ಬೇಡಿಕೊಂಡಿದ್ದನು.

ಮತ್ತೊಂದು ಸಂದರ್ಭದಲ್ಲಿ ದೇವಾಸ್ತಿತ್ವದ ಬಗ್ಗೆ ಪ್ರೊ। ನರೇಂದ್ರ ನಾಯಕರೊಂದಿಗೆ "ಮುಂಗಾರು" ದಿನ ಪತ್ರಿಕೆಯಲ್ಲಿ ವಾದಿಸಿ ಸೋತಾಗ, ಅಹ್ಮದಿಯರ ಸಹಾಯ ಪಡೆದು ಮುಖವುಳಿಸಿಕೊಂಡಿದ್ದನು.

ಸುಳ್ಳು ಪ್ರವಾದಿ ವಿಜಯ ಗಳಿಸಲಿಕ್ಕಿಲ್ಲ; ಸತ್ಯ ಪ್ರವಾದಿಗೆ ವಿಜಯ ಲಬ್ಧಿಯಾಗುವುದೆಂಬುದು ಅಲ್ಲಾಹನು ವಿಧಿಸಿದ ನಿಯಮವಾಗಿದೆ. ನಕಲಿ ಪ್ರವಾದಿಗಳು ಹೇಗೆಲ್ಲ ನಾಶವಾಗಿದ್ದಾರೆ ಎಂಬುದನ್ನು ಅದೇ ಲೇಖಕ ತನ್ನ ಪುಸ್ತಕದಲ್ಲಿ ಬರೆದಿದ್ದಾನೆ.

ಅಹ್ಮದಿಯಾ ಜಮಾಅತ್ ಸ್ಥಾಪಿತವಾಗಿ ಸುಮಾರು 120 ವರ್ಷಗಳು ಸಂದಿವೆ. ಅದು ದಿನೇ ದಿನೇ ಪ್ರಗತಿ ಗಳಿಸಿ ಕೋಟ್ಯಾನುಕೋಟಿ ಜನಸಂಖ್ಯೆಯನ್ನು ಹೊಂದಿ 195 ರಾಷ್ಟ್ರಗಳಲ್ಲಿ ವ್ಯಾಪಿಸಿಕೊಂಡಿದೆ. "ಮುಸ್ಲಿಂ ಅಹ್ಮದಿಯಾ ಟೆಲಿವಿಷನ್" (MTA) ಮೂಲಕ 5 ಭೂಖಂಡಗಳಲ್ಲಿ ದಿನಂಪ್ರತಿ 24 ಗಂಟೆಗಳಲ್ಲೂ ಇಸ್ಲಾಮಿನ ಸುಂದರ ರೂಪವನ್ನು ಅದು ಪ್ರದರ್ಶಿಸುತ್ತದೆ. ಸತ್ಯ ವಿಶ್ವಾಸಿಗಳಿಗೆ ಅಲ್ಲಾಹನು ಖುರ್‌ಆನ್‌ನಲ್ಲಿ ವಾಗ್ದಾನ ಮಾಡಿದ ಖಿಲಾಫತ್ ಇರುವುದು ಅಹ್ಮದಿಯಾ ಮುಸ್ಲಿಂ ಜಮಾಅತಿಗೆ ಮಾತ್ರವಾಗಿದೆ.

ಓರ್ವ ಸುಳ್ಳು ಪ್ರವಾದಿಗೆ ಇಂತಹ ಮಹತ್ತರವಾದ ವಿಜಯ ಸಿದ್ಧಿಸಿದ್ದು ಬ್ರಿಟಿಷ್ ಕೃಪಾ ಪೋಷಣೆಯಿಂದಾದರೆ, ಆ ಲೇಖಕ ನಂಬುವ 'ಅಲ್ಲಾಹ್' ಬ್ರಿಟಿಷರ ಮುಂದೆ ಸೋತು ಹೋದನೇ!? ಇವನು ಯಾವ ರೀತಿಯ ಅವಿವೇಕಿ, ಮೂಢ!

ಆಧ್ಯಾತ್ಮಿಕತೆಯ ಗಂಧಗಾಳಿ ಅರಿಯದ ಆ ಲೇಖಕ ಹಝ್ರತ್ ಅಹ್ಮದ್ ಅಲೈಹಿಸ್ಸಲಾಮರಿಗೆ ಉಂಟಾದ ಇಲ್‌ಹಾಮ್ ಮತ್ತು ಅವರು ಕಂಡ ಸ್ವಪ್ನಗಳ ಕುರಿತು ಅಪಹಾಸ್ಯ ಮಾಡಿದ್ದಾನೆ. "ಅಪಹಾಸ್ಯಕ್ಕೆ ಗುರಿಯಾಗದೆ ಯಾವ ಪ್ರವಾದಿಯೂ ಬಂದಿಲ್ಲ" ಎಂದು ಅಲ್ಲಾಹು ಖುರ್‌ಆನಿನಲ್ಲಿ ಹೇಳಿದ್ದಾನೆ.

ಹಝ್ರತ್ ಅಹ್ಮದ್ ಅಲೈಹಿಸ್ಸಲಾಮರನ್ನು ಆ ಲೇಖಕ ಹುಚ್ಚ ಎಂದು ಬರೆದಿದ್ದಾನೆ. ಸತ್ಯ ಪ್ರವಾದಿಗಳನ್ನು ಅವರ ವಿರೋಧಿಗಳು ಪೂರ್ವ ಕಾಲದಲ್ಲಿ ಸಹ ಹುಚ್ಚ ಎಂದು ಕರೆದಿದ್ದಾರೆ. ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಕುರಿತು ಹೀಗೆಯೇ ಶತ್ರುಗಳು ಹೇಳಿದ್ದರು. ಆಗ ಅಲ್ಲಾಹನು, ಅವರು "ಹುಚ್ಚ ಅಲ್ಲ" ಎಂದು ಖುರ್‌ಆನಿನಲ್ಲಿ ಹೇಳಿದ್ದಾನೆ.

ಹಝ್ರತ್ ಅಹ್ಮದ್ ಅಲೈಹಿಸ್ಸಲಾಮರನ್ನು ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವ ಸಲ್ಲಂ ಭವಿಷ್ಯ ನುಡಿದ ವಾಗ್ದತ್ತ ಮಹ್‌ದೀ ಮತ್ತು ಮಸೀಹ್ ಎಂದು ನಂಬುವ ಅಹ್ಮದೀ ಮುಸ್ಲಿಮರನ್ನು ಆ ಲೇಖಕ ಕಾಫಿರ್ ಎಂದು ಬರೆದಿದ್ದಾನೆ. ಒಬ್ಬ ಮುಸ್ಲಿಮನ ವ್ಯಾಖ್ಯೆ ಏನೆಂದು ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಂ ಹೇಳಿದ್ದಾರೆ. ನಾವು ಅಲ್ಲಾಹನ ದೃಷ್ಟಿಯಲ್ಲಿ ಮತ್ತು ಹಝ್ರತ್ ಮುಹಮ್ಮದ್ ಪೈಗಂಬರರ(ಸ) ವ್ಯಾಖ್ಯೆಯ ಪ್ರಕಾರ ಶೇಕಡಾ ನೂರರಷ್ಟು ಮುಸ್ಲಿಮರು. ಅದಕ್ಕೆ ಅಲ್ಲಾಹ್ ಮತ್ತು ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಸಾಕ್ಷಿ. ಹಾಗಿರುವಾಗ ಯಾವನೇ ಆಲಿಂ ಅಥವಾ ಯಾವನೇ ಕ್ಷುದ್ರ ಲೇಖಕನ ಸರ್ಟಿಫಿಕೇಟ್ ನಮಗೆ ಅಗತ್ಯವಿಲ್ಲ.

ಹಿಂದಿನವರು ಬರೆದಿಟ್ಟದ್ದನ್ನು ನಕಲು ಮಾಡಿ ಏನಾದರೂ ಗೀಚಿ ಹೊಟ್ಟೆತುಂಬಿಸುವ ಅಲ್ಪ ಬುದ್ಧಿಯ ಆ ಲೇಖಕ ದೇವಭಯ ಇಟ್ಟುಕೊಂಡರೆ ಅದು ಅವನಿಗೆ ಒಳಿತು.

– ಇಬ್ನು ಅಬ್ದುರ್ರಶೀದ್.

## ಉಲಮಾ ಫತ್ವಾ ಹಾಗೂ ಅಹ್ಮದಿಯಾ ಮುಸ್ಲಿಂ ಜಮಾಅತಿನ ವಿಜಯ

'ಸನ್ಮಾರ್ಗ' ವಾರಪತ್ರಿಕೆ 2009 ನವೆಂಬರ್ 1-7ರಲ್ಲಿ 'ಎಲ್ಲಕ್ಕೂ ತುಷ್ಟೀಕರಣ ಎನ್ನುವವರಿಗೇನೂ ಮಾಡಲಾಗದು' ಎಂಬ ತಲೆಬರಹದಲ್ಲಿ ರಾಜ್ಯ ಹಜ್ಜ್ ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರಾದ ಡಾ। ಮುಮ್ತಾಝ್ ಅಲಿ

ಖಾನ್‌ರೊಂದಿಗೆ ಮಾತುಕತೆ ಪ್ರಕಟವಾಗಿದೆ.

ಸೈಯ್ಯದ್‌ನಾ ಹಝ್ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಭವಿಷ್ಯನುಡಿ ಪ್ರಕಾರ ಇಸ್ಲಾಂ ಧರ್ಮವನ್ನು ಲೋಕದಾದ್ಯಂತ ವಿಜಯಗೊಳಿಸುವ ದೌತ್ಯದೊಂದಿಗೆ 14ನೇ ಶತಮಾನದ ಮುಜದಿದ್ದಾಗಿ ಅಲ್ಲಾಹುವಿನಿಂದ ನಿಯುಕ್ತರಾದ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಅಲೈಹಿಸ್ಸಲಾಮರು ಸ್ಥಾಪಿಸಿದ ಅಹ್ಮದಿಯಾ ಮುಸ್ಲಿಂ ಜಮಾಅತಿನ ಕುರಿತು ಲೇಖಕರು ಬರೆಯುತ್ತಾರೆ:

"ಮುಸ್ಲಿಮರ ಅಸುರಕ್ಷತೆ ಮತ್ತು ಒಡಕಿಗೆ ಅಪ್ರಮಾಣಿಕ ನಾಯಕತ್ವವೇ ಕಾರಣ ಎನ್ನುತ್ತಾರೆ ಮುಮ್ತಾಜ್ ಅಲಿಖಾನ್. ಮುಸ್ಲಿಂ ಸಮಾಜದ ಸಮಸ್ಯೆಗಳಿಗೆ ಪರಿಹಾರ ಏನೆಂದು ಕೇಳಿದಾಗ ಖಾನ್ ಸಾಹೇಬರು ಸಮಸ್ಯೆಗಳನ್ನೂ ಪರಿಹಾರವನ್ನೂ ಒಟ್ಟಾರೆ ವಿವರಿಸುತ್ತಾರೆ. ಮುಸ್ಲಿಂ ಸಮುದಾಯದಲ್ಲಿ ಎರಡು ಸಮಸ್ಯೆಗಳಿವೆ. ಅದು, ಆಂತರಿಕ ಮತ್ತು ಬಾಹ್ಯ. ಆಂತರಿಕ ಸಮಸ್ಯೆ ಏನೆಂದರೆ ಇಸ್ಲಾಮಿನಿಂದ ದೂರವಾಗಿರುವುದು, ಗುಂಪುಗಾರಿಕೆ ನಡೆಸುವುದು, ಶಿಯಾ, ಸುನ್ನಿಗಳಲ್ಲಿ ಕಲಹ, ಶಿಯಾಗಳು ಮುಸ್ಲಿಮರಲ್ಲವೇ ಹೌದೇ ಎಂಬ ವ್ಯರ್ಥ ಚರ್ಚೆ. ಅಹ್ಮದಿಯಾ ಗುಂಪನ್ನು ನೀವು ಮುಸ್ಲಿಮರಿಂದ ಹೊರಗಿಡಬಹುದು. ಯಾಕೆಂದರೆ ಈ ಬಗ್ಗೆ ಉಲೇಮಾಗಳು ಫತ್ವಾ ನೀಡಿರುವರು."

('ಸನ್ಮಾರ್ಗ' 2009 ನವೆಂಬರ್ 1-7)

ಅಲ್ಲಾಹು ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳುತ್ತಾನೆ: "ಒಂದು ಪಂಗಡದವರ ಮೇಲಿನ ಶತ್ರುತ್ವ ಅವರೊಡನೆ ಅನ್ಯಾಯವಾಗಿ ವರ್ತಿಸಲು ನಿಮ್ಮನ್ನು ಪ್ರೇರೇಪಿಸದಿರಲಿ." ಅಹ್ಮದಿಯಾ ಮುಸ್ಲಿಂ ಜಮಾಅತನ್ನು ಯಾವ ಇಸ್ಲಾಮಿನಿಂದ ಹೊರಗಿಡಬಹುದೆಂದು ಡಾ| ಅಲಿಖಾನ್ ಸಚಿವರಾಗಲೀ ಅವರನ್ನು ಸಂದರ್ಶಿಸಿದ ವ್ಯಕ್ತಿಯಾಗಲೀ ಲೇಖನವನ್ನು ಪ್ರಕಟಿಸಿದ 'ಸನ್ಮಾರ್ಗ'ದ ಸಂಪಾದಕರಾಗಲೀ ಅವರು ಹೇಳಿದ ಉಲೇಮಾಗಳಾಗಲೀ ವಿವರವಾಗಿ ಬರೆದಿಲ್ಲವಾದರೂ ಲೇಖನದಲ್ಲಿ ಅಹ್ಮದಿಯಾ ಮುಸ್ಲಿಂ ಜಮಾಅತನ್ನು ಹೊರತುಪಡಿಸಿ ಇನ್ನಿತರ ಎಲ್ಲಾ ಮುಸ್ಲಿಂ ಸಂಘಟನೆಗಳ ದುರವಸ್ಥೆಗಳನ್ನು ಬರಹಗಾರರು ವಿವರಿಸಿರುವುದರಿಂದ ಸದರಿ ಇಸ್ಲಾಮಿನಿಂದ ಅಹ್ಮದಿಯಾ ಮುಸ್ಲಿಂ ಜಮಾಅತ್ ಖಂಡಿತವಾಗಿಯೂ ಹೊರಗಿದೆ, ಅಲ್‌ಹಮ್ದುಲಿಲ್ಲಾಹ್.

ಹಝ್ರತ್ ಅಹ್ಮದ್‌ರು(ಅ) ತಾನು ಹದಿನಾಲ್ಕನೇ ಶತಮಾನದ ಮುಜದ್ದಿದ್ ಎಂದೂ ಹ|| ಮುಹಮ್ಮದ್ ಮುಸ್ತಫಾ(ಸ)ರು ಇಸ್ಲಾಮಿನಲ್ಲಿ ವಾಗ್ದಾನ ಮಾಡಿದ ಮಸೀಹೆಂದೂ ಮಹ್‌ದೀ ಎಂದೂ ವಾದಿಸಿದಾಗ ಅವರ ವಿರೋಧಿಯಾಗಿ ರಂಗಪ್ರವೇಶ ಮಾಡಿದ ಪ್ರಥಮ ವಿರೋಧಿ ಮೌಲವಿ ಮುಹಮ್ಮದ್ ಹುಸೇನ್ ಬಟಾಲವಿ ಸಾಹೇಬರು ಇನ್ನೂರು ಉಲಮಾರನ್ನು ಒಟ್ಟುಗೂಡಿಸಿ ಹ|| ಅಹ್ಮದ್‌ರ(ಅ) ವಿರುದ್ಧ ಕುಫ್ರ್ ಫತ್ವಾ ಹೊರಡಿಸಿದರು. ಆ ಮುಹಮ್ಮದ್ ಹುಸೇನ್ ಬಟಾಲವಿಯ ಸ್ಥಿತಿ ಏನಾಯಿತು? ಅಹ್‌ಲೇ ಹದೀಸ್ ಉನ್ನತ ಪಂಡಿತರೂ ಆ ವಿಭಾಗದ ಉನ್ನತ ನಾಯಕರೂ ಆಗಿದ್ದರಲ್ಲದೆ ದೊಡ್ಡ ಕುಟುಂಬಸ್ಥರೂ ಆಗಿದ್ದರು ಬಟಾಲವಿ ಸಾಹೇಬರು.

ಹ|| ಅಹ್ಮದ್‌ರ(ಅ) ವಿರುದ್ಧ ಹೋರಾಡಿದ ಇವರು "ನಾನೇ ಅಹ್ಮದರನ್ನು ಮೇಲೆ ತಂದಿರುವುದು, ನಾನೇ ಅವರನ್ನು ಕೆಳಗಿಳಿಸುವೆನು" ಎಂದು ವೀರವಾದ ಹೊರಡಿಸಿದರು. ಈ ಸಂದರ್ಭದಲ್ಲಿ ಹ|| ಅಹ್ಮದ್ ಅಲೈಹಿಸ್ಸಲಾಮರಿಗೆ ಅಲ್ಲಾಹನು ಈ ರೀತಿ ತಿಳಿಸಿಕೊಟ್ಟನು: "**ಇನ್ನೀ ಮುಹೀನುನ್ ಮನ್ ಅರಾದ ಇಹಾನತಕ**" ಅಂದರೆ, ನಿನ್ನನ್ನು ಅಪಮಾನಿಸುವವನನ್ನು ನಾನು ಅಪಮಾನಿಸುವೆನು ಎಂದು. ಬಟಾಲವಿ ಸಾಹೇಬರಿಗೆ ನಾಲ್ಕು ಜನ ಪತ್ನಿಯರೂ ಅವರಲ್ಲಿ ಆರು ಮಂದಿ ಗಂಡು ಮಕ್ಕಳೂ ಐದು ಮಂದಿ ಹೆಣ್ಣು ಮಕ್ಕಳೂ ಇದ್ದರು. ಆದರೂ ಅವರ ಅಂತ್ಯಕಾಲ ತುಂಬಾ ಪರಿತಾಪಕರವೂ ಶೋಚನೀಯವೂ ಆಗಿತ್ತು. ಅದನ್ನು ಅವರು ಸ್ವತಃ ಒಪ್ಪಿಕೊಂಡಿದ್ದಾರೆ. ಅವರು ಬರೆಯುತ್ತಾರೆ: "ನನ್ನ ಮಕ್ಕಳಲ್ಲಿ ಎಲ್ಲಾ ತರಹದ ಕೆಡುಕುಗಳೂ ಸೇರಿಕೊಂಡು ಕುಫ್ರ್ ಸೇರಿಕೊಂಡಿದೆ. ನಾನು ನನ್ನ ಆಸ್ತಿಯನ್ನು ಇವರಿಗೆ ಬರೆದುಕೊಟ್ಟರೆ ಕೆಲವೇ ದಿನಗಳಲ್ಲಿ ಇವರು ಕುಡಿದು, ಜೂಜಾಡಿ ಹಾಳು ಮಾಡುವರು ಎಂಬ ವಿಷಯದಲ್ಲಿ ಸಂಶಯವಿಲ್ಲ. ನನ್ನ ಮಕ್ಕಳೂ ಕುಟುಂಬಸ್ಥರೂ ಶರೀಅತನ್ನು ತ್ಯಜಿಸಿ, ಯಾವುದೇ ರೀತಿಯ ಶರೀಅತಾಗಲೀ ದೀನಾಗಲೀ ಇಲ್ಲದೇ ಲಗಾಮಿಲ್ಲದೆ ಜೀವನ ಸಾಗಿಸುತ್ತಿದ್ದಾರೆ. ನನ್ನ ಮಕ್ಕಳು ನನ್ನ ಮುಖ ನೋಡಿ, ನೀನು ನಮ್ಮ ತಂದೆ ಅಲ್ಲವೆಂದೂ ಇನ್ನಿತರರೊಂದಿಗೆ ನಾನು ಅವರ ತಂದೆ ಅಲ್ಲವೆಂದು ಕೂಗಿ ಹೇಳತೊಡಗಿರುವರು." (ಇಶಾಅತೆ ಸುನ್ನ ಸಂಪುಟ 22, ಪುಟ 204)

"ನಾನೇ ಅಹ್ಮದ್‌ರನ್ನು ಮೇಲೆ ತಂದಿರುವುದು; ನಾನೇ ಅವರನ್ನು ಕೆಳಗಿಳಿಸುವೆನು" ಎಂದು ವೀರವಾದ ಹೊರಡಿಸಿದ ಮುಹಮ್ಮದ್ ಹುಸೇನ್ ಬಟಾಲವಿ ಸಾಹೇಬರಿಗೆ ಇದಕ್ಕಿಂತ ಮಿಗಿಲಾಗಿ ಬೇರೇನು ಅವಮಾನವಿದೆ? ಆದರೆ ಇಂದು ಹ|| ಮಿರ್ಝಾ ಗುಲಾಂ ಅಹ್ಮದ್ ಎಂಬ ಹೆಸರು ಉಚ್ಚರಿಸುವಾಗ 20 ಕೋಟಿಗೂ ಮಿಕ್ಕಿದ ಸತ್ಯವಿಶ್ವಾಸಿಗಳು ಅಲೈಹಿಸ್ಸಲಾತುವಸ್ಸಲಾಂ ಎಂದು ಕೂಗಿ ಹೇಳುತ್ತಾರೆ. ಅಲ್‌ಹಮ್ದುಲಿಲ್ಲಾಹ್.

ಅಹ್ಮದಿಯಾ ಜಮಾಅತನ್ನು ವಿರೋಧಿಸಲೂ ಪರಿಹಾಸ್ಯ ಮಾಡಲೂ ಜ|| ಮುಮ್ತಾಝ್ ಅಲಿಖಾನ್ ಸಾಹೇಬ್, ಬರಹಗಾರರು ಮತ್ತು ಸನ್ಮಾರ್ಗ ವಾರಪತ್ರಿಕೆಯ ಸಂಪಾದಕರು ಕಾರ್ಯನಿರತರಾಗಿದ್ದಾರೆ. ಮಾತ್ರವಲ್ಲ ಹ|| ಮುಹಮ್ಮದ್ ಮುಸ್ತಫಾ(ಸ)ರು ಹೇಳಿರುವ 72 ಪಂಗಡಗಳು ಒಟ್ಟಿಗೆ ಸೇರಿ ಅಲ್‌ಜಮಾಅತ್ ಆದ ಈ ಅಹ್ಮದಿಯಾ ಮುಸ್ಲಿಂ ಜಮಾಅತನ್ನು ಎದುರಿಸುತ್ತಿವೆ. ಆದರೂ ಅಹ್ಮದಿಯಾ ಜಮಾಅತಿನ ಪ್ರಥಮ ಶತ್ರು ಮೌಲವಿ ಮುಹಮ್ಮದ್ ಹುಸೇನ್ ಬಟಾಲವಿಯಿಂದ ಹಿಡಿದು ಪಾಕಿಸ್ತಾನದ ಅಧ್ಯಕ್ಷರಾಗಿದ್ದ ಝಿಯಾ ಉಲ್ ಹಖ್ ತನಕ ಎಲ್ಲರೂ ಸರ್ವನಾಶವಾಗಿ ಹೋಗಿದ್ದಾರೆ. ಕಾರಣ ಇದು ಅಲ್ಲಾಹು ತನ್ನ ಸ್ವಂತ ಕೈಯಿಂದ ನೆಟ್ಟ ಸಸಿಯಾಗಿದೆ; ಈ ಸಸಿ ಈಗ ಮರವಾಗಿ ಬೆಳೆಯತೊಡಗಿದೆ. ಇಂದು ಅಹ್ಮದಿಯಾ

ಮುಸ್ಲಿಂ ಜಮಾಅತ್ 195 ರಾಷ್ಟ್ರಗಳಲ್ಲಿ ವ್ಯಾಪಿಸಿದೆ. ಅಲ್ಲಾಹು ಪವಿತ್ರ ಖುರ್‌ಆನಿನಲ್ಲಿ ಹೇಳುತ್ತೇನೆ : **"ನಿಮ್ಮ ಪೈಕಿ ವಿಶ್ವಾಸ ಹೊಂದಿ ಸತ್ಕರ್ಮಗೈಯ್ಯುವವರಿಗೆ, ಅವರಿಗಿಂತ ಮುಂಚೆ ಇದ್ದವರನ್ನು ಖಲೀಫರನ್ನಾಗಿ ಮಾಡಿದಂತೆಯೇ ಖಂಡಿತವಾಗಿಯೂ ಅವರನ್ನು ಸಹ ಭೂಮಿಯಲ್ಲಿ ಖಲೀಫರನ್ನಾಗಿ ಮಾಡುವೆನೆಂದೂ ಅವರಿಗೋಸ್ಕರ ಅವನು ತೃಪ್ತಿಗೊಂಡ (ಇಸ್ಲಾಂ) ಧರ್ಮವನ್ನು ಅವರಿಗೆ ಬಲಪಡಿಸಿ ಕೊಡುವನೆಂದೂ ಅವರ ಭಯಭೀತಿಯ ಬಳಿಕ ಅವರಿಗೆ ಸುರಕ್ಷತೆ ಮತ್ತು ನೆಮ್ಮದಿಯನ್ನು ದಯಪಾಲಿಸುವನೆಂದೂ ಅಲ್ಲಾಹನು ವಾಗ್ದಾನ ಮಾಡಿದ್ದಾನೆ. ಅವರು ನನ್ನನ್ನು ಮಾತ್ರ ಆರಾಧಿಸುವರು; ನನಗೆ ಯಾರನ್ನೂ ಸಹಭಾಗಿ ಮಾಡಲಾರರು. ಅನಂತರವೂ ಯಾರಾದರೂ ನಿರಾಕರಿಸಿದರೆ ಅವರೇ ಧಿಕ್ಕಾರಿಗಳು." (24 : 56)**

ಅಲ್ಲಾಹು ಸತ್ಯವಿಶ್ವಾಸಿಗಳಿಗೆ ವಾಗ್ದಾನ ಮಾಡಿದ ಖಿಲಾಫತ್ ಅನುಗ್ರಹ ಈಗ ಇರುವುದು ಯಾರಿಗೆ?

ಇನ್ನೊಂದೆಡೆ ಅಲ್ಲಾಹು ಹೇಳುತ್ತಾನೆ: "ಮಾತುಗಳನ್ನು ಲಕ್ಷ್ಯಗೊಟ್ಟು ಆಲಿಸಿ ಅದರಲ್ಲಿ ಉತ್ತಮವಾದುದನ್ನು ಅವರು ಅನುಸರಿಸುವವರಾಗಿದ್ದಾರೆ; ಅಲ್ಲಾಹನ ಮಾರ್ಗದರ್ಶನ ಪಡೆದವರು ಅವರೇ ಆಗಿದ್ದಾರೆ, ಅವರೇ ವಿವೇಕಶಾಲಿಗಳು" (39 : 19)

ಇನ್ನೊಂದೆಡೆ ಅಲ್ಲಾಹು ಹೇಳುತ್ತಾನೆ: "ಯಾರು ವಿಶ್ವಾಸಿಗಳಾಗಿದ್ದು ಸತ್ಕರ್ಮನಿರತರಾಗುತ್ತಾರೋ, ಖಂಡಿತವಾಗಿಯೂ ನಾವು ಅವರನ್ನು ಸಜ್ಜನರಲ್ಲಿ ಸೇರಿಸುವೆವು." (29 : 10)

ಮೇಲೆ ಹೇಳಿದ ಪವಿತ್ರ ಖುರ್‌ಆನಿನ ವಚನಗಳಿಗೆ, 'ಸನ್ಮಾರ್ಗ'ದಲ್ಲಿ ಬರಹಗಾರ ವಿವರಿಸಿದ ಮುಸಲ್ಮಾನರನ್ನು ಹೋಲಿಸಿದರೆ, ಸದರಿ ಆಯತ್‌ಗಳ ಪ್ರಕಾರ ಅವರು ಅಲ್ಲಾಹನ ಪ್ರೀತಿಗೆ ಅನರ್ಹರೆಂದು ಲೇಖಕರೇ ಒಪ್ಪಿಕೊಂಡಿದ್ದಾರೆ. ಹೀಗಿರುವಾಗ ಮಾನ್ಯ ಸಚಿವರು ಹೇಳಿದ ಹಾಗೆ ಅಹ್ಮದಿಯಾ ಮುಸ್ಲಿಂ ಜಮಾಅತನ್ನು ನೀವು ವಿವರಿಸಿದ ಮುಸಲ್ಮಾನರಿಂದ ಹೊರಗಿಡಲೇಬೇಕು.

ಇನ್ನು ಫತ್ವಾ ನೀಡಿದ ಉಲಮಾರ ಕುರಿತು ಹ॥ ಪೈಗಂಬರ್(ಸ) ಏನು ಹೇಳುತ್ತಾರೆಂದು ನೋಡೋಣ: "ಖಂಡಿತವಾಗಿಯೂ ಒಂದು ಕಾಲವು ಬರಲಿದೆ. ಅಂದು ಇಸ್ಲಾಮಿನ ಹೆಸರೂ ಖುರ್‌ಆನಿನ ಲಿಪಿಯೂ ಮಾತ್ರ ಬಾಕಿ ಉಳಿಯುವುವು. ಅವರ ಮಸೀದಿಗಳು ಜನಭರಿತವಾಗಿದ್ದರೂ ಭಕ್ತಿಶೂನ್ಯವಾಗಿರುವುವು. ಅವರ ಉಲಮಾ ಆಕಾಶದಡಿಯಲ್ಲಿ ಅತೀ ನಿಕೃಷ್ಟರಾಗಿರುವರು. ಕುತಂತ್ರ ಅವರಿಂದ ಉದ್ಭವಿಸಿ ಅವರಿಗೇ ಮರಳುವುದು" (ಮಿಶ್ಕಾತ್). ಈ ಆಲಿಮ್‌ಗಳಲ್ಲವೇ ಹ॥ ಮಹ್‌ದೀ ಮಸೀಹ್‌ರ(ಅ) ವಿರುದ್ಧ ಫತ್ವಾ ಹೊರಡಿಸಿರುವುದು?

ಹ॥ ಪೈಗಂಬರ್(ಸ) ಇನ್ನೂ ಹೇಳುತ್ತಾರೆ: "ಬನೂ ಇಸ್ರಾಯೀಲರಲ್ಲಿ 72 ಪಂಗಡಗಳಾದರೆ ನನ್ನ ಸಮುದಾಯದಲ್ಲಿ 73 ಪಂಗಡಗಳಾಗುವುವು. ಅವರಲ್ಲಿ ಒಂದು ಪಂಗಡದವರನ್ನು ಹೊರತುಪಡಿಸಿ ಇನ್ನುಳಿದ 72 ಪಂಗಡಗಳೂ ನರಕವಾಸಿಗಳಾಗುವರು." ಆಗ ಅನುಯಾಯಿಗಳು ಕೇಳಿದರು: "ಪ್ರವಾದಿಯವರ್ರೇ ಸ್ವರ್ಗಕ್ಕೆ ಅರ್ಹವಾದ ಆ ಪಂಗಡ ಯವುದು?" ಪೈಗಂಬರರು(ಸ) ಉತ್ತರ ಹೇಳಿದರು: "ನಾನು ಮತ್ತು ನನ್ನ ಶಿಷ್ಯರು ಇರುವ ಹಾಗೆ ಇರುವವರು" (ಮಿಶ್ಕಾತ್).

ಇಲ್ಲಿ ಹ॥ ನಬಿ(ಸ)ರು ಹಾಗೂ ಅವರ ಶಿಷ್ಯರ (ಸ್ವಹಾಬಿಗಳ) ಹಾಗೇ ಇರುವ ಒಂದು ಪಂಗಡ ಮೋಕ್ಷಕ್ಕೆ ಅರ್ಹವೆಂದೂ ಇನ್ನುಳಿದ 72 ಪಂಗಡಗಳು ದಾರಿತಪ್ಪಿದರೆಂದೂ ನಬಿ(ಸ) ನುಡಿದಿರುವುದು, ಈ ಬಹುಸಂಖ್ಯಾತ ಪಂಗಡಗಳು ಮಾಡಿದ ತಪ್ಪು, ಅಲ್ಲಾಹು ಕಳುಹಿಸಿದ ಒಬ್ಬ ಮಹಾತ್ಮರನ್ನು ಧಿಕ್ಕರಿಸಿರುವುದಲ್ಲದೇ ಮತ್ತೇನು?

ಮುಸಲ್ಮಾನರಲ್ಲಿ ಪಂಗಡಗಳು ವಿಭಜನೆಗೊಳ್ಳುವ ಕಾಲ ಬಂದಾಗ ತಾವೇನು ಮಾಡಬೇಕೆಂದು ಒಬ್ಬ ಸ್ವಹಾಬಿ ಹ॥ ರಸೂಲ್ ಕರೀಂ(ಸ)ರಲ್ಲಿ ಕೇಳಿದರು. ಅದಕ್ಕೆ ಆ ಪುಣ್ಯಾತ್ಮರು ಹೀಗೆ ಉತ್ತರವಿತ್ತರು: "ಯಥಾರ್ಥ ಮುಸ್ಲಿಮರು ಹಾಗೂ ಅವರ ಇಮಾಮರೊಂದಿಗೆ ಸೇರಿಕೊಳ್ಳಿರಿ." ಆಗ ಸ್ವಹಾಬಿ ಕೇಳಿದರು: "ಆ ಕಾಲದಲ್ಲಿ ಜಮಾಅತ್ ಆಗಲೀ, ಇಮಾಂ ಆಗಲೀ ಇಲ್ಲದಿದ್ದರೆ ಏನು ಮಾಡಬೇಕು?" ಅದಕ್ಕೆ ನಬಿ(ಸ) ಈ ರೀತಿ ನುಡಿದರು: "ನೀನು ಪಂಗಡಗಳನ್ನು ತ್ಯಜಿಸಿ ನಿಲ್ಲಬೇಕು – ಕಾಡಿಗೆ ಹೋಗಿ ವೃಕ್ಷದ ಬೇರು ತಿಂದು ಜೀವಿಸಬೇಕಾಗಿ ಬಂದರೂ ಸರಿ." (ಬುಖಾರಿ ಖಿತಾಬುಲ್ ಫಿತನ್)

ಮುಸಲ್ಮಾನರು ಎಷ್ಟು ಕಷ್ಟ ಸಹಿಸಿಯಾದರೂ ಇಮಾಮರ ನೆರಳಿನಲ್ಲಿರುವ ಅಲ್‌ಜಮಾಅತಿನಲ್ಲಿ ನಿಲ್ಲಬೇಕೆಂದಾಗಿದೆ ಹ॥ ರಸೂಲ್‌ರು(ಸ) ಸತ್ಯವಿಶ್ವಾಸಿಗಳಿಗೆ ಉಪದೇಶಿಸಿರುವುದು. ಈ ಅನುಗ್ರಹ ಇಂದು ಅಹ್ಮದಿಯಾ ಜಮಾಅತಿಗೆ ಮಾತ್ರ ಲಭಿಸಿದೆ. ಅಲ್‌ಹಮ್ದುಲಿಲ್ಲಾಹ್.

ಹ॥ ರಸೂಲ್ ಕರೀಂ(ಸ)ರು ಇನ್ನೊಂದೆಡೆ ಹೀಗೆ ಹೇಳುತ್ತಾರೆ: "ಅಲ್ಲಾಹು ಇಚ್ಛಿಸುವ ತನಕ ನಿಮ್ಮಲ್ಲಿ ನುಬುವ್ವತ್ ಇರುವುದು. ಅನಂತರ ಅದನ್ನು ಅಲ್ಲಾಹು ಎತ್ತಿ ಬಿಡುವನು. ನಂತರ ಖಿಲಾಫತ್ ಅಲಾ ಮಿನ್‌ಹಾಜಿನ್ನುಬುವ್ವತ್ ಅಂದರೆ ನುಬುವ್ವತಿನ ಮಾರ್ಗದಲ್ಲಿ ಇರುವ ಖಿಲಾಫತ್ ಸ್ಥಾಪಿತವಾಗುವುದು. ಅಲ್ಲಾಹನು ಇಚ್ಛಿಸುವಾಗ ಈ ಅನುಗ್ರಹವನ್ನು ಎತ್ತಿ ಬಿಡುವನು. ಅನಂತರ ಅಲ್ಲಾಹುವಿನ ವಿಧಿ ಪ್ರಕಾರ ದೌರ್ಜನ್ಯಕಾರರಾದ ರಾಜರ ಆಡಳಿತ ಸ್ಥಾಪಿತವಾಗುವುದು. ಅನಂತರ ಅದನ್ನೂ ಅಲ್ಲಾಹು ಎತ್ತಿ ಬಿಡುವನು. ಅನಂತರ ಅಲ್ಲಾಹನ ಇನ್ನೊಂದು ವಿಧಿ ಪ್ರಕಾರ ಹೆಚ್ಚು ದೌರ್ಜನ್ಯಕಾರರಾದ ರಾಜರ ಆಡಳಿತ ಸ್ಥಾಪಿತವಾಗುವುದು. ಅನಂತರ ಅಲ್ಲಾಹನು ದಯೆತೋರುವನು. ದೌರ್ಜನ್ಯದ ಕಾಲವೂ ಕೊನೆಗೊಳ್ಳುವುದು. ಅನಂತರ ಪುನಃ ಖಿಲಾಫತ್ ಅಲಾ ಮಿನ್‌ಹಾಜಿನ್ನುಬುವ್ವತ್ ಸ್ಥಾಪಿತವಾಗುವುದು." (ಮಿಶ್ಕಾತ್). ಈಗಲಾದರೂ ಚಿಂತನೆ ಮಾಡಿರಿ ಈ ಪಂಗಡ ಯಾವುದು? ಎಂದು. ಈ ಭವಿಷ್ಯ ನುಡಿ ಹ॥ ಮಿರ್ಝಾ ಗುಲಾಂ ಅಹ್ಮದ್‌ರ(ಅ) ಮುಖಾಂತರ ಈಡೇರಿತು. ಅಲ್‌ಹಮ್ದುಲಿಲ್ಲಾಹ್.

*(37ನೇ ಪುಟಕ್ಕೆ)*

## ಓದಿದ್ದು

# ಡಾಕ್ಟರ್ ಅಬ್ದುಸ್ಸಲಾಮ್

1979ರ ಭೌತಶಾಸ್ತ್ರದ ನೋಬೆಲ್ ಬಹುಮಾನ ಡಾಕ್ಟರ್ ಅಬ್ದುಸ್ಸಲಾಮ್, ಸ್ಟೀವನ್ ವೈನ್‌ಬರ್ಗ್ ಮತ್ತು ಶೆಲ್‌ಡನ್ ಗ್ಲಾಶೋರವರಿಗೆ ಅವರು "ಬಲಹೀನ" ಮತ್ತು "ವಿದ್ಯುತ್ ಆಯಸ್ಕಾಂತೀಯ" ಎಂಬ ಎರಡು ಮೂಲಭೂತ ಶಕ್ತಿಗಳನ್ನು ಸಂಯೋಜಿಸುವ ಸಿದ್ಧಾಂತವನ್ನು ಕಂಡುಹಿಡಿದುದಕ್ಕಾಗಿ ನೀಡಲಾಯಿತು. ಸಲಾಮ್ - ವೈನ್‌ಬರ್ಗ್ ಸಿದ್ಧಾಂತ ಎಂದು ಪ್ರಸಿದ್ಧವಾದ ಈ ಸಿದ್ಧಾಂತವು ಈ ಶತಮಾನದ ಅತ್ಯಂತ ಮಹತ್ವಪೂರ್ಣ ಸಂಶೋಧನೆಗಳಲ್ಲಿ ಒಂದಾಗಿದೆ. ಆದರೆ ಇದರ ಸಂಶೋಧಕರ ನಂಬಿಕೆಗಳ ಕಡೆಗೆ ದೃಷ್ಟಿಹಾಯಿಸಿರಿ! ಸಲಾಮರು ಖುರ್‌ಆನಿನಿಂದ ಧಾರಾಳ ಉಲ್ಲೇಖಗಳನ್ನು ನೀಡುತ್ತಾರೆ, ನಮಾಝುನ್ನು ಕ್ರಮಬದ್ಧವಾಗಿ ಅನುಷ್ಠಿಸುತ್ತಾರೆ. ಅವರು ಅಹ್ಮದಿಯಾ ಪಂಗಡದೊಂದಿಗೆ ಹೊಂದಿರುವ ನಿಷ್ಠೆಯ ಕಾರಣದಿಂದ ಅವರ ಕೆಲವು ಹಿತೈಷಿಗಳು ಆತಂಕ ಪಡುವಂತೆ ಮಾಡುತ್ತಾರೆ. (ಈ ಪಂಗಡವನ್ನು 1974ರಲ್ಲಿ ಇಸ್ಲಾಮ್‌ನಿಂದ ಬಹಿಷ್ಕರಿಸಲಾಯಿತು. ಸಲಾಮರನ್ನು ಪಾಕಿಸ್ತಾನದಲ್ಲಿ ಮುಸ್ಲಿಮ್ ಎಂದು ಗಣಿಸಲಾಗುವುದಿಲ್ಲ). ಆದರೆ ಇದು ಅವರ ಮನೋನಿರ್ಧಾರವನ್ನು ಬಲಪಡಿಸಿತೆಂದು ತೋರುತ್ತದೆ. ವೈನ್‌ಬರ್ಗ್ ಜನ್ಮತಃ ಯಹೂದಿಯೂ ನಾಸ್ತಿಕನೂ ಆಗಿರುವರು. ಅವರಿಗೆ ವಿಶ್ವವು ಒಂದು ವಾಸ್ತವಿಕ ಅಸ್ತಿತ್ವವಾಗಿದೆ. ಅದಕ್ಕೊಂದು ಔಚಿತ್ಯ ಅಥವಾ ಉದ್ದೇಶಲಕ್ಷ್ಯವಿಲ್ಲ. ಈ ಇಬ್ಬರು ಪ್ರತಿಭಾಶಾಲಿ ಭೌತಿಕ ಶಾಸ್ತ್ರಜ್ಞರ ಮಧ್ಯೆ ಹಿರಿದಾದೊಂದು ಸೈದ್ಧಾಂತಿಕ ಕೊಲ್ಲಿ ಇದೆ. ಹೀಗಿದ್ದರೂ ಬೇರೆ ಬೇರೆಯಾಗಿ ಸಂಶೋಧನೆ ನಡೆಸಿ ಏಕಕಾಲದಲ್ಲಿ ಒಂದೇ ಸಿದ್ಧಾಂತಕ್ಕೆ ಅವರಿಬ್ಬರೂ ತಲಪಿದರು.

**(P.A. HOODBHOY, Muslims and Science, Vanguard Publishers, Lahore, 1991, p. 176**
**(Courtesy :Islam and Scientific Enterprises p. 22 By : Syed Akheel Ahmed)**

---

ದೆಹಲಿಯ ಇಸ್ಲಾಮೀ ಮರ್‌ಕಝ್ ಅಧ್ಯಕ್ಷರಾದ ಮೌಲಾನ ವಹೀದುದ್ದೀನ್ ಖಾನ್ ಸಾಹೇಬರು ತನ್ನ ಮಾಸಪತ್ರಿಕೆ "ಅರ್‍ರಿಸಾಲ"ದಲ್ಲಿ ಸತ್ಯಾಂಶಗಳನ್ನು ಪ್ರಕಟಿಸುತ್ತಾ ಇರುತ್ತಾರೆ. ಅವರು 2009 ಆಗಸ್ಟ್ ತಿಂಗಳ ಸಂಚಿಕೆಯಲ್ಲಿ "ಶಾಸ್ತ್ರಜ್ಞರ ಧರ್ಮ" ಎಂಬ ಶೀರ್ಷಿಕೆಯಲ್ಲಿ ದೇವಾಸ್ತಿತ್ವದ ಕುರಿತು ಬರೆದ ಲೇಖನದ ಕೊನೆಗೆ ಹೀಗೆ ಬರೆಯುತ್ತಾರೆ:

"ಹೊಸ ವಿಜ್ಞಾನದ ಚರಿತ್ರೆ ಹೀಗೆ ತಿಳಿಸುತ್ತದೆ: ವಿಜ್ಞಾನವು ಈಗ ಕ್ರಮೇಣ ಎಲ್ಲಿಯ ತನಕ ತಲಪಿದೆ ಎಂದರೆ ವಿಜ್ಞಾನಿಗಳು ವಿಶ್ವದಲ್ಲಿ ಒಂದು ಮನಸ್ಸು **(Mind)** ಹಾಗಿರುವ ಶಕ್ತಿ ಕಾರ್ಯನಿರತವಾಗಿದೆ ಎಂದು ಅಂಗೀಕರಿಸುತ್ತಾರೆ. ವಾಸ್ತವಿಕವಾಗಿ ಮನಸ್ಸು ಇರುವುದನ್ನು ಅಂಗೀಕರಿಸುವುದಾದರೆ ಪರೋಕ್ಷವಾಗಿ ದೇವನ ಅಸ್ತಿತ್ವವನ್ನು ಅಂಗೀಕರಿಸಿದ ಹಾಗೆ ಆಗುತ್ತದೆ. ಈ ಪರೋಕ್ಷ ವಿಜ್ಞಾನವನ್ನು ಪ್ರತ್ಯಕ್ಷ ಜ್ಞಾನಕ್ಕೆ ತಲಪಿಸುವುದರ ಆವಶ್ಯಕತೆ ಇದೆ. ಇದು ಇಂದಿನ ಕಾಲಘಟ್ಟದ ಎಲ್ಲದಕ್ಕಿಂತಲೂ ದೊಡ್ಡ ಜ್ಞಾನ ಸಂಬಂಧವಾದ ಮತ್ತು ಚಿಂತನೆಯ ಕೆಲಸವಾಗಿದೆ. ಇದನ್ನು ಶ್ರೇಷ್ಠ ವೈಜ್ಞಾನಿಕ ಮಸ್ತಿಷ್ಕವೇ ನಿರ್ವಹಿಸಬಲ್ಲದು. ಅದನ್ನು ಉನ್ನತಶ್ರೇಣಿಯ ಗಣಿತದ **(Higher Mathematics)** ಭಾಷೆಯಲ್ಲಿ ಮಾತ್ರ ಅಂತಿಮ ಗುರಿಗೆ ತಲಪಿಸಲು ಸಾಧ್ಯವಾಗುವುದು. ಪ್ರಾಯಶಃ ಈ ಕೆಲಸವನ್ನು ಡಾಕ್ಟರ್ ಅಬ್ದುಸ್ಸಲಾಮ್ ಸಾಹೇಬರು (ಮರಣ 1996) ಮಾಡಬಲ್ಲವರಾಗಿದ್ದರು. ಅವರಿಗೆ 1979ರಲ್ಲಿ ನೋಬೆಲ್ ವೈಜ್ಞಾನಿಕ ಬಹುಮಾನ ಲಭಿಸಿತ್ತು. ಆದರೆ ಮುಸ್ಲಿಮರ ಪೂರ್ವಗ್ರಹಗಳ ಕಾರಣದಿಂದ ಇದು ಸಾಧ್ಯವಾಗಲಿಲ್ಲ."

('ಅರ್‍ರಿಸಾಲ' ಆಗಸ್ಟ್ 2009 ಪುಟ 21)
**(ಮಿಶ್ಕಾತ್ ಅಕ್ಟೋಬರ್ - ನವೆಂಬರ್ 2009, ಪುಟ 11)**

---

# ಮಹಾತ್ಮರ ಮಾತು, ಕೃತಿ

ಮಹಮ್ಮದ್ ಪೈಗಂಬರರ ಚಿಕಿತ್ಸೆಗೆಂದು ಇರಾನಿನ ದೊರೆ, ವೈದ್ಯನೊಬ್ಬನನ್ನು ನೇಮಿಸಿದ್ದ. ಆ ವೈದ್ಯನೇನೋ ಉತ್ಸಾಹ ದಿಂದಲೇ ಅವರಲ್ಲಿಗೆ ಹೋದ. ಆದರೆ ಅವರಾಗಲಿ, ಅವರ ಅನುಯಾಯಿಗಳಾಗಲಿ ಅವನ ನೆರವನ್ನು ಕೋರಲೇ ಇಲ್ಲ. ಇದರಿಂದ ವೈದ್ಯನಿಗೆ ದುಃಖವಾಯಿತು. ತನ್ನನ್ನು ಇಲ್ಲಿ ಯಾರೂ ಕೇಳುವವರೇ ಇಲ್ಲ, ತನ್ನ ಚಿಕಿತ್ಸಾ ಕೌಶಲ್ಯವನ್ನು ತೋರಿಸೋಣವೆಂದರೆ ಇಲ್ಲಿ ಯಾರಿಗೂ ಕಾಯಿಲೆಯೇ ಬರುತ್ತಿಲ್ಲ ಎಂದು ನೊಂದುಕೊಂಡ. ನೇರವಾಗಿ ದೊರೆಯ ಬಳಿ ತೆರಳಿ ದುಃಖವನ್ನು ತೋಡಿಕೊಂಡ.

ದೊರೆಗೆ ಅರ್ಥವಾಗಲಿಲ್ಲ. "ಏನು ನಿಮ್ಮ ಸಮಸ್ಯೆ?" ಎಂದು ಅವನು ಕಾಳಜಿಯಿಂದ ವಿಚಾರಿಸಿದ. "ಅನಾರೋಗ್ಯದಿಂದ ಬಳಲುವವರ ಸೇವೆ ಮಾಡುವುದು ನನ್ನ ಕರ್ತವ್ಯ. ಆದರೆ ಈ ಕರ್ತವ್ಯವನ್ನು ನಿರ್ವಹಿಸೋಣವೆಂದರೆ, ಯಾರೂ ನನ್ನಲ್ಲಿಗೆ ಬರುತ್ತಿಲ್ಲ. ಏನು ಮಾಡಬೇಕೋ ತೋರುತ್ತಿಲ್ಲ" ಎಂದು ಅವನು ಬೇಸರದಿಂದ ನಿವೇದಿಸಿಕೊಂಡ.

ವೈದ್ಯ ಹೀಗೆ ಅಲವತ್ತುಕೊಳ್ಳುತ್ತಿದ್ದಾಗ ಪೈಗಂಬರರು ಅಲ್ಲಿಗೆ ಆಗಮಿಸಿದರು. ಗೋಳನ್ನು ಆಲಿಸಿದ ಅವರು ಹೇಳಿದರು: "ಇದರಲ್ಲಿ ಜನರ ತಪ್ಪೇನೂ ಇಲ್ಲ. ಆಹಾರ ಸ್ವೀಕಾರದ ಬಗ್ಗೆ ಅವರಲ್ಲಿ ಒಳ್ಳೆಯ ತಿಳುವಳಿಕೆಯಿದೆ. ಹಸಿವೆಯಾದ ಹೊರತು ಅವರು ಏನನ್ನೂ ತಿನ್ನುವುದಿಲ್ಲ. ತಿನ್ನುವಾಗ ಇನ್ನೂ ಕೊಂಚ ಹಸಿವೆ ಉಳಿದಿರುವಾಗಲೇ ಅಲ್ಲಿಗೆ ಊಟವನ್ನು ನಿಲ್ಲಿಸಿ ಎದ್ದು ಬಿಡುತ್ತಾರೆ."

ಪಾಲನೆಗೆ ಎಂಥ ಉದಾತ್ತ ಉಪಾಯ! ನಾನು ಇನ್ನು ಮುಂದೆ ಇದೇ ತತ್ವವನ್ನು ಪಾಲಿಸುವಂತೆ ಕಂಡಕಂಡವರಿಗೆಲ್ಲ ಹೇಳುತ್ತ ಹೋಗುತ್ತೇನೆ. ಹಸಿವೆಯಿದ್ದರಷ್ಟೇ ಉಣ್ಣು, ಹಸಿವೆ ಪೂರ್ಣ ತೀರುವ ಮೊದಲೇ ತಿನ್ನುವುದನ್ನು ನಿಲ್ಲಿಸು!

ನೋಡಿದಿರಾ, ಮಹಾತ್ಮರು ಅಗತ್ಯವಿಲ್ಲದೆ ಒಂದು ಮಾತನ್ನೂ ಆಡಲಾರರು. ಹೀಗಾಗಿಯೇ ಅವರ ಮಾತುಗಳೆಲ್ಲ ಕೃತಿಯಾಗಿಬಿಡುವುದು!"

**(ಉದಯವಾಣಿ 6-11-2009)**

## ಕಲ್ಲೆಸೆದವರ ಕೈ ಕಡಿಯಿರಿ : ಸಿಎಂ

'ಚರ್ಚ್, ಮಸೀದಿ, ಬಸವ ಮಂದಿರಗಳ ಮೇಲೆ ಕಲ್ಲೆಸೆಯುವವರ ಕೈ ಕತ್ತರಿಸಬೇಕು' ಹೀಗೆ ಗರ್ಜಿಸಿದವರು ಕರ್ನಾಟಕದ ಮುಖ್ಯಮಂತ್ರಿ ಬಿ. ಎಸ್. ಯಡಿಯೂರಪ್ಪ. "ನಮ್ಮ ಧರ್ಮ, ಸಂಸ್ಕೃತಿಗೆ ಅಪಮಾನಗೈಯುವವರ ವಿರುದ್ಧ ಕ್ರಮ ಕೈಗೊಳ್ಳಲು ಪೋಲೀಸರಿಗೆ ಸೂಚಿಸಿದ್ದೇನೆ. ಕೆಲವು ಸ್ವಾರ್ಥಿಗಳು ವ್ಯವಸ್ಥೆಯನ್ನು ಬುಡಮೇಲು ಮಾಡಲು ಪ್ರಯತ್ನ ನಡೆಸುತ್ತಿದ್ದಾರೆ" ಎಂದು ಅವರು ಕಿಡಿಕಾರಿದರು.

**(ಉದಯವಾಣಿ 28-1-2010)**

## 'ಮತ ಬದಲಾವಣೆ, ಜೀವನಕ್ರಮ ಕನಕದಾಸರ ಕಾವ್ಯಕ್ಕೆ ಪ್ರೇರಣೆ'

ಜಾತೀಯತೆಗೆ ಸಂಬಂಧಿಸಿದ ಅನೇಕ ಪ್ರಶ್ನೆಗಳಿಗೆ ಉತ್ತರ ಹುಡುಕುವ ಕಾರಣಕ್ಕಾಗಿ ಕನಕದಾಸರು ಮತಗಳನ್ನು ಬದಲಾಯಿಸಿಕೊಂಡಿದ್ದರು ಎಂದು ಕಾರ್ಕಳ ಭುವನೇಂದ್ರ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಪ್ರೊ। ಅರುಣಕುಮಾರ್ ಅಭಿಪ್ರಾಯಪಟ್ಟಿದ್ದಾರೆ.

ಮತಗಳನ್ನು ಬದಲಾವಣೆ ಮಾಡುತ್ತಾ ತನ್ನ ಆಲೋಚನೆಗಳನ್ನು ವಿಸ್ತರಿಸಿಕೊಂಡ ಕನಕದಾಸರು ಜೀವನಕ್ರಮವನ್ನು ಬದಲಾಯಿಸಿಕೊಂಡಿದ್ದರು. ಈ ಬದಲಾವಣೆಯ ಚಿಂತನಾಕ್ರಮ ಅವರಿಗೆ ಕಾವ್ಯ ಬರೆಯಲು ಪ್ರೇರಣೆ ನೀಡಿತ್ತು ಎಂದು ವಿವರಿಸಿದರು.

ಕನಕದಾಸರು ಬಾಲ್ಯದಲ್ಲಿ ವಿಶೇಷವಾಗಿ ಶಿವತತ್ವದ ಕಡೆಗೆ ಒಲವನ್ನು ತೋರಿಸಿ ನಂತರ ವೈಷ್ಣವ ತತ್ವದ ಕಡೆಗೆ ಆಕರ್ಷಿತರಾಗಿ ತನ್ನ ಮನಸ್ಸನ್ನು ಕೊಟ್ಟವರು. ಮೊದಮೊದಲು ರಾಮಾನುಜಾಚಾರ್ಯರತ್ತ, ತಿರುಮಲೆ ತಾತಾಚಾರ್ಯರತ್ತ ಒಲವು ತೋರಿಸಿ ಕೊನೆಗೆ ಮಾಧ್ವ ತತ್ವಗಳಿಗೆ ಒಲಿದು ವ್ಯಾಸತೀರ್ಥದಿಂದ ದಾಸ ಪಂಥವನ್ನು ಸ್ವೀಕರಿಸಿದವರು.

**(ಉದಯವಾಣಿ 10-3-2010)**

## ಆಸ್ತಿಯಲ್ಲಿ ಮಗಳಿಗೆ ಸಮಪಾಲು

ಪಿತ್ರಾರ್ಜಿತ ಆಸ್ತಿಯಲ್ಲಿ ವಿವಾಹಿತ ಅಥವಾ ಅವಿವಾಹಿತ ಮಹಿಳೆಯರಿಗೆ ಸಮಪಾಲು ನೀಡಬೇಕೆಂದು ಹೈಕೋರ್ಟ್ ವಿಭಾಗೀಯ ಪೀಠ ಮಹತ್ವದ ತೀರ್ಪು ನೀಡಿದೆ.

ವಿವಾಹಿತ ಅಥವಾ ಅವಿವಾಹಿತ ಮಹಿಳೆಗೆ ಪಿತ್ರಾರ್ಜಿತ ಆಸ್ತಿಯಲ್ಲಿ ಸಮಪಾಲು ನೀಡಬೇಕೆಂದು 1956ರ ಹಿಂದೂ ಉತ್ತರದಾಯಿತ್ವ ಕಾಯ್ದೆಗೆ ಕೇಂದ್ರ ಸರ್ಕಾರ ತಿದ್ದುಪಡಿ ಮಾಡಿದ್ದು, ಈ ಕಾಯ್ದೆ ಎಲ್ಲಾ ರಾಜ್ಯಗಳಿಗೂ ಅನ್ವಯವಾಗುತ್ತದೆ ಎಂದು ನ್ಯಾ। ಎನ್. ಕುಮಾರ್ ಹಾಗೂ ನ್ಯಾ। ಎ. ಎನ್. ವೇಣುಗೋಪಾಲ ಗೌಡ ಅವರಿದ್ದ ವಿಭಾಗೀಯ ಪೀಠ ತೀರ್ಪು ನೀಡಿತು.

1956ರ ಹಿಂದೂ ಉತ್ತರದಾಯಿತ್ವ ಕಾಯ್ದೆ ಪ್ರಕಾರ ವಿವಾಹಿತ ಮಹಿಳೆಗೆ ಪಿತ್ರಾರ್ಜಿತ ಆಸ್ತಿಯಲ್ಲಿ ಪಾಲು ಸಿಗುತ್ತಿರಲಿಲ್ಲ. ಆದರೆ ವಿವಾಹಿತ ಪುರುಷನಿಗೆ ಪಿತ್ರಾರ್ಜಿತ ಆಸ್ತಿಯಲ್ಲಿ ಪಾಲು ಪಡೆಯುವ ಹಕ್ಕು ನೀಡಲಾಗಿತ್ತು. ಜತೆಗೆ ಅವಿವಾಹಿತ ಮಹಿಳೆಯೂ ಪಾಲು ಪಡೆಯಲು ಅರ್ಹಳಾಗಿದ್ದಳು. ಈ ಕಾಯ್ದೆಗೆ 2005ರಲ್ಲಿ ತಿದ್ದುಪಡಿ ತಂದ ಅನಂತರ ವಿವಾಹಿತ ಅಥವಾ ಅವಿವಾಹಿತ ಮಹಿಳೆಯರು ಪಿತ್ರಾರ್ಜಿತ ಆಸ್ತಿಯಲ್ಲಿ ಸಮಪಾಲು ಪಡೆಯಬಹುದಾಗಿದೆ. ಆದರೆ ಈ ಕಾಯ್ದೆ ಸಮರ್ಪಕವಾಗಿ ಅನುಷ್ಠಾನಗೊಂಡಿಲ್ಲ ಎಂದು ಆರೋಪಿಸಿ ವೈಯ್ಯಾಲಿಕಾವಲ್ ನಿವಾಸಿ ಪುಷ್ಪಲತಾ ಎಂಬವರು ರಿಟ್ ಅರ್ಜಿ ಸಲ್ಲಿಸಿದ್ದರು.

**(ಉದಯವಾಣಿ 20-3-2010)**

## ಓದಿದ್ದು

## ಐರಿಷ್ ಬಿಷಪರಿಂದ ಪ್ರಮಾದ : ಪೋಪ್

ಮಕ್ಕಳನ್ನು ಲೈಂಗಿಕವಾಗಿ ದುರುಪಯೋಗಿಸಲಾದ ಪ್ರಕರಣಗಳು ನಾಚಿಕೇಗೇಡಿತನ ಹಾಗೂ ವಿಷಾದಕರ ಘಟನೆಗಳಾಗಿವೆ ಎಂದು ಪತ್ರವೊಂದರಲ್ಲಿ ಹೇಳಿರುವ ಹದಿನಾಲ್ಕನೇ ಪೋಪ್ ಬೆನಡಿಕ್ಟ್ ಅವರು, ಐರಿಷ್ ಬಿಷಪರು ತಮ್ಮ ವಿರುದ್ಧದ ಆರೋಪಗಳಿಗೆ ಸ್ಪಂದಿಸುವಲ್ಲಿ ಬಹಳ ಗಂಭೀರ ಪ್ರಮಾದ ಎಸಗಿದ್ದಾರೆ ಎಂದು ಹೇಳಿದ್ದಾರೆ.

'ನೀವು ನಿಜಕ್ಕೂ ಬಹಳ ಗಂಭೀರವಾದ ತಪ್ಪನ್ನು ಮಾಡಿರುವಿರಿ ಮತ್ತು ನಾನು ಅದಕ್ಕಾಗಿ ವಿಷಾದಿಸುತ್ತೇನೆ' ಎಂದು ಪೋಪ್ ಅವರು ಐರಿಷ್ ಕ್ಯಾಥೋಲಿಕ್‌ಗಳಿಗೆ ಸಹಿ ಹಾಕಿ ಬರೆದಿರುವ ಪತ್ರದಲ್ಲಿ ಹೇಳಿದ್ದಾರೆ. ಆ ಪತ್ರವನ್ನು ಬಹಿರಂಗಗೊಳಿಸಲಾಗಿದೆ.

ಪಾದ್ರಿಗಳು ಹಾಗೂ ಧಾರ್ಮಿಕ ಕಾರ್ಯಕರ್ತರು ಮಕ್ಕಳನ್ನು ಲೈಂಗಿಕವಾಗಿ ದುರುಪಯೋಗಿಸಿದ ಆರೋಪಕ್ಕೆ ಗುರಿಯಾದಾಗ ಆ ಬಗ್ಗೆ ವಿಚಾರಣೆ ನಡೆಸಲು ರೂಪಿಸಲಾಗುವ ನ್ಯಾಯ ಮಂಡಳಿಗಳ ಮುಂದೆ ಹಾಜರಾಗಿ ಸಮರ್ಪಕ ಉತ್ತರ ನೀಡಬೇಕು ಎಂದು ಪೋಪ್ ಕಟುವಾಗಿ ಹೇಳಿದ್ದಾರೆ.

(ಉದಯವಾಣಿ 21-3-2010)

## ಉಗ್ರರಿಗೆ ಯಾವುದೇ ಧರ್ಮವಿಲ್ಲ : ಗಡ್ಕರಿ

ಉಗ್ರಗಾಮಿಗಳು ಯಾವುದೇ ಧರ್ಮಕ್ಕೆ ಸೇರಿದವರಲ್ಲ. ಅವರನ್ನು ಹಿಂದೂ ಅಥವಾ ಮುಸ್ಲಿಂ ಎಂದು ಹಣೆಪಟ್ಟಿ ಹಚ್ಚಲಾಗದು ಎಂದು ಬಿಜೆಪಿ ಅಧ್ಯಕ್ಷ ನಿತಿನ್ ಗಡ್ಕರಿ ಹೇಳಿದ್ದಾರೆ.

ತಥಾಕಥಿತ ಜಾತ್ಯತೀತವಾದಿಗಳು ಉದ್ದೇಶಪೂರ್ವಕವಾಗಿ ಉಗ್ರರಿಗೆ ಧರ್ಮದ ಹಣೆಪಟ್ಟಿ ಹಚ್ಚುತ್ತಿದ್ದಾರೆ. 'ಜಾತ್ಯತೀತತೆ' ಶಬ್ದವನ್ನು ಈಗ ಅಲ್ಪಸಂಖ್ಯಾತರ ತುಷ್ಟೀಕರಣಕ್ಕಾಗಿ ಬಳಸಲಾಗುತ್ತಿದೆ ಎಂದವರು ಟೀಕಿಸಿದರು.

ಉಗ್ರಗಾಮಿಗೆ ಜಾತಿ, ಜನಾಂಗ ಅಥವಾ ಧರ್ಮವಿಲ್ಲ. ದೇವರಿಗೆ ಹೆದರುವ ಓರ್ವ ಹಿಂದೂ, ಮುಗ್ಧ ಮುಸ್ಲಿಮನನ್ನು ಕೊಲ್ಲಲಾರ. ಇದೇ ರೀತಿ ಧರ್ಮಭೀರು ಮುಸ್ಲಿಂ, ಮುಗ್ಧ ಹಿಂದೂವನ್ನು ಕೊಲ್ಲಲಾರ. ಆತ ಹಾಗೆ ಮಾಡಿದಲ್ಲಿ, ಆಗ ಆತ ಓರ್ವ ಉಗ್ರಗಾಮಿ ಎಂದೆನಿಸಿಕೊಳ್ಳುತ್ತಾನೆ. ಆತ ಯವುದೇ ಧರ್ಮಕ್ಕೆ ಸೇರಲಾರ ಎಂದರು.

(ಉದಯವಾಣಿ 24-3-2010)

## ನಿಧನ ವಾರ್ತೆ

## ಎಸ್. ಆರ್. ಅಬ್ದುರ್ರವೂಫ್ ಸಾಹೇಬ್

ಭದ್ರಾವತಿಯ ಪ್ರಥಮ ತಲೆಮಾರಿನ ಅಹ್ಮದಿಯರ ಪೈಕಿ ಓರ್ವರಾದ ಮರ್ಹೂಮ್ ಜನಾಬ್ ಎಸ್. ಕೆ. ಅಬ್ದುರ್ರಝಾಕ್ ಅಹ್ಮದಿಯವರ ಪುತ್ರ ಜನಾಬ್ ಎಸ್. ಆರ್. ಅಬ್ದುರ್ರವೂಫ್ ಸಾಹೇಬರು 12-12-2009ರಂದು ದಿವಂಗತರಾದರು. ("ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್")

ಮೃತರು ಪತ್ನಿಯನ್ನೂ ಇಬ್ಬರು ಪುತ್ರರನ್ನೂ ಒಂಬತ್ತು ಮಂದಿ ಪುತ್ರಿಯರನ್ನೂ ಅಗಲಿರುವರು.

ದಿವಂಗತರಿಗೆ ಅಲ್ಲಾಹನು ಮಗ್ಫಿರತನ್ನೂ ಜನ್ನತನ್ನೂ ಕರುಣಿಸಲಿ. ಆಮೀನ್.

*(34ನೇ ಪುಟದಿಂದ)*

ಅಲ್ಲಾಹು ತನ್ನ ಪ್ರವಾದಿಗಳಿಗೂ ಸಂದೇಶವಾಹಕರಿಗೂ ಸಹಾಯ ಮಾಡುತ್ತಾನೆ ಮತ್ತು ಅವರಿಗೆ ಜಯ ನೀಡುತ್ತಾನೆ ಎಂಬುದು ಅಲ್ಲಾಹನು ಮನುಷ್ಯರನ್ನು ಭೂಮಿಯಲ್ಲಿ ಸೃಷ್ಟಿಸಿದ ಕಾಲದಿಂದ ಯಾವಾಗಲೂ ಪ್ರಕಟಿಸುತ್ತಿದ್ದ ಅವನ ನಡೆವಳಿಕೆ ಆಗಿದೆ. ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳುತ್ತಾನೆ: "ಖತಬಲ್ಲಾಹು ಲ ಅಗ್‌ಲಿಬನ್ನ ಅನ ವ ರುಸುಲಿ", ಅಂದರೆ "ನಾನು ಮತ್ತು ನನ್ನ ಸಂದೇಶವಾಹಕರು ಖಂಡಿತವಾಗಿಯೂ ವಿಜಯಶಾಲಿಗಳಾಗುವೆವು ಎಂದು ಅಲ್ಲಾಹನು ವಿಧಿ ಬರೆದಿರುವನು." (58 : 22)

ಸರ್ವಶಕ್ತನಾದ ಅಲ್ಲಾಹುವಿನ ಪವಿತ್ರ ಖುರ್‌ಆನಿನ ಪ್ರಕಾರವೂ ಅಲ್ಲಾಹನ ಪ್ರವಾದಿವರ್ಯರಾದ ಸೈಯ್ಯದ್‌ನಾ ಹ॥ ಮುಹಮ್ಮದ್ ಮುಸ್ತಫಾರ(ಸ) ನುಡಿಮುತ್ತು ಪ್ರಕಾರವೂ ಖಿಲಾಫತಿನಿಂದ ಅನುಗ್ರಹೀತವಾಗಿದೆ ಇಂದು ಅಹ್ಮದಿಯಾ ಮುಸ್ಲಿಂ ಜಮಾಅತ್. ಅಲ್‌ಹಮ್ದುಲಿಲ್ಲಾಹ್. ಲೋಕದಾದ್ಯಂತ ಇಂದು ಅಹ್ಮದಿಯತ್ ಓರ್ವ ಖಲೀಫರ ನಾಯಕತ್ವದಲ್ಲಿ ಪವಿತ್ರ ಖುರ್‌ಆನಿನ ಸುಂದರ ರೂಪವನ್ನು ಜನರಿಗೆ ಮನವರಿಕೆ ಮಾಡಿಕೊಡುತ್ತಲೂ ಹ॥ ಮುಹಮ್ಮದ್ ಮುಸ್ತಫಾರ(ಸ) ಸತ್ಯ ಸಾಕ್ಷ್ಯವನ್ನು ಪ್ರಚಾರ ಮಾಡುತ್ತಲೂ ಶಾಂತಿ ಸೌಹಾರ್ದದಿಂದ ಮುನ್ನಡೆಯುತ್ತಲಿದೆ. ಇದನ್ನು ಕಂಡು ಅಸೂಯೆಪಡುವವರು ಏನು ಹೇಳಿದರೂ ಏನು ಬರೆದು ಪ್ರಚಾರ ಮಾಡಿದರೂ ಅಹ್ಮದಿಯಾ ಮುಸ್ಲಿಂ ಜಮಾಅತಿನ ವಿಜಯವನ್ನು ತಡೆಗಟ್ಟಲು ಸಾಧ್ಯವಿಲ್ಲ; ಖಂಡಿತ.

– ಕೆ. ಎಂ. ಉಮರ್, ಮಡಿಕೇರಿ

# ನಬಿ ಚರಿತ್ರೆ

ಅರೇಬ್ಯ ರಾಜ್ಯದ ಮಕ್ಕಾ ನಗರದಿ
ಕುರೈಶಿ ವಂಶದ ಶಿಶುವಾಗಿ
ಅಲ್ಲಾಹು ಕಳಿಸಿದ ಮುಹಮ್ಮದ್ ನಬಿಯನು
ಮಾನವ ವಂಶದ ಹಿತಕಾಗಿ

ಕತ್ತಲು ಕವಿದು ಅಧರ್ಮ ಬೆಳೆದ
ಮಾನವರೆಲ್ಲರಿಗೂ ಒಟ್ಟಾಗಿ
ಕರುಣ ಕಟಾಕ್ಷದಿ ಅಬ್ದುಲ್ಲ ಆಮಿನ
ದಂಪತಿಗಳಿಗೆ ಮಗನಾಗಿ

ಮಾನವ ಕುಲವು ಮೃಗಗಳ ಹಾದಿಲಿ
ಚಾಚು ತಪ್ಪದೆ ನಡೆದಿತ್ತು
ಮಹಿಳಾ ಶೋಷಣೆ ಶಿಶುಗಳ ಹತ್ಯೆ
ಘೋರ ಪಾಪಗಳೆ ನೆಲೆಸಿತ್ತು

ಸಾರಾಯಿ ರಾಜ ವ್ಯಭಿಚಾರ ಮಂತ್ರಿ
ಜೂಜಾಟ ಪ್ರಜೆಗಳ ಪಾಡಾಯ್ತು
ಸತ್ಯವ ತ್ಯಜಿಸಿ ನೀತಿಯ ತೊರೆದು
ದೇವರನಾಮವೆ ಮರೆತೋಯ್ತು

ಜನರೆಡೆ ವಾಡಿಕೆಲಿರುವಂಥ ದುರ್ನಡೆ
ಕಂಡರು ಮನನೊಂದು ಮರುಗಿದರು
ಜನವಾಸ ತ್ಯಜಿಸಿ ಮೊರೆಹೊಕ್ಕು ದೇವರ
ಧ್ಯಾನದಿ ನಬಿಯುಲ್ಲಾ ಮುಳುಗಿದರು

ಮಾನವ ರಕ್ಷೆಗೆ ದಾರಿಯ ತೋರೆಂದು
ವ್ರತೋಪವಾಸವ ಮಾಡಿದರು
ಹಿರಾ ಗುಹೆಯಲ್ಲಿ ದಿನವಿಡಿ ದೇವರ
ಪಾದದಡೀ ತಾ ಬೇಡಿದರು

ಬಿಡದೆಯೆ ನಲವತ್ತು ದಿನವನು
ಗುಹೆಯಲಿ ಕಂಬನಿ ಗರೆಯುತ ಕಂಪಿಸುತಾ
ಬಿಡುಗಡೆ ಮಾಡು ನೀ ಮನುಷ್ಯರ ಕ್ಲೇಶವ
ಕರುಣೆಯ ತೋರೆಂದು ಬೇಡಿದರು

ಬಳಲಿದ ದಾಸನ ವೇದನೆ ಕಂಡು
ಕೂಡಲೇ ಒಲಿದನು ಸರ್ವೇಶ
ಬಾಚಿ ನೀಡಲು ಉದಯವಾಯಿತು
ವಿಜ್ಞಾನದ ಧರೆ ಆಕಾಶ

ಪವಿತ್ರ ಖುರ್‌ಆನ್ ನಬಿಯರ ಮೂಲಕ
ಲಭಿಸಿತು ನರರಿಗೆ ಬೆಳಕುಗಳು
ಪಾವನವಾಯಿತು ಪಾಮರ ಜೀವನ
ಪಾರಾಯಿತು ಶತ ಕೋಟಿಗಳು

ಕೊಳಕನು ತೊರೆದು ದುರ್ಗಂಧವಳಿಸಿ
ಶಾಂತಿಯ ತಬ್ಬಲು ಬಲವಾಗಿ
ಕರುಣೆಯ ತೋರುತ ಕಳಿಸಿದನಲ್ಲಾಹು
ಮಾನವ ಕುಲಕೆ ನಬಿಯಾಗಿ

ದೇವನ ಸಂದೇಶ ಸಾರಿದ ನಬಿಯುಲ್ಲಾ
ಶಾಂತಿಯ ಬೀಜವ ಬಿತ್ತಿದರು
ದೇವನು ಒಬ್ಬನೆ ವ್ಯರ್ಥವು ಇನ್ನೆಲ್ಲ
ಕಾಂತಿಯ ಕಾಣಿರಿ ದೇವನಲಿ

ಮೈತ್ರಿಯ ಮಂತ್ರವ ಜಪಿಸುತ ನೀವೆಲ್ಲ
ಮಾನವರಾಗಿರಿ ಒಂದಾಗಿ
ಮರೆಯಿರಿ ಹಗೆತನ ಬಾಳಿರಿ ವಿನಯದಿ
ತ್ಯಜಿಸಿರಿ ಅಹಂಭಾವ ಮುಂದಾಗಿ

ಅಜ್ಞಾನ ಕತ್ತಲಿನಡಿಯಲಿ ಮುಳುಗಿದ
ಮಾನವರೆಲ್ಲರಿಗೊಟ್ಟಾಗಿ
ವಿಜ್ಞಾನ ದೀಪ ಪ್ರಕಾಶವ ತೋರುತ
ಕರೆದರು ಒಳಿತಿನ ಕಡೆ ಕೂಗಿ

ದೀನಿನ ಹೂಬನದೊಳಗೇಕತ್ವದ
ಕಹಳೆಯು ಮೊಳಗಿತು ಭುವಿಯೆಲ್ಲ
ಜೀನಿನ ಹೊಳೆಯಲಿ ಹೊನ್ನಿನ ದೋಣಿಗೆ
ಅಂಬಿಗನಾದರು ನಬಿಯುಲ್ಲಾ

ಸಾಗಿತು ಪಯಣವು ದುರಿತವನೆದುರಿಸಿ
ಧರೆಯಲಿ ಎಲ್ಲೆಡೆ ಭರದಲ್ಲಿ
ಸಾರುತ ದೇವನ ಏಕತ್ವ ಗೀತೆಗೆ
ರಾಗವು ಸುಂದರ ರೂಪದಲಿ

ಖಾತಮುನ್ನಬಿಯೀನ್ ಬಿರುದನು ಗಳಿಸಿದ
ಶ್ರೇಷ್ಠ ಪ್ರವಾದಿಯವರೆಂದು
ಕಾತುರದಿಂದಲಿ ಬನ್ನಿರಿ ಎಲ್ಲರು
ಮೋಕ್ಷಕೆ ಇವರೇ ನೆಲೆಯೆಂದು

ಪುಣ್ಯ ಪ್ರವಾದಿಯ ಚರಿತೆಯನೆಲ್ಲ
ವಿವರಿಸಲೆನ್ನಲಿ ಬಲವಿಲ್ಲ
ಪ್ರವಾದನಗೈದ ಭಾಗದಿ ಕೆಲವನು
ಮುಂದಿನ ಗೀತೆಲಿ ಹಾಡುವೆನು

– ಕೆ. ಎಂ. ಉಮರ್, ಮಡಿಕೇರಿ

# ಹಿಂದಿನ ಸಂಚಿಕೆಗಳನ್ನು ತಿರುವಿಹಾಕಿದಾಗ....



## ಸಂಪಾದಕರಿಗೆ ಪತ್ರ

### (ಯುಗರಶ್ಮಿ, ಸಪ್ಟಂಬರ 1976)

ಪ್ರಿಯರೇ,

ತಾವು ವಿಶ್ವಾಸದಿಂದ ಕಳುಹಿಸಿದ್ದ 'ಯುಗರಶ್ಮಿ'ಯ ಮೂರು ಅಮೂಲ್ಯ ಪ್ರತಿಗಳು ದೊರಕಿದುವು. ಇಸ್ಲಾಮಿನ ಬಗ್ಗೆ ತಿಳಿಗನ್ನಡದಲ್ಲಿ ಇಷ್ಟೊಂದು ನಿಖರವಾಗಿ ಬರೆಯುವ ಪತ್ರಿಕೆಯೊಂದು ನನ್ನ ನೆರೆಯೂರಿನಲ್ಲಿಯೇ ಇರುವುದು, ಇದಿಷ್ಟು ದಿನ ನನಗೆ ತಿಳಿದಿರಲಿಲ್ಲ.

**ಬೊಳುವಾರು ಮಹಮದ್ ಕುಂಞಿ,**
ಪುತ್ತೂರು

---

ಮಾನ್ಯ ಸಂಪಾದಕರ ಸ॥ಕ್ಕೆ

ಇಸ್ಲಾಂ ಧರ್ಮದ ಅಭ್ಯಾಸಕ್ಕೆ ಕನ್ನಡದಲ್ಲಿ ಹೊತ್ತಿಗೆಗಳೇ ದುರ್ಲಭವೆನ್ನುವಾಗ, ಇಸ್ಲಾಮಿನ ಸತ್ಯ ಸಂದೇಶವನ್ನು ಬೀರುತ್ತ ನಿಯತಕಾಲಿಕ ಪತ್ರಿಕೆಯೊಂದು 'ಯುಗರಶ್ಮಿ'ಯಾಗಿ ಬರುತ್ತಿರುವುದು, ಕನ್ನಡ ಮಣ್ಣಲ್ಲಿ ಬೆಳೆದ ಅಸಂಖ್ಯ ಮುಸ್ಲಿಂ ಹಾಗೂ ಮುಸ್ಲಿಮೇತರ ಧರ್ಮ ಜಿಜ್ಞಾಸುಗಳಿಗೆ ಒಂದು ವರಪ್ರಸಾದವೇ ಎನ್ನಬೇಕು. ಈ ಅತ್ಯವಶ್ಯ ಹೆಮ್ಮೆಯ ಏಕೈಕ ಪತ್ರಿಕೆ ಉತ್ತರೋತ್ತರ ಅಭಿವೃದ್ಧಿ ಹೊಂದಲಿ ಎಂದು ಆ ಸರ್ವನಿಯಾಮಕನಲ್ಲಿ ಬೇಡುವೆ. ಅಹ್ಮದಿಯೇತರ ಮುಸ್ಲಿಮರ ಅಂಧತೆಗೂ ಇದು ರಶ್ಮಿಯಾಗಲಿ ಎಂಬುದೇ ನನ್ನ ಹಾರೈಕೆ.

........ 'ಯುಗರಶ್ಮಿ'ಯ ರಶ್ಮಿ ಕನ್ನಡದ ಮೂಲೆ–ಮೂಲೆಗಳನ್ನೂ ಬೆಳಗಲಿ.

**ಬಿ. ಮುಹಮ್ಮದ್ ಶಹಾಬುದ್ದೀನ್,**
ರಾಣಿಬೆನ್ನೂರು.

---

### (ಯುಗರಶ್ಮಿ, ದಶಂಬರ 1976)

ಮಿತ್ರರೇ,

...... ದೇವರ ಬಗೆಗೆ, ಅನ್ಯ ಧರ್ಮಗಳ ಕಡೆಗೆ ನಮಗಿರುವ ಅಜ್ಞಾನ ಮಾಡಿದಷ್ಟು ನಷ್ಟ ಬೇರಾವುದೂ ಖಂಡಿತ ಮಾಡಿಲ್ಲ ಎನ್ನುವ ಖಚಿತ ಅಭಿಪ್ರಾಯ ನನ್ನದು. 'ಯುಗರಶ್ಮಿ' ಇಸ್ಲಾಮಿನ ಬಗೆಗೆ ಸ್ಪಷ್ಟ, ಸುಂದರ ಅಭಿಪ್ರಾಯ ನೀಡುತ್ತಿದೆ. ಭೂತಕನ್ನಡಿಯಲ್ಲಿ ಕಾಣುವ ವಿಕೃತ ರೂಪು ಕಂಡು ದಿಗಿಲಾದವರು ಖಂಡಿತ ಇದನ್ನು ನೋಡಬೇಕು. ಇಲ್ಲಿ ಕಾಣುವುದು ಒಳ್ಳೆಯ ಕನ್ನಡಿಯ ಮೇಲಿನ ಸುಂದರ ದೃಶ್ಯ. ಯೇಸು ಕ್ರಿಸ್ತರ ಮರಣದ ಬಗೆಗೆ ಇತಿಹಾಸಕಾರರ ಜಿಜ್ಞಾಸೆಯನ್ನು ಮೊದಲೇ ಗುರುತಿಸಿಕೊಂಡ ನಾನು ಆ ಬಗೆಗೆ 'ಯುಗರಶ್ಮಿ'ಯಲ್ಲಿ ಪ್ರಕಟವಾಗುತ್ತಿರುವ ಲೇಖನ ಮಾಲೆಯನ್ನು ಓದುತ್ತಿದ್ದೇನೆ. ಹೃತ್ಪೂರ್ವಕ ಅಭಿನಂದನೆಗಳು.ಕೃತಜ್ಞತೆಗಳೊಂದಿಗೆ.

**ಪಾ. ಸಂಜೀವ ಬೋಳಾರ, M.A., B.T.**
ಮಂಗಳೂರು

---

ಪ್ರಿಯರೇ,

ತಾವು ಕಳುಹಿಸಿದ ಎರಡು ಸಂಚಿಕೆಗಳೂ ಕೈಸೇರಿವೆ. ತುಂಬಾ ಧನ್ಯವಾದಗಳು. ಭಾವೈಕ್ಯದ ದೃಷ್ಟಿಯಿಂದ ಇಂತಹ ನಿಮ್ಮ ಪ್ರಯತ್ನಗಳು ತುಂಬಾ ಸಹಾಯಕವಾಗಿವೆ. ನಿಮ್ಮ ಈ ಪ್ರಯತ್ನವು ಸ್ತುತ್ಯಾರ್ಹವಾಗಿದ್ದು ಯಶಸ್ವೀ ಪಥದಲ್ಲಿ ಮುನ್ನಡೆಯುವಂತೆ ಸರ್ವಶಕ್ತನಾದ ಭಗವಂತನೊಡನೆ ಪ್ರಾರ್ಥಿಸುತ್ತೇನೆ. ಇತಿ ನಿಮ್ಮ ಸ್ನೇಹಾಭಿಲಾಷಿ,

**ದಾಮೋದರ ಪೈ**
ಪ್ರೆಸಿಡೆಂಟ್, ಲಯನ್ಸ್ ಕ್ಲಬ್, ಬಂಟ್ವಾಳ


---

ತಾವು ಅಭಿಮಾನವಿಟ್ಟು ಕಳುಹಿಸಿದ "ಯುಗರಶ್ಮಿ" ಜುಲಾಯಿ–ಸಪ್ಟಂಬರ ಮತ್ತು ಅದರ ಹಿಂದೆ ಕಳುಹಿಸಿದ ಸಂಚಿಕೆಗಳೂ ಸಹ ಓದಿ ನೋಡಿದೆವು. ಒಳ್ಳೆಯ ವಿಷಯಗಳಿಂದ ಕೂಡಿದ ಲೇಖನಗಳು ಬುದ್ಧಿಶಕ್ತಿಯನ್ನು ಹೆಚ್ಚಿಸಿ ವಿವೇಕಕ್ಕೆ ಬೆಳಕನ್ನು ನೀಡುವಂತಿವೆ. ಸಂಗ್ರಹ ಯೋಗ್ಯವಾದ ತತ್ವಗಳಿಂದೊಡಗೂಡಿದ "ಯುಗರಶ್ಮಿ"ಗೆ ಶುಭಾಗಮನವಾಗುತ್ತಿರಲೆಂದು ಹಾರೈಕೆ.

**ಎಂ. ರಂಗರಾವ್**
ಚಂದಮಾಮ ಸಂಪಾದಕರ ಪರವಾಗಿ, ಮದ್ರಾಸು - 26

# READ AHMADIYYA PERIOICALS

| | |
|---|---|
| **THE REVIEW OF RELIGIONS** | **Annual Subscription : Rs. 150/-**<br>Write to : The Chairman<br>THE REVIEW OF RELIGIONS<br>Qadian - 143516 (Punjab) |
| **BADR**<br>**Urdu Weekly** | **Annual Subscription : Rs. 350/-**<br>Write to : The Manager<br>The BADR Weekly<br>Qadian - 143516 (Punjab) |
| **ANSARULLAH**<br>**Urdu & Hindi Bi-Monthly** | **Annual Subscription : Rs. 100/-**<br>Write to : The Manager<br>ANSARULLAH<br>Qadian - 143516 (Punjab) |
| **MISHKAT**<br>**Urdu Monthly** | **Annual Subscription : Rs. 150/-**<br>Write to : The Manager<br>MISHKAT<br>Qadian - 143516 (Punjab) |
| **SATHYADOOTHAN**<br>**Malayalam Monthly** | **Annual Subscription : Rs. 150/-**<br>Write to : The Manager<br>The SATHYADOOTHAN Monthly<br>G. H. Road, Kozhikode - 673 001 |
| **SATHYAMITHRAM**<br>**Malayalam Bi-Monthly** | **Annual Subscription : Rs. 60/-**<br>Write to : The Manager<br>SATHYAMITHRAM<br>Thavakkara, Kannur (Kerala) |



ಕೇರಳದ ಕೊಡಿಯತ್ತೂರ್‌ನಲ್ಲಿ ನವೀಕರಿಸಲಾದ ಮಸ್‌ಜಿದ್ ಮಹ್‌ಮೂದ್

ಕೊಡಿಯತ್ತೂರ್ : ನವೀಕರಿಸಲಾದ ಮಸ್‌ಜಿದ್ ಮಹ್‌ಮೂದ್ ಉದ್ಘಾಟನೆ ಕಳೆದ ನವೆಂಬರ್ 15ರಂದು ಅಡಿಶನಲ್ ನಾಝಿರ್, ಇಸ್ಲಾಹೋ ಇರ್ಶಾದ್, ಮೌಲಾನಾ ಮುಹಮ್ಮದ್ ಉಮರ್ ಸಾಹೇಬ್‌ರಿಂದ ನೆರವೇರಿಸಲ್ಪಟ್ಟಿತು.

---


## ಇಸ್ಲಾಂ ಧರ್ಮ ತತ್ವಜ್ಞಾನ

ಗ್ರಂಥಕರ್ತ
ಹಝ್ರತ್ ಮಿರ್ಝಾ ಗುಲಾಂ ಅಹ್ಮದ್

ಈ ಕೆಳಗಿನ ಐದು ಪ್ರಶ್ನೆಗಳಿಗೆ ಇಸ್ಲಾಮಿಕ ದೃಷ್ಟಿಯ ಉತ್ತರ :

1. ಮಾನವನ ಶಾರೀರಿಕ, ನೈತಿಕ ಮತ್ತು ಆಧ್ಯಾತ್ಮಿಕ ಸ್ಥಿತಿಗಳು.
2. ಮಾನವನ ಮರಣಾನಂತರದ ಸ್ಥಿತಿ.
3. ಮಾನವನ ಐಹಿಕ ಜೀವಿತೋದ್ದೇಶ ಮತ್ತು ಅದನ್ನು ಗಳಿಸುವ ಮಾರ್ಗಗಳು.
4. ಧರ್ಮ ನಿಯಮಾನುಸರಣೆ ಇಹಪರ ಜೀವಿತದಲ್ಲಿ ಉಂಟುಮಾಡುವ ಫಲಗಳು.
5. ದೈವಿಕ ಜ್ಞಾನ ಸಿದ್ಧಿಯ ಮಾರ್ಗಗಳು.

ಬೆಲೆ : ರೂ. 25/-

## ಸನ್ಮಾರ್ಗ ದರ್ಶಕ

ಗ್ರಂಥಕರ್ತ
ಹಝ್ರತ್ ಮಿರ್ಝಾ ಬಶೀರ್ ಅಹ್ಮದ್

ಅಹ್ಮದಿಯಾ ಜಮಾಅತಿನ ವಿಶ್ವಾಸಾದರ್ಶಗಳ ಬಗ್ಗೆ ತಿಳಿಯಲು ಒಂದು ಉತ್ತಮ ಕೃತಿ.

ಬೆಲೆ : ರೂ. 65/-

ಮೇಲಿನ ಎರಡೂ ಪುಸ್ತಕಗಳಿಗಾಗಿ ಸಂಪರ್ಕಿಸಿರಿ :
**Ahmadiyya Muslim Mission, No. 1, 3rd Cross Road, Wilson Garden, Bangalore - 560 027**

Registered with the Registrar of Newspapers for India No. R.N. 27354/75
Yugarashmi Kannada Quarterly, April - 2010. Price : Rs. 10/-

ದಿನಂಪ್ರತಿ 24 ಗಂಟೆಗಳ ಕಾಲ ಪ್ರಸಾರಗೊಳ್ಳುತ್ತಿರುವ
ಪ್ರಪ್ರಥಮ ಇಸ್ಲಾಮೀ ಟಿ.ವಿ. ಚ್ಯಾನೆಲ್

ಮುಸ್ಲಿಂ ಟೆಲಿವಿಷನ್ ಅಹ್ಮದಿಯಾ
ಇಂಟರ್‌ನೇಶನಲ್

## THE FIRST ISLAMIC SATELLITE CHANNEL

**Broadcasting Round the clock**

| | | | |
|---|---|---|---|
| SATELLITE | : ASIASAT 3S | POLARISATION | : HORIZONTAL |
| POSITION | : 105.50 EAST | SYMBOL RATE | : 26000 MBPS |
| FREQUENCY | : 3760 MHZ | FEC | : 7/8 |
| MIN. DISH SIZE | : 1.8 METRE | | |

E-MAIL : INFO@ALISLAM.ORG WEBSITE : HTTP:WWW.ALISLAM.ORG/MTA.TV




ಅಹ್ಮದಿಯಾ ಮುಸ್ಲಿಂ ಜಮಾಅತಿನ
ವತಿಯಿಂದ ಪ್ರಕಟಿಸಲ್ಪಟ್ಟ

ಪವಿತ್ರ ಖುರ್‌ಆನ್
ಕನ್ನಡ ಭಾಷಾಂತರ

ಬೆಲೆ : ರೂ. **200/-**

ದೊರೆಯುವ ವಿಳಾಸ

AhmadiYya muslim mission
No.1, 3rd Cross Road,
Wilson Garden, Bangalore - 560 027
Phone : 080 - 22246133

Nazarat nashr-o-ishaat
Sadr Anjuman Ahmadiyya
QADIAN - 143516
(PUNJAB)

Edited and Published by Muhammad Yusuf on behalf of Jamath Ahmadiyya at 10-23-1008/1,
Ist Floor, Ansari Road, Mangalore - 575 001.
Printed at 'Karavali Printers', Azizuddin Road, Mangalore on behalf of Jubilee Printing Press, Mangalore.
Typeset at 'We Are Designers', Car street, Mangalore - 575 001